ಹೊಸ ಮನುಷ್ಯ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೧ ಏಪ್ರಿಲ್ - ೨೦೧೧ ಸಂಚಿಕೆ - ೬



ಅಣುಸ್ಥಾವರ

ಮಾನವ ಕುಲಕ್ಕೆ ಹಿತಶತ್ರುವೇ ?

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್ - ೨೦೧೧
ಸಂಪುಟ - ೧೧
ಸಂಚಿಕೆ - ೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

08236 316344

e-mail : janapada@yahoo.com
web: janapada.net

ನಾವು ನರರು

ಸೊಕ್ಕುತಲೆಯ ರೆಕ್ಕೆ ಬಲಿಯು
ದೂಡಿ ನಿಂತ ಕೀಟ
ನಾವು ನರರು; ನೂರು ಕನಸು
ಕುಣಿವ ದಾರುಪೀಠ!

ಇರುವ ಮೂರು ದಿನಕೆ ನೂರು
ಕಲಹ, ಕರುಬು, ಕಾಟ;
ನೂರು ಹಸಿವು, ನೂರು ದಾಹ,
ವಿಷಯದೆಂಜಲೂಟ.

ಸ್ವಾರ್ಥದ ಸೆರೆಮನೆಯಲ್ಲಿಯೆ
ಒಲಿವ, ನಲಿವ ಜೇಟ;
ಎದೆಗು ನಡುವೆ ಕಡಲು!
ಎಂಥ ಹೃದಯ ಕೂಟ!

ಒಂದೆ ಬೆದೆಗೆ ನೂರು ತರದ
ಕಾಳ ಬೆಳವ ಹೂಟ;
ಬಂಜೆ ಹೂವು, ಬರಿಯ ನೋವು
ಬೆಳೆಯುವಂಥ ತೋಟ.

ಎದೆಯು ಬರಿದು, ಬಾಳು ಬರಿದು,
ಬರಿದು ನಮ್ಮ ನೋಟ;
ಅಳವು ನಗುವು, ಸರಸ ವಿರಸ
ಕಣ್ಣು ಮುಚ್ಚಲಾಟ.
ಸಾವಿನೆಡೆಗೆ ಅಂತು ಇಂತು
ನಮ್ಮ ಬಾಳಿನೋಟ!

– ಗೋಪಾಲಕೃಷ್ಣ ಅಡಿಗ

ವಿಚಾರ ದೀಪ್ತಿ

ಇಂದಿನ ಯುವ ಸಮುದಾಯ ಬರೀ ಕ್ರಿಕೆಟ್ ಜಪ ಮಾಡುವುದು ದೇಶದ ಅಭಿವೃದ್ಧಿಯ ಸಂಕೇತವೇ? ಕ್ರಿಕೆಟ್ ವೀಕ್ಷಣೆಯಿಂದಾಗಿ ವಿದ್ಯುತ್ ಪೋಲು. ಸಮಯದ ದುರುಪಯೋಗ. ದೇಶಾದ್ಯಂತ ಆಗಬಹುದಾದ ಅಪವ್ಯಯಗಳೆಷ್ಟು? ಮಾರ್ಚ್-ಏಪ್ರಿಲ್ ತಿಂಗಳಲ್ಲೇ ಪ್ರಮುಖ ಕ್ರಿಕೆಟ್ ಟೂರ್ನಿಗಳನ್ನು ಆಯೋಜಿಸುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಭವಿಷ್ಯವೇನು? (ಈ ವೇಳೆಯಲ್ಲಿ ಪ್ರಮುಖ ಪಬ್ಲಿಕ್ ಪರೀಕ್ಷೆಗಳು ನಡೆಯುತ್ತವೆ.) ಇಂಥ ಸೂಕ್ಷ್ಮ ವಿಚಾರಗಳ ಬಗ್ಗೆ ಚಿಂತನೆಗಳಾಗಬೇಕಿದೆ.

ಇಷ್ಟೆಲ್ಲಾ ಆದಾಯ ಹೊಂದಿರುವ ಕ್ರಿಕೆಟ್ ಪಟುಗಳು ತಮ್ಮ ಗಳಿಕೆಗೆ ತಕ್ಕಂತೆ ಸೂಕ್ತ ಸಮಯಕ್ಕೆ ತೆರಿಗೆ ಪಾವತಿ ಮಾಡುತ್ತಾರಾ? ದೇಶಕ್ಕಾಗಿ ಪ್ರಾಣ ಕೊಡುತ್ತೇವೆ ಎಂದು ಹೇಳುವ ಕ್ರಿಕೆಟ್ ಆಟಗಾರರು ಈ ದೇಶದ ಅಭಿವೃದ್ಧಿಗಾಗಿ ಎಂದಾದರೂ ಒಂದು ಬಿಡಿಗಾಸು ಬಿಚ್ಚಿದ್ದಾರೆಯೇ? ಜನಪರ, ಸರಕಾರಿ ಜಾಹೀರಾತುಗಳಾದ ಪಲ್ಸ್ ಪೋಲಿಯೋ ಮುಂತಾದ ಜಾಯೀರಾತಿನಲ್ಲಿ ಪಾಲ್ಗೊಳ್ಳಲು ಇಂತಿಷ್ಟು ಹಣ ಪಡೆದೇ ಹೋಗುತ್ತಾರೆ. ಪೆಪ್ಸಿ-ಕೋಲಾಗಳ ಜಾಹೀರಾತಿನಲ್ಲಿ ಪಾಲ್ಗೊಳ್ಳುವ ಇವರು ರೈತ ಬೆಳೆಯುವ ಎಳನೀರಿಗೆ ಎಂದಾದರೂ ಪುಕ್ಕಟೆ ಜಾಹೀರಾತು ನೀಡಿದ್ದಾರೆಯೇ? ಒಟ್ಟಾರೆ ಈ ಆಟಗಾರರೆಲ್ಲರೂ ಕಾರ್ಪೊರೇಟ್ ವಲಯದ ಲಾಭ ಗಳಿಕೆಯ ಸರಕುಗಳಾಗಿದ್ದಾರೆಯೇ ವಿನಾ ಜನಸಾಮಾನ್ಯರ ಉದ್ಧಾರಕ್ಕೆ ಇವರ ಕೊಡುಗೆ ಶೂನ್ಯ.

ದೇಶೀಯ ಕ್ರೀಡೆಗಳಾದ ಹಾಕಿ, ಕಬ್ಬಡಿ, ಫುಟ್ಬಾಲ್, ಒಲಂಪಿಕ್ ಆಟಗಳು, ಹಳ್ಳಿಗಾಡಿನ ಆಟಗಳಿಗೆ ಸಿಗದ ಮನ್ನಣೆ, ಪ್ರಾಯೋಜಕರು ಕ್ರಿಕೆಟ್‌ಗೆ ಮಾತ್ರ ಈ ಪರಿ ಹಣ ಸುರಿಯಲು ಮುಂದಾಗಿರುವುದು ಕಂಡರೆ, ಕ್ರಿಕೆಟ್ ಆಟದ ವಾಣಿಜ್ಯೀಕರಣ ಸುಲಭವಾಗಿ ಅರ್ಥವಾಗುತ್ತದೆ.

ಈ ಟಿ-೨೦ ಕ್ರಿಕೆಟ್ ಪಂದ್ಯಗಳು ಶುರುವಾದ ನಂತರ ಕ್ರಿಕೆಟ್ ಆಟವಂತೂ ಪಕ್ಕಾ ಬಿಸಿನೆಸ್ ಆಗಿದೆ. ಈ ಹಿನ್ನೆಲೆಯಲ್ಲಿ ಕ್ರಿಕೆಟ್ ಆಟಗಾರರ ಗಳಿಕೆ, ಸಂಪತ್ತು, ವಿಶ್ವದಲ್ಲೇ ಶ್ರೀಮಂತ ಸಂಸ್ಥೆಯಾದ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಹಣಕಾಸು ವ್ಯವಹಾರಗಳನ್ನು ಸರಕಾರ ನೇರವಾಗಿ ನಿರ್ವಹಿಸಲು ಇದು ಸಕಾಲ.

ಮನರಂಜನೆ ಎನ್ನುವುದು ಎಲ್ಲರಿಗೂ ಅವಶ್ಯಕ ನಿಜ. ಆದರೆ ಮನರಂಜನೆಯ ನೆಪದಲ್ಲಿ ಕೆಲವು ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಿದೆ. ಕ್ರಿಕೆಟ್ ಆಡಿಸುತ್ತಿರುವುದರಿಂದ, ಆಡುತ್ತಿರುವುದರಿಂದ ಆಟವನ್ನು ವೀಕ್ಷಿಸುತ್ತಿರುವುದರಿಂದ ಆಗುತ್ತಿರುವ ಲಾಭ ಯಾರಿಗೆ? ನಷ್ಟ ಯಾರಿಗೆ?

– *ಮಾರುತಿ. ಎಚ್, ಉಪನ್ಯಾಸಕರು*

(ಸಾಭಾರ : ವಿಜಯಕರ್ನಾಟಕ)

* * *

ಅಣುಸ್ಥಾವರ ಮಾನವ ಕುಲಕ್ಕೆ ಹಿತಶತ್ರುವೇ ?

– ಸುರೇಂದ್ರ ಕೌಲಗಿ

ಮನುಕುಲಕ್ಕೆ ಅಣುಸ್ಥಾವರ ಹಿತಶತ್ರುವೇ? ಎಂಬ ಪ್ರಶ್ನೆಗೆ ೨೦೧೧ ಮಾರ್ಚ್ ೧೧ರಂದು ಜಪಾನಿನಲ್ಲಿಯ ಅತ್ಯಾಧುನಿಕ ತಂತ್ರಜ್ಞಾನಯುಕ್ತ ಅಣುಸ್ಥಾವರಗಳೆಂದು ಕರೆಯಲಾಗುತ್ತಿದ್ದು ಜಪಾನಿನಲ್ಲಿಯ ಪುಕೊಶಿಮಾದಲ್ಲಿಯ ಅಣುಸ್ಥಾವರಗಳು ಉತ್ತರಕೊಟ್ಟಿವೆ! ಉತ್ತರವೇನೆಂದರೆ ಅಣುಸ್ಥಾವರಗಳ ನಿರ್ಮಾಣದ ತಂತ್ರಜ್ಞಾನಿ ನಿರ್ಮಾತೃಗಳಿಗೆ ಈಗ ಗೊತ್ತಿರುವ ನಿರ್ಮಾಣದ ತಂತ್ರ ಯಾವುದೇ ಪ್ರಕೃತಿ ವಿಕೋಪಗಳ ಮತ್ತು ಮಾನವ ತಪ್ಪುಗಳನ್ನು ಎದುರಿಸಿಕೊಂಡೂ ವಿದ್ಯುತ್‌ಶಕ್ತಿ ಉತ್ಪಾದನೆಯ ತಮ್ಮ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬಲ್ಲವು ಎಂಬ ಮಾತನ್ನು ಸದ್ಯಕ್ಕಂತೂ ಹುಸಿ ಮಾಡಿವೆ; ಹತ್ತಾರು ವರ್ಷಗಳ ಹಿಂದೆ ಡಾ॥ ರಾತ್ ಮುಸ್ಸನ್ ಎಂಬ ತಜ್ಞರು ಅಣುಸ್ಥಾವರಗಳಲ್ಲಿ ಅಪಘಾತದ ಸಾಧ್ಯತೆ ಬಿಲಿಯನ್ನಿನಲ್ಲಿ ಒಂದು ಭಾಗ ಎಂದು ಅಂದಾಜು ಮಾಡಿದ್ದರು; ಈಗ ಅಂತಹ ನಂಬಿಕೆ ಯಾವ ವಿಜ್ಞಾನಿಯಲ್ಲೂ ಇಲ್ಲ. ಈಗ ಪ್ರಪಂಚದಲ್ಲಿರಬಹುದಾದ ಸುಮಾರು ೪೦೦ಕ್ಕೂ ಹೆಚ್ಚು ಅಣುಸ್ಥಾವರಗಳಲ್ಲಿ ಸುಮಾರು ೧೫೨ಕ್ಕಿಂತಲೂ ಹೆಚ್ಚು ಸ್ಥಾವರಗಳಲ್ಲಿ ಅಪಘಾತವಾಗಿದೆ. ಇವುಗಳಲ್ಲಿ ಅನೇಕ ತುಂಬಾ ಮುಂದುವರೆದ ರಾಷ್ಟ್ರಗಳಲ್ಲಿಯೇ ಆಗಿವೆ. ಇದಕ್ಕೊಂದು ಉದಾಹರಣೆ ರಷ್ಯಾದ ಚೆರ್ನೋಬಿಲ್‌ನಲ್ಲಿಯ ಅಣುಸ್ಥಾವರದಲ್ಲಿಯ ________ರಲ್ಲಿಯ ದುರಂತ; ಅದು ಆಗಿನ ಕಾಲಕ್ಕೆ ಅತ್ಯಂತ ಹೊಸದಾಗಿತ್ತಲ್ಲದೆ ಈ ಮೊದಲು ಆಗಿದ್ದ ಅಪಘಾತಗಳನ್ನು ಗಮನದಲ್ಲಿಟ್ಟುಕೊಂಡು ಪಾಠ ಕಲಿತು ರಚಿಸಲಾಗಿದ್ದ ಸ್ಥಾವರ ಅದಾಗಿತ್ತು. ಅಮೇರಿಕದ ಅಣು ವಿಜ್ಞಾನಿಗಳು ಭೇಷ್ ಅಂದಿದ್ದರು. ಆಗ ಅಲ್ಲಿ ಉಂಟಾದ ಅಪಘಾತದ ಕೆಟ್ಟಕನಸು ಇಂದೂ ಮರೆತಿಲ್ಲ. ಅದೊಂದು ರೀತಿಯಲ್ಲಿ ಅಣುಬಾಂಬ್ ಸ್ಫೋಟವೇ ಆಗಿತ್ತು.

ಈಗ ಜಪಾನಿನಲ್ಲಿ ಫಕೋಶಿಮಾದಲ್ಲಿ ಆಗಿರುವ ಅಣುಸ್ಥಾವರಗಳಲ್ಲಿಯ ಅಪಘಾತದ ಪ್ರಮಾಣ ಇನ್ನೂ ನಿಖರವಾಗಿ ಗೊತ್ತಾಗಿಲ್ಲ. ನಿಧಾನವಾಗಿ ಬೆಳಕಿಗೆ ಬರುತ್ತಿದೆ.

ಒಂದು ವೇಳೆ ಅಲ್ಲಿಯ ಅಣುಸ್ಥಾವರಗಳಿಂದ ಹೊರಸೂಸಿದ ವಿಕಿರಣಗಳಿಂದ ಆದ ಅಪಾಯದ ಪರಿಣಾಮ ಚೆರ್ನೋಬಿಲ್‌ನಲ್ಲಿ ಆದ ಅಪಾಯಕ್ಕಿಂತ ಕಡಿಮೆಯಾದರೆ ಅದಕ್ಕೆ ಕಾರಣ ಜಪಾನೀಯರಲ್ಲಿ ಇರುವ ಹೋರಾಟದ ಮನೋಭಾವ, ಶಿಸ್ತು ಮತ್ತು ವಿವಿಧ ಪ್ರಕಾರದ ಪರಿಕರಗಳ ಲಭ್ಯತೆ ಹಾಗೂ ಆಡಳಿತದಲ್ಲಿಯ ಸಮನ್ವಯತೆ ಇತ್ಯಾದಿಗಳು. ಒಂದು ವೇಳೆ ಭಾರತದಲ್ಲಿಯ ಯಾವುದೇ ಪರಮಾಣು ಸ್ಥಾವರದಲ್ಲಿ

ಅವಘಡ ಸಂಭವಿಸಿದರೆ ಆಗುವ ದುರಂತ ಊಹಿಸಲಾಗದಷ್ಟಾಗಿರುತ್ತದೆ. ಈಗ ಕಟ್ಟಲಾಗುತ್ತಿರುವ ಪ್ರತಿಯೊಂದು ಅಣುಸ್ಥಾವರ ಮಾನವಕುಲದ ಹಿತಶತ್ರುವೇ ಆಗಿದೆ. ಇಂದಿನ ಅಣುಸ್ಥಾವರಗಳು ಪ್ರಕೃತಿ ವಿಕೋಪಗಳ ಅಘಾತದ ಜೊತೆಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ದಾಳಿಯ ಆಘಾತವನ್ನೂ ಎದುರಿಸಬೇಕಿದೆ. ಯಾವ ಅಣುಶಕ್ತಿಯನ್ನು ಸ್ಥಾವರಗಳಲ್ಲಿ ಶೇಖರಿಸಿ ವಿದ್ಯುತ್‌ಶಕ್ತಿಯನ್ನು ಉತ್ಪಾದಿಸಲಾಗುತ್ತಿದೆಯೋ ಅದೇ ಅಣುಶಕ್ತಿಯನ್ನು ಉಪಯೋಗಿಸಿ ಬಾಂಬುಗಳನ್ನೂ ತಯಾರಿಸಲಾಗುತ್ತಿದೆ. ಒಂದು ಅಣುಬಾಂಬ್ ಸ್ಫೋಟ ಎಷ್ಟು ಭಯಂಕರವಾಗಿರುತ್ತದೆಂಬುದಕ್ಕೆ ೧೯೪೫ರಲ್ಲಿ ಜಪಾನಿನ ಹಿರೋಶಿಮಾ ಮತ್ತು ನಾಗಾಸಾಕಿ ಪಟ್ಟಣಗಳ ಮೇಲೆ ಬಿದ್ದ ಬಾಂಬುಗಳೇ ಸಾಕ್ಷಿಯಾಗಿವೆ. ಈಗ ಜಗತ್ತಿನ ಪ್ರತಿಯೊಂದು ದೇಶದಲ್ಲಿ ಅಣುಬಾಂಬ್, ಹೈಡ್ರೋಜನ್ ಬಾಂಬ್, ಸೂಪರ್‌ಬಾಂಬ್‌ಗಳ ರಾಶಿಯೇ ಇದೆ. ಯಾವುದೇ ಕಾರಣಕ್ಕೆ ಜಾಗತಿಕ ಯುದ್ಧವಾದರೆ ಆ ಯುದ್ಧದಲ್ಲಿ ಮೊಟ್ಟ ಮೊದಲ ಗುರಿ ಈ ಅಣುಸ್ಥಾವರಗಳೇ ಆಗುತ್ತವೆ; ಪ್ರಾದೇಶಿಕ ಯುದ್ಧಗಳಲ್ಲಿ ಈ ಸಂಭವ ಇದ್ದೇ ಇದೆ. ಏಶಿಯಾ ಖಂಡದ ರಾಜಕೀಯ ಪರಿಸ್ಥಿತಿಯನ್ನು ಗಮನಿಸೋಣ. ದಕ್ಷಿಣ ಕೊರಿಯಾ–ಉತ್ತರ ಕೊರಿಯಾದ ಮಧ್ಯ ವೈಮನಸ್ಸು ಇದೆ; ಚೀನಾ ಮತ್ತು ತೈವಾನ್ ಮಧ್ಯ ವೈಮನಸ್ಸು ಇದೆ; ಭಾರತ–ಪಾಕಿಸ್ತಾನದ ಮಧ್ಯ; ಭಾರತ–ಚೀನಾ ಮಧ್ಯ ವೈಮನಸ್ಸು ಇದೆ. ಅಮೇರಿಕಾ–ರಶಿಯಾ; ಚೀನಾ–ಅಮೇರಿಕಾ ಮಧ್ಯ ವೈಮನಸ್ಸು ಇದೆ. ಈ ಪ್ರತಿಯೊಂದು ದೇಶವೂ ಅಗಾಧ ಪ್ರಮಾಣದಲ್ಲಿ ಅಣ್ವಸ್ತ್ರಗಳನ್ನು ಹೊಂದಿವೆ. ಉದಾಹರಣೆಗೆ ಅಮೇರಿಕಾದ ಬಳಿ ೫,೨೦೦, ರಷ್ಯಾದ ಬಳಿ ೧೪,೦೦೦ ಇವೆ; ಫ್ರಾನ್ಸ್ ಬಳಿ______ ಚೀನಾ ೮೦೦, ಪಾಕಿಸ್ಥಾನ ಬಳಿ ೫೦ ಅಣ್ವಸ್ತ್ರಗಳಲ್ಲದೆ ೮೦೦ ಕಿಲೋಗ್ರಾಂ ಸಂಸ್ಕರಿತ ಯುರೇನಿಯಂ ಸಂಗ್ರಹವಿದೆ. ಇಸ್ರೇಲ್ ಬಳಿ ೩೦೦ ಅಣ್ವಸ್ತ್ರಗಳಿವೆ. ಇರಾನ್, ಇರಾಕ್ ಕೂಡ ಅಣ್ವಸ್ತ್ರಗಳನ್ನು ಹೊಂದಿವೆ. ಇಷ್ಟು ಅಗಾಧ ಪ್ರಮಾಣದಲ್ಲಿ ಸಂಗ್ರಹವಾಗಿರುವ ಅಣ್ವಸ್ತ್ರಗಳ ಗುರಿ ಎಲ್ಲ ದೇಶಗಳಲ್ಲಿಯ ಅಣುಸ್ಥಾವರಗಳೇ ಆಗಿರುತ್ತವೆ. ಅಣುಸ್ಥಾವರದ ಮೇಲೆ ಬಾಂಬ್ ಬಿದ್ದು ಆ ಸ್ಥಾವರ ಸ್ಫೋಟಗೊಂಡರೆ ಆಗಬಹುದಾದ ಅನಾಹುತಗಳನ್ನು ಈ ರೀತಿ ವರ್ಣಿಸಲಾಗಿದೆ:–

ಪ್ರತಿಯೊಂದು ಅಣುಸ್ಥಾವರವೂ ೫೦,೦೦೦ ಕೆ.ಜಿ.ಗಳಿಂದ ೧,೦೦,೦೦೦ ಕೆ.ಜಿ. ವಿಕರಣ ವಸ್ತುಗಳು ಒಂದೇ ಕಡೆ ಗುಡ್ಡೆ ಹಾಕಿರುವ, ಇಂದೋ ನಾಳೆಯೋ ಭಾರಿ ಅಪಘಾತಕ್ಕೆ ತುತ್ತಾಗಬಹುದಾದ, ಹತ್ತಾರು ನೂರಾರು ಪೀಳಿಗೆಗಳಿಗೆ ಸಾವು, ನೋವು, ರೋಗಗಳನ್ನು ಹಂಚಬಹುದಾದ ಕೇಂದ್ರ. ಹಲವಾರು ಕಾರಣಗಳಿಂದ ಸ್ಥಾವರ ಸಿಡಿಯುವ ಸಾಧ್ಯತೆಗಳುಂಟು. ಭಾರಿ ಭೂಕಂಪ, ಬಾಂಬಿನ ದಾಳಿ, ಭಯೋತ್ಪಾದಕರ ಒಳಸಂಚು, ಚಾಲಕರುಗಳಿಂದ ಅಕಸ್ಮಾತ್ ಸಂಭವಿಸುವ ಸಣ್ಣ ತಪ್ಪುಗಳು ಅಥವಾ ಮಾನವ ಕುಲದ ಮೇಲೆ ದ್ವೇಷ ಬಂದಿರುವ ಒಬ್ಬ ವಿಜ್ಞಾನಿಯ ಕೋಪ ಇಂತಹ ಯಾವುದೇ ಒಂದು ಕಾರಣದಿಂದ ಸ್ಥಾವರಕ್ಕೆ ಬೆಂಕಿ ಬಿದ್ದು, ಭಾರೀ ವಿಕಿರಣ ವಸ್ತುಗಳ ಮೋಡ ಹತ್ತಾರು ಮೈಲಿ ದೂರ ಇರುವ ಊರುಗಳಲ್ಲೆಲ್ಲಾ

ವಿಕಿರಣದ ಮಳೆ ಸುರಿಸಬಹುದು. ಅಮೇರಿಕಾದ ಮೂರು ಮೈಲಿ ದ್ವೀಪದಲ್ಲಾದ ಅಪಘಾತ ಜನಸಂದಣಿ ಹೆಚ್ಚಿಲ್ಲದ ಸ್ಥಳದಲ್ಲಾಯಿತು. ಚೆರ್ನೋಬಿಲ್ ದುರಂತ ಡಾ॥ ಜಾನ್‌ಗಾಫ್‌ಮನ್ ಎಂಬ ಕ್ಯಾಲಿಫೋರ್ನಿಯಾ ವಿಜ್ಞಾನಿಯ ಪ್ರಕಾರ ಇನ್ನು ೭೦ ವರ್ಷಗಳ ತನಕ ೧೦ ಲಕ್ಷ ಜನರು ನಿಧಾನವಾಗಿ ಕ್ಯಾನ್ಸರ್, ಏಡ್ಸ್ ಮುಂತಾದ ರೋಗಗಳಿಂದ ನರಳಿ ಸಾಯುವುದಕ್ಕೆ ಕಾರಣವಾಗಿದೆ. ಪರಮಾಣು ಸ್ಥಾವರಗಳ ಸಿಡಿತದಿಂದಾಗುವ ಹಾನಿ, ಭೋಪಾಲ್ ವಿಷಾನಿಲ ದುರಂತಕ್ಕಿಂತಲೂ ಹೆಚ್ಚು ಘೋರ. ಆದರೆ ಒಮ್ಮೆಗೆ ಸಾವಿರಾರು ಜನ ಸಾಯುವುದಿಲ್ಲ. ಸಾವು ನಿಧಾನವಾಗಿ, ಹಂತ ಹಂತವಾಗಿ, ಹಲವಾರು ಪೀಳಿಗೆಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಇಂದು ಅಣುಸ್ಥಾವರಗಳ ನಿರ್ಮಿತಿಯಲ್ಲಿ ಹೈಡ್ರೋಜನ್ ಬಾಂಬ್ ಮತ್ತು ಸೂಪರ್‌ಬಾಂಬ್‌ಗಳ ದಾಳಿಯನ್ನು ತಡೆಯುವ ಸಾಮರ್ಥ್ಯವಿಲ್ಲ. ಸುತ್ತಲೂ ನಿರಂತರ ವಿವಿಧ ಬಗೆಯ ದಾಳಿಗಳ ಸ್ಥಿತಿಯಲ್ಲಿ ನಾವು ಅಣುಸ್ಥಾವರಗಳನ್ನು ಏತಕ್ಕಾಗಿ ನಿರ್ಮಿಸುತ್ತಿದ್ದೇವೆ? ಮುಖ್ಯವಾಗಿ ವಿದ್ಯುತ್‌ಶಕ್ತಿಗಾಗಿ. ವಿದ್ಯುತ್‌ಶಕ್ತಿ ಬೇಕಿರುವುದು ಸುಖಮಯ ಜೀವನಕ್ಕಾಗಿ. ಇಂದು ಮಾನವ ಜೀವನ ವಿದ್ಯುತ್‌ಶಕ್ತಿಯಿಲ್ಲದೆ ನಡೆಯುವುದೇ ಇಲ್ಲ ಎಂಬಷ್ಟರಮಟ್ಟಿಗೆ ವಿದ್ಯುತ್‌ಶಕ್ತಿಯ ಮೇಲೆ ಅವಲಂಬಿತವಾಗಿದೆ. ಇದರ ಪರಿಣಾಮ ಎಷ್ಟು ವಿಚಿತ್ರವಾಗಿದೆಯೆಂದರೆ ವಿದ್ಯುತ್‌ಶಕ್ತಿಗಾಗಿ ಅಣುಸ್ಥಾವರ. ಅಣುಸ್ಥಾವರದಲ್ಲಿ ಮೃತ್ಯು ದೇವತೆಯ ಆವಾಸ! ಮನುಷ್ಯ ತನ್ನ ಸುಖಜೀವನಕ್ಕಾಗಿ ತನ್ನ ಪ್ರಾಣವನ್ನೂ ಬಲಿಕೊಡಲು ಸಿದ್ಧನಾಗಿದ್ದಾನೆಂದೇ ಹೊರತು, ಸುಖಜೀವನವನ್ನಲ್ಲ! ಹಿತಶತ್ರುವೆಂದು ಸಿದ್ಧವಾಗಿರುವ ಅಣುಸ್ಥಾವರಗಳ ಸಂಕೋಲೆಯಿಂದ ಬಿಡುಗಡೆಹೊಂದಬೇಕಾದ ಕಾಲ ಬಂದಿದೆ. ಆ ಪ್ರಯತ್ನದ ಮೊದಲ ಅಂಗವಾಗಿ ಇರುವ ಕ್ರಮವೆಂದರೆ ಪ್ರತಿಯೊಬ್ಬರೂ ಸರಳ ಜೀವನನಡೆಸುವತ್ತ ತೀವ್ರ ಗಮನ ಹರಿಸಬೇಕು.

* * *

(ಕಳೆದ ಸಂಚಿಕೆಯಿಂದ ಮುಂದುವರೆದದ್ದು...)

ಒಂದಾಗಿ ಒಳ್ಳೆಯವರಾಗಿ

– ವಿನೋಬಾ

ಇನ್ನು ಎರಡನೇ ಮಾತು. ಒಳ್ಳೆಯವರಾಗುವುದರ ಬಗ್ಗೆ. ಒಂದಾಗಿ ಬಿಟ್ಟರೆ ಒಳ್ಳೆಯವರಾದಂತೆಯೇ. ಆಮೇಲೆಯೂ ಕೂಡ ಕೆಲ ಕೆಟ್ಟತನಗಳಿದ್ದರೆ ಅವುಗಳನ್ನು ಬಿಡಬೇಕಾಗುವುದು. ನನ್ನ ಭೇಟಿಗಾಗಿ ಕೆಲವರು ತುಂಬ ಶ್ರದ್ಧೆಯಿಂದ ಬಂದಿದ್ದರು. ಆದರೆ ಅವರ ಕಿವಿಯ ಮೇಲೆ ಬೀಡಿ ನೋಡಿದೆ. ಕಿವಿಗಳಿರುವುದು ಹರಿಕಥೆ ಕೇಳುವುದಕ್ಕಾಗಿಯೇ ಹೊರತು ಬೀಡಿ ಇಡುವುದಕ್ಕಲ್ಲ. ಕೆಟ್ಟ ವ್ಯಸನಗಳನ್ನು ಬಿಡಬೇಕಾಗುತ್ತದೆ. ದೇವಿ ಮತ್ತು ದೇವತೆಗಳಿಗೆ ಹೆಂಡ ಕೊಡಬೇಕೆಂದು ಕೆಲವರು ಹೇಳುತ್ತಾರೆ. ಇದು ಪೂರಾ ತಪ್ಪು. ಇದು ಶಾಸ್ತ್ರಗಳಿಗೆ ಪೂರ್ಣತಃ ವಿರುದ್ಧ. ದೇವರು ಹೆಂಡ ಕೇಳುವುದಿಲ್ಲ. ಅವರೇನು ಬಯಸುತ್ತಾರೆಂಬುದು ನಿಮಗೆ ಗೊತ್ತಿದೆ. ಕೆಲವರು ಪ್ರೇಮ ಭಾವನೆಯಿಂದ ನನ್ನ ಬಳಿ ಬಂದರು ಮತ್ತು ಹೂ-ಹಣ್ಣು ಕೊಟ್ಟು ಹೋದರು. ಇದೇ ರೀತಿ ದೇವರಿಗೆ ಹೂ-ಹಣ್ಣು ಕೊಡಬೇಕು. ಇದು ನಿಮಗೆ ಗೊತ್ತು. ಹಾಗಿಲ್ಲವಾದರೆ ನೀವು ನನಗೂ ಹೆಂಡವನ್ನೇ ಕೊಡುತ್ತೀರಿ. ಯಾವನು ಈ ಪದ್ಧತಿಯನ್ನು ಪ್ರಾರಂಭಿಸಿದನೋ ಅವನು ರಾಕ್ಷಸನಾಗಿದ್ದಿರಬಹುದು. ಆದ್ದರಿಂದ ನೀವು ಇದೆಲ್ಲವನ್ನು ಬಿಡಬೇಕಾಗುವುದು. ಹಳ್ಳಿಯ ಜನರೆಲ್ಲ ಭಕ್ತರಾಗಬೇಕೆಂಬುದು ನನ್ನ ಇಚ್ಛೆ. ಪ್ರತಿದಿನ ದೇವರ ಪ್ರಾರ್ಥನೆ ಮಾಡಲಿ. ರೈತನ ಕೆಲಸದೊಂದಿಗೆ ದೇವರ ಸಂಬಂಧ ಇರುವಂತೆ ನಗರವಾಸಿಗಳದು ಇರುವುದಿಲ್ಲ. ಬೆಳೆ ಹೆಚ್ಚಾಗಲಿ ಅಥವಾ ಕಡಿಮೆಯಾಗಲಿ ನಗರವಾಸಿಗಳಿಗೆ ಅದರಿಂದೇನೂ ತೊಂದರೆಯಾಗುವುದಿಲ್ಲ. ಆದ್ದರಿಂದ ಹಳ್ಳಿಗರು ನಗರವಾಸಿಗಳ ಕೆಟ್ಟ ಚಟಗಳನ್ನು ಅನುಕರಣೆ ಮಾಡಿದಲ್ಲಿ ಕಷ್ಟಕ್ಕೆ ಈಡಾಗುವರು.

ನಾವು ಒಟ್ಟಿಗೆ ಸೇರಿ ಕೆಲಸ ಮಾಡಬೇಕಾಗುವುದು. ನಮ್ಮ ಬಟ್ಟೆಯನ್ನು ನಮ್ಮ ಕೈಯಿಂದ ತಯಾರಿಸಬೇಕು. 'ಪರಾಧೀನನು ಸ್ವಪ್ನದಲ್ಲೂ ಸುಖಿಯಲ್ಲ' ಎಂದು ತುಳಸೀದಾಸ್ ಹೇಳಿದ್ದಾರೆ. ಹೊರಗಿನಿಂದ ಬಟ್ಟೆ ಖರೀದಿಸಿದಲ್ಲಿ ಪರಾಧೀನರಾಗುವೆವು. ನೂಲುವ ಕೆಲಸವನ್ನು ಯಾರು ಬೇಕಾದರೂ ಮಾಡಬಹುದು. ಮುಂದೆ ಹಳ್ಳಿಯಲ್ಲಿ ನೂಲುಗಾರಿಕೆ, ಹಂಜಿಮಾಡುವುದು, ನೇಯ್ಗೆ, ಬಣ್ಣಹಾಕುವುದು, ಹೊಲಿಗೆ ಇತ್ಯಾದಿ ಎಲ್ಲ ಕೆಲಸಗಳು ನಡೆಯುವವು. ಭೂ ಹಂಚಿಕೆಯೊಂದಿಗೆ ಗ್ರಾಮೋದ್ಯೋಗದ ಅಗತ್ಯ ಇವೆರಡನ್ನು ನಾನು 'ಸೀತಾರಮ್' ಎಂದು ಕರೆಯುತ್ತೇನೆ. ಭೂದಾನ ಯಜ್ಞ ಸೀತೆ. ಗ್ರಾಮೋದ್ಯೋಗ ರಾಮ. ಈ ರೀತಿ 'ಸೀತಾರಾಮ್, ಸೀತಾರಾಮ್' ನಡೆದಲ್ಲಿ ಹಳ್ಳಿಯಲ್ಲಿ ಯಾರೂ ದುಃಖದಿಂದ ಇರಲಾರರು.

ಹಳ್ಳಿ-ಹಳ್ಳಿಯಲ್ಲಿ ಒಳ್ಳೆ ಬೆಳೆ ಬರಲಿ, ಮನೆ-ಮನೆಯಲ್ಲಿ ಚರಕಾ ನಡೆಯಲಿ, ಮನೆ-ಮನೆಯಲ್ಲಿ ಹಸು, ಎತ್ತು ಇರಲಿ ಎಲ್ಲ ಮಕ್ಕಳಿಗೆ ಬಹಳಷ್ಟು ಹಾಲು ಸಿಗಲಿ. ಪ್ರತಿಯೊಬ್ಬರ ಬಳಿ ಉಪಕರಣ ಇರಲಿ, ಹಳ್ಳಿಗೆ ಯಾರಾದರೂ ಬಂದರೆ ಅವರ ಊಟಕ್ಕಾಗಿ ಪ್ರತಿಮನೆಯಲ್ಲಿ ಬಹಳಷ್ಟು ಕಾಳು ಇರಲಿ. ಇವೆಲ್ಲವೂ ಇಡೀ ಹಳ್ಳಿಯಲ್ಲಿ

ಬಹಳಷ್ಟು ಇರಲಿ. ಆದರೆ ಹಣ ಕಡಿಮೆ ಇರಲಿ ಇದು ನನ್ನ ಇಚ್ಛೆ. ಲೂಟಿ ಮಾಡಲು ಅನುಕೂಲವಾಗಲೆಂದು ಹಣವನ್ನು ನಿರ್ಮಿಸಲಾಗಿದೆ.

ರಾಮಾಯಣ, ಭಾಗವತ, ಗೀತೆ ಓದಬೇಕಾಗಿರುವುದರಿಂದ ನಾವು ಓದು ಬರಹ ಕಲಿಸಬೇಕಿದೆ. ಇಲ್ಲಿಯ ಜನರಲ್ಲಿ ಆತ್ಮವಿದ್ಯೆ ಬಂದುಬಿಟ್ಟರೆ ಜಗತ್ತಿನಲ್ಲಿ ಅವರನ್ನು ಯಾರೂ ಗೆಲ್ಲಲಾರರು. ಈ ಶರೀರವಷ್ಟೆ ನನ್ನದಲ್ಲ. ಎಲ್ಲ ಶರೀರಿಗಳಲ್ಲಿ ನಾನೇ ಇದ್ದೇನೆ. ನಾವೆಲ್ಲರೂ ಒಬ್ಬನೇ ದೇವರ ಅಂಶ.

ಇನ್ನೂ ಒಂದು ಮಾತು. ಒಳ್ಳೆಯವರಾಗುವುದಕ್ಕಾಗಿ ಐದು ಮಾತುಗಳನ್ನು ಪಾಲಿಸಬೇಕಿದೆ :-

೧) ಎಲ್ಲ ಭೂಮಿಯನ್ನು ಹಳ್ಳಿಯದನ್ನಾಗಿ ಮಾಡಬೇಕು;

೨) ಬಟ್ಟೆ, ಎಣ್ಣೆ, ಬೆಲ್ಲ, ಪಾದರಕ್ಷೆ, ಸಾಬೂನು ಇತ್ಯಾದಿ ಪದಾರ್ಥಗಳನ್ನು ಹಳ್ಳಿಯಲ್ಲಿಯೇ ತಯಾರಿಸಬೇಕು;

೩) ಹೆಂಡ, ಬೀಡಿ ಇತ್ಯಾದಿ ದುಶ್ಚಟಗಳನ್ನು ಬಿಡಬೇಕು;

೪) ಜಗಳ ಮಾಡಕೂಡದು. ಜಗಳ ಉಂಟಾದರೆ ಹಳ್ಳಿಯ ಸಜ್ಜನರ ಮೂಲಕ ಅದರ ತೀರ್ಮಾನ ಮಾಡಿಸಿಕೊಳ್ಳಬೇಕು;

೫) ಪ್ರತಿದಿನ ಸಂಜೆ ರಾಮಾಯಣ, ಭಾಗವತ, ಗೀತೆ ಇತ್ಯಾದಿ ಓದಬೇಕು. ಭಕ್ತರಾಗಬೇಕು, ಕಾಮ, ಕ್ರೋಧಗಳನ್ನು ಬಿಡುವೆವು, ಹಳ್ಳಿಯಲ್ಲಿ ಯಾವುದೇ ಪ್ರಕಾರದ ಭೇದಭಾವ ಮಾಡುವುದಿಲ್ಲ. ಆಗಲೇ ಹಳ್ಳಿ-ಹಳ್ಳಿಯಲ್ಲಿ 'ಗ್ರಾಮ-ರಾಜ್ಯ', 'ರಾಮರಾಜ್ಯ' ಅಥವಾ 'ನಿಜವಾದ ಸ್ವರಾಜ್ಯ'ವಾಗುವುದು. ಈ ಐದು ಮಾತುಗಳನ್ನು ನೀವು ಪಾಲಿಸಿದರೆ 'ಸರ್ವೋದಯ-ಸಮಾಜ' ಆಗುವುದು.

ಇಂದು ನಾವು ಹಳ್ಳಿಯಲ್ಲಿ ಒಟ್ಟಾಗಿಯೇನೋ ಇರುತ್ತೇವೆ. ಆದರೆ ಪರಸ್ಪರ ಪ್ರೀತಿಸುವುದಿಲ್ಲ. ಮನೆಯಲ್ಲಿ ಅತ್ತಿಗೆ, ಅಕ್ಕ-ತಂಗಿಯರು, ತಾಯಿ ಇದ್ದಾರೆ ಅಷ್ಟೆ. ಈ ನಾಲ್ಕೈದು ಜನರನ್ನು ನಾವು ಪ್ರೀತಿಸುತ್ತೇವೆ. ಅವರ ಬಗ್ಗೆ ಕಾಳಜಿ ಮಾಡುತ್ತೇವೆ. ಬೇರೆ ಇನ್ನಾರ ಬಗ್ಗೆಯೂ ಕಾಳಜಿ ವಹಿಸುವುದಿಲ್ಲ. ಇದರ ಪರಿಣಾಮವಾಗಿ ಹಳ್ಳಿಯಲ್ಲಿ ಒಳ್ಳೆಯ ಪದಾರ್ಥ ತಯಾರಾಗುವುದಿಲ್ಲ. ಹಳ್ಳಿಯಲ್ಲಿ ನೇಕಾರ ಇರುತ್ತಾನೆ. ಅವನು ನೇಯ್ದ ಬಟ್ಟೆಯನ್ನು ಹಳ್ಳಿಯ ಜನ ಖರೀದಿಸುವುದಿಲ್ಲ. ಹಳ್ಳಿಯಲ್ಲಿ ತಯಾರಾದ ಬಟ್ಟೆ ಹೊರಗೆ ಹೋಗುತ್ತದೆ. ಇದು ಪ್ರೀತಿಯಲ್ಲ. ಒಂದು ವೇಳೆ ಹಳ್ಳಿಯವರು ಪರಸ್ಪರ ಪ್ರೀತಿಸುತ್ತಾರೆ ಎಂದರೆ ಹಳ್ಳಿಯಲ್ಲಿ ಯಾವ ಬಟ್ಟೆ ತಯಾರಾಗುತ್ತದೋ ಅದನ್ನೇ ಖರೀದಿಸುತ್ತೇವೆ. ಅದನ್ನೇ ಧರಿಸುತ್ತೇವೆ ಎಂದು ನಿರ್ಣಯಿಸಬೇಕಾಗುವುದು. ಹಳ್ಳಿಯ ಚಮ್ಮಾರ ತಯಾರಿಸಿದ ಪಾದರಕ್ಷೆಗಳನ್ನೇ ಧರಿಸುವೆವು. ನೇಕಾರನ ಬಟ್ಟೆಯನ್ನು ಚಮ್ಮಾರ ಧರಿಸಬೇಕು ಮತ್ತು ಚಮ್ಮಾರನ ಪಾದರಕ್ಷೆಗಳನ್ನು ನೇಕಾರ ಖರೀದಿಸಬೇಕು. ಆಗ ಇಬ್ಬರಿಗೂ ಪರಸ್ಪರರ ಸಹಾಯ ದೊರೆಯುವುದು. ಇಂದು ಈ ಸಹಾಯವಿಲ್ಲ. ಇಬ್ಬರೂ ಒಂದು ಹಳ್ಳಿಯಲ್ಲಿ ಇರುತ್ತಾರೆ. ಆದರೆ ಅವರಲ್ಲಿ ಪರಸ್ಪರರಿಗಾಗಿ ಕಾಳಜಿ ಇಲ್ಲ. ಚಿಂತೆ ಇಲ್ಲ. ಇದು ಆಗಬಾರದು.

ಪರಸ್ಪರ ಪ್ರೀತಿಸಬೇಕಾದುದು ನಮ್ಮ ಕರ್ತವ್ಯ. ಪ್ರೀತಿಸುವುದು, ಪರಸ್ಪರರ ಕಾಳಜಿ ಮಾಡುವುದು ಇವೆಲ್ಲ ಮಾನವ ಧರ್ಮ. ಕತ್ತೆ, ಎತ್ತು, ನಾಯಿ ಮುಂತಾದವು ಎಂದಾದರೂ ಪರಸ್ಪರರ ಚಿಂತೆ ಮಾಡುತ್ತವೆಯೇ? ಇಲ್ಲ. ನನಗೆ ಸಿಕ್ಕರೆ ಸಾಕು

ಎಂದು ಹೇಳುತ್ತವೆ. ಆದರೆ ಮನುಷ್ಯನಿಗೆ ಇದರಿಂದ ಸಮಾಧಾನ ಆಗುವುದಿಲ್ಲ. ಬೇಸಿಗೆ ದಿನ ಇವೆ. ನಿಮ್ಮ ಬಳಿಗೆ ಬಾಯಾರಿದವನೊಬ್ಬ ಬರುತ್ತಾನೆ. ನಿಮಗೂ ಕೂಡ ಬಾಯಾರಿಕೆಯಾಗಿದೆ. ಈಗ ಹೇಳಿ, ಆಗ ನೀವೇನು ಮಾಡುತ್ತೀರಿ? ಪರೀಕ್ಷೆ ಇರುವುದು ಇಲ್ಲಿಯೆ. ನನಗೆ ಬಾಯಾರಿದೆ. ಆದ್ದರಿಂದ ನಾನೇ ನೀರು ಕುಡಿಯುತ್ತೇನೆ. ಈ ಮಾತನ್ನು ಮಗು ಕೂಡ ತಿಳಿಯುತ್ತದೆ. ಆದರೆ ಇದರಲ್ಲಿ ಮಾನವೀಯತೆಯಿಲ್ಲ. ನಮಗೆ ಎಷ್ಟೇ ಕಷ್ಟವದರೂ ನಾವು ಎರಡನೆಯವರ ಕಾಳಜಿ ಮಾಡಬೇಕೆಂಬುದರಲ್ಲಿ ಮಾನವೀಯತೆ ಇದೆ. ಎರಡನೆಯವರ ಚಿಂತೆ ಮಾಡುವುದು, ಎರಡನೆಯವರಿಗಾಗಿ ಕಷ್ಟ ಬೀಳುವುದು. ಇದು ಸಂತೋಷದ ಸಂಗತಿ ಎಂದು ತಿಳಿಯಬೇಕು.

ನಿಮ್ಮ ಬಳಿ ಸ್ವಲ್ಪ ಭೂಮಿ ಇದೆ. ಆದರೂ ಕೂಡ ಕೊಂಚ ಭೂಭಾಗ ಕೊಡಿ. ಕೊಡುವುದರಲ್ಲಿ ಹಿಂದೆ ಮುಂದೆ ನೋಡಬೇಡಿ. ಕೊಡುವುದು ಧರ್ಮ. ಗಾಳಿ, ನೀರು ಮತ್ತು ಸೂರ್ಯನ ಬೆಳಕು ಇವೆಲ್ಲವನ್ನೂ ದೇವರು ತನ್ನ ಮಕ್ಕಳಿಗಾಗಿ ಹುಟ್ಟಿಸಿದ್ದಾನೆ. ಅದರ ಮೇಲೆ ಎಲ್ಲರ ಹಕ್ಕಿದೆ. ಹಳ್ಳಿಯಲ್ಲಿ ತಯಾರಾಗುವ ಪದಾರ್ಥವನ್ನೇ ನಾವು ಖರೀದಿಸಬೇಕು. ಹೀಗೆ ಹಳ್ಳಿಯ ಉದ್ಯೋಗಗಳನ್ನು ನಾವು ಜೀವಂತವಾಗಿಡೋಣ. ಪರಸ್ಪರ ಪ್ರೀತಿಸೋಣ. ಇದೇ ಧರ್ಮ, ಇದೇ ಮಾನವೀಯತೆ.

ಮನುಷ್ಯ ಮೇಲೆ ನೋಡಿದಾಗ ಅವನ ಮನಸ್ಸಿನಲ್ಲಿ ದ್ವೇಷ, ಹೊಟ್ಟೆಯುರಿ, ಈರ್ಷೆ ಹುಟ್ಟುತ್ತವೆ. ಲಕ್ಷಾಧಿಪತಿ ಕೋಟ್ಯಾಧೀಶ್ವರನ ಕಡೆಗೆ ನೋಡಿದಾಗ ದುಃಖ ಆಗುತ್ತದೆ. ನನ್ನ ಬಳಿ ಕೇವಲ ಲಕ್ಷ ರುಪಾಯಿಗಳಿವೆ, ಇನ್ನೊಬ್ಬನ ಬಳಿ ಕೋಟಿ ರುಪಾಯಿಗಳಿವೆ ಎಂದು ಆಲೋಚಿಸುತ್ತಾನೆ. ಅವನು ಎಷ್ಟೊಂದು ಸುಖದಿಂದ್ದಾನೆ. ಈ ರೀತಿ ಅವನು ತನ್ನನ್ನು ದುರ್ಬಲನೆಂದು ತಿಳಿಯುತ್ತಾನೆ. ಅವನ ಮನಸ್ಸಿನಲ್ಲಿ ಹಾಹಾಕಾರ ಉಂಟಾಗುತ್ತದೆ. ಯಾವ ಮನುಷ್ಯ ಕೆಳಗೆ ನೋಡುತ್ತಾನೋ ಅವನಿಗೆ ದುಃಖದಲ್ಲಿರುವ ಜನರು ಕಂಡು ಬರುತ್ತಾರೆ. ಜನರು ಎಷ್ಟೊಂದು ಬಡವರಿದ್ದಾರೆ, ಎಷ್ಟೊಂದು ನಿಸ್ಸಹಯಾಕರಾಗಿದ್ದಾರೆ ಎಂಬುದು ಗೊತ್ತಾಗುತ್ತದೆ. ಅವರ ಬಗ್ಗೆ ಕಾಳಜಿ ಮಾಡುವವರು ಯಾರೂ ಇರುವುದಿಲ್ಲ. ಆಗ ಅವನಿಗೆ ತಾನು ಎಷ್ಟೊಂದು ಸುಖದಿಂದ ಇದ್ದೇನೆಂದು ಅಂದು ಕೊಳ್ಳುತ್ತಾನೆ. ನನಗೆ ಐವತ್ತು ರುಪಾಯಿ ದೊರೆಯುತ್ತಿದೆ. ಏನೂ ದೊರೆಯದಿರುವ ಎಷ್ಟೋ ಜನ ಜಗತ್ತಿನಲ್ಲಿ ಇದ್ದಾರೆ. ಹೀಗೆ ಆಲೋಚಿಸಿ, ಅವನು ತನ್ನ ೫೦ ರುಪಾಯಿಗಳಲ್ಲಿ ೫ ರುಪಾಯಿಗಳನ್ನು ಒಳ್ಳೆಯ ಕೆಲಸಕ್ಕಾಗಿ ತೆಗೆದು ಇಡುತ್ತಾನೆ. ಹೀಗೆ ಕೆಳಗೆ ನೋಡುವುದರಿಂದ ಐವತ್ತು ರುಪಾಯಿ ಉಳ್ಳವನ ಮನಸ್ಸಿನಲ್ಲಿ ಕರುಣೆ ದಯೆ ಹುಟ್ಟುತ್ತವೆ. ಮೇಲೆ ನೋಡುವುದರಿಂದ ಐದು ಲಕ್ಷ ಪಡೆಯುವವನು ಕೂಡ ದುಃಖಿಯಾಗುತ್ತಾನೆ.

ಬೆಟ್ಟದ ಮೇಲೆ ನೀರು ಬಿದ್ದರೆ ಕೆಳಗಡೆಗೆ ಹೋಗುತ್ತದೆ. ಎಲ್ಲಿಯೇ ಲೋಟದಷ್ಟು ನೀರು ಹಾಕಿದರೂ ಅದು ಕೆಳಗೆ ಓಡುತ್ತದೆ. ಜಗತ್ತಿನ ಎಲ್ಲ ನೀರು ಎಲ್ಲಕ್ಕಿಂತ ಕೆಳಗಿರುವ ಸಮುದ್ರದತ್ತ ಓಡುತ್ತದೆ. ನೀರಿನ ಈ ಉದಾಹರಣೆಯನ್ನು ತೆಗೆದುಕೊಳ್ಳಬೇಕು. ನಾವು ಕೂಡ ಸಮಾಜದಲ್ಲಿ ಅತ್ಯಂತ ದುಃಖಿಜನರ, ಬಡವರ ನೆರವಿಗಾಗಿ ಧಾವಿಸಬೇಕು. ಇದರಲ್ಲಿಯೇ ಮಾನವೀಯತೆ ಇದೆ. ನಾವು ಮೇಲೆ ನೋಡುವುದನ್ನು ಮಾಡಿದರೆ ಮನಸ್ಸಿನಲ್ಲಿ ಇನ್ನು ಹೆಚ್ಚು ಬೇಕೆಂಬ ಇಚ್ಛೆ ಮನಸ್ಸಿನಲ್ಲಿ ಬರುತ್ತದೆ. ಹೀಗೆ ಹೊಟ್ಟೆಉರಿ ಹೆಚ್ಚಿಸಿ ಕೊಳ್ಳುತ್ತ ಹೋಗುವುದು ಮಾನವೀಯತೆ

ಅಲ್ಲ. ಇದು ಮಾನವನ ರೂಪದಲ್ಲಿ ಅಡಗಿರುವ ರಾಕ್ಷಸೀಯತೆ, ಪಶುತ್ವ

ಮನೆಯಲ್ಲಿ ಅನ್ನ ತುಂಬಿದ್ದರೂ ಮನುಷ್ಯ ಉಪವಾಸ ಮಾಡುತ್ತಾನೆ. ಇದೇ ಅವನ ಮಾನವೀಯತೆ. ಮನುಷ್ಯ ತನ್ನ ಇಂದ್ರಿಯಗಳ ಮೇಲೆ ಎಚ್ಚರಿಕೆಯನ್ನಿಡಬೇಕು. ನಾನು ದುಃಖಿ ಇದ್ದೇನೆ. ಆದರೆ ನನಗಿಂತಲೂ ಇನ್ನು ಯಾರು ಹೆಚ್ಚು ದುಃಖಿಯಿದ್ದಾರೆ. ಹೀಗೆಂದು ಆಲೋಚಿಸಬೇಕು. ಅಂಥವನ ಹುಡುಕಾಟಕ್ಕೆ ನಾನು ಹೋಗಬೇಕು. ಅವನನ್ನು ಹುಡುಕಿ ಅವನಿಗೆ ಸಹಾಯ ಮಾಡಬೇಕು. ಮನುಷ್ಯನಿಗೆ ಇದೇ ಸುಖ, ಆನಂದ. ಎರಡನೆಯವರಿಗೆ ತಿನಿಸಿ, ತಿನ್ನಬೇಕು, ಕುಡಿಸಿ, ಕುಡಿಯ ಬೇಕು. ಇದರಲ್ಲಿಯೇ ಗೌರವವಿದೆ. ಎರಡನೆಯವರಿಗೆ ಮೊದಲು ಸಿಗಬೇಕು, ನಂತರ ನನಗೆ ದೊರೆಯಬೇಕು ಹೀಗೆ ಆಲೋಚಿಸಬೇಕು. ಮನೆಯಲ್ಲಿ ತಾಯಿಗೆ ತುಂಬ ಗೌರವವಿದೆ. ಏಕೆಂದರೆ ಅವಳು ಎಲ್ಲರಿಗೂ ಊಟ ಹಾಕಿ, ಊಟ ಮಾಡುತ್ತಾಳೆ. ಕುಡಿಸಿ, ಕುಡಿಯುತ್ತಾಳೆ. ಮಲಗಿಸಿ ಮಲಗುತ್ತಾಳೆ. ಒಂದು ವೇಳೆ ತಾಯಿ ಮಗುವಿಗೆ, "ಮಗುವೇ, ಮನೆಯಲ್ಲಿ ಒಂದೇ ಪಾವು ಹಾಲು ಇದೆ. ನಾನು ದುರ್ಬಲಳಾದರೆ ನಿನ್ನ ಉಪಚಾರ ಹೇಗೆ ಮಾಡಲು ಸಾಧ್ಯ? ಆದ್ದರಿಂದ ಆ ಹಾಲಿನ ಮೇಲೆ ಮೊದಲ ಅಧಿಕಾರ ನನ್ನದು. ನಾನು ಮೊದಲು ಹಾಲು ಕುಡಿಯುವೆ ನಂತರ ಮಿಕ್ಕರೆ ನೀನು ಕುಡಿಯಬಹುದು" ಹೀಗೆ ಅಂದರೆ ಅವಳಿಗೆ ಗೌರವ ಇರುವುದಿಲ್ಲ. ಆದರೆ ತಾಯಿ, "ಮಗು ಹಾಲು ಸ್ವಲ್ಪ ಇದೆ. ನೀನು ಮೊದಲು ಕುಡಿ" ಎಂದು ಹೇಳುತ್ತಾಳೆ.

ನಾವು ನಮಗಿಂತ ಯಾರು ಹೆಚ್ಚು ಕೀಳು ಸ್ಥಿತಿಯಲ್ಲಿದ್ದಾರೆ ಎಂದು ನೋಡಿ ಅಂಥವರನ್ನು ಹುಡುಕಿ ಅವರ ಉಪಚಾರ ಮಾಡುವುದರಲ್ಲಿ ಮಾನವೀಯತೆ ಇದೆ. ನಾನು ಜಗತ್ತಿನಲ್ಲಿ ಎಲ್ಲರಿಗಿಂತ ಹೆಚ್ಚು ದುಃಖದಿಂದ ಇದ್ದೇನೆ ಎಂದು ಯಾವ ಮನುಷ್ಯನೂ ಹೇಳಲಾರ. ಇಲ್ಲಿ ಒಬ್ಬರಿಗಿಂತ ಒಬ್ಬರು ಉನ್ನತವಾಗಿ ಮತ್ತು ಕೀಳಾಗಿ ಇರುವುದು ದೇವರ ಸೃಷ್ಟಿ. ಆದ್ದರಿಂದ ಯಾರು ಬಿದ್ದ ಸ್ಥಿತಿಯಲ್ಲಿದ್ದಾರೊ ಅವನು ಕೂಡ ತನಗಿಂತಲೂ ಬಡವರಿರುವುದನ್ನು ಕಂಡುಕೊಳ್ಳುವನು. ಆದ್ದರಿಂದ ಅವನು ಬಡವನ ಕಾಳಜಿ ಮಾಡಬೇಕು. ದುಃಖದಲ್ಲಿ ಇರುವವರಿಗೆ ಸಹಾಯ ಮಾಡುವುದು ದುಃಖಿಯ ಕೆಲಸ ಆಗಿದೆ.

ಬಾವಿಯಿಂದ ನೀವು ಒಂದು ಬಕೆಟ್ ತುಂಬ ನೀರು ತೆಗೆದುಕೊಂಡರೆ ಬಾವಿಯಲ್ಲಿ ಬಕೆಟ್ ರೂಪದ ತಗ್ಗು ಉಂಟಾಗುವುದಿಲ್ಲ. ಏಕೆಂದರೆ ತಮ್ಮ ನೀರನ್ನು ಎಲ್ಲಿಂದ ಎತ್ತಲಾಯಿತೋ ಅಲ್ಲಿಗೆ ನಾಲ್ಕೂ ಕಡೆಯಿಂದ ನೀರ ಹನಿಗಳು ಆ ತಗ್ಗಿನ ಪ್ರದೇಶಕ್ಕೆ ಓಡುತ್ತ ಬರುತ್ತವೆ ಮತ್ತು ತಗ್ಗನ್ನು ಮುಚ್ಚಿಬಿಡುತ್ತವೆ. ಇಷ್ಟೊಂದು ಕರುಣೆ ನೀರಿನ ಹನಿಗಳಲ್ಲಿದೆ. ನೀವು ಗೋಧಿ ರಾಶಿಯಿಂದ ಒಂದು ಸೇರು ಗೋಧಿ ತೆಗೆದುಕೊಂಡರೆ ಅಲ್ಲಿ ಒಂದು ತಗ್ಗು ಬಿದ್ದದ್ದು ಕಣ್ಣಿಗೆ ಕಾಣುತ್ತದೆ. ಗೋಧಿ ಮೂರ್ಖ ಮತ್ತು ಸ್ವಾರ್ಥಿ. ಅಂದರೆ ಅದು ತನ್ನಷ್ಟಕ್ಕೆ ತಾನು ಕುಳಿತಿರುತ್ತದೆ. ತಗ್ಗನ್ನು ತುಂಬುವುದಕ್ಕಾಗಿ ಓಡುವುದಿಲ್ಲ. ಆ ಗೋಧಿಯ ರಾಶಿಯಲ್ಲಿರುವ ಕೆಲವು ಮಹಾತ್ಮಾ ಕಾಳುಗಳು ತಗ್ಗಿನ ಕಡೆಗೆ ಓಡುತ್ತವೆ. ನೀರಿನ ಹನಿಗಳಿಂದ ನಾವು ಪಾಠ ಕಲಿಯಬೇಕು. ನೀವು ಸಂತೋಷವಾಗಿರಿ ಅಥವಾ ದುಃಖದಲ್ಲಿರಿ ಬೇರೆಯವರಿಗೆ ಏನಾದರೂ ಕೊಡಲೇ ಬೇಕು ಎಂಬುದು ನನ್ನ ಅರಿಕೆಯಾಗಿದೆ. ಕೊಡುವ ಕರ್ತವ್ಯ ಭಾವನೆಯನ್ನು ಹುಟ್ಟಿಸ ಬೇಕಿದೆ. ಕೊಡುವುದು ಮಾನವ ಧರ್ಮ ಎಂದು ತಿಳಿದು ಕೊಡಬೇಕು.

ನೀವು ನಿಮ್ಮ ಎರಡು ಕೈಗಳಿಂದ ಕೊಡುತ್ತ ಹೋಗಿರಿ. ಆಗ ನೀವು ಸಾವಿರ ಕೈಗಳಿಂದ ಪಡೆಯುವಿರಿ. ಕೊಡುವುದರಲ್ಲಿ ಬಹು ಸಂತೋಷ ಸಿಗುತ್ತದೆ. ಕೊಡುವ ವ್ಯವಹಾರ ತುಂಬ ಲಾಭದಾಯಕ. ಬಾಯಾರಿದವನಿಗೆ ನೀರು ಕೊಡುವವನಿಗೆ ಬಾಯಾರಿದವನಿಗಿಂತ ಹೆಚ್ಚು ತೃಪ್ತಿ ಸಿಗುತ್ತದೆ. ಏಕೆಂದರೆ ಇದರಲ್ಲಿದೆ ಮಾನವೀಯತೆ. ದೇವರು ಮನುಷ್ಯನಿಗೆ ಕೊಟ್ಟಿರುವ ಅತಿ ದೊಡ್ಡ ಭಕ್ಷೀಸು – ಮಾನವೀಯತೆ. ಇದನ್ನೆ ನಾವು ದಯೆ, ಕಾಳಜಿ ಅಥವಾ ಕರುಣೆ ಎಂದೂ ಅನ್ನುತ್ತೇವೆ. ಯಾವ ಮನುಷ್ಯನಲ್ಲಿ ಈ ವಿಷಯ ಇರುತ್ತದೊ ಅವನಿಗೆ ಅವನ ಜೀವನದಲ್ಲಿ ಅಂತಃಕರಣದಲ್ಲಿ ಸಮಾಧಾನ ಇರುವುದು, ನಿರಾಳ ಇರುವುದು, ಅಷ್ಟೇ ಶಾಂತಿ ಇರುವುದು.

ಕುರಾನ್ ಷರೀಫ್‌ನಲ್ಲಿ 'ನೀನು ಉಪವಾಸವಿರು' ಎಂದು ಹೇಳಲಾಗಿದೆ. ಯಾವುದೇ ಕಾರಣದಿಂದ ಉಪವಾಸವಿರಲು ಸಾಧ್ಯವಾಗದಿದ್ದರೆ ಅದಕ್ಕಾಗಿ ಬೇರೆ ಏನಾದರೂ ಉಪಾಯವಿದೆಯೇ? ಹೌದು. "ನೀನು ಉಪವಾಸವಿರಲು ಸಾಧ್ಯವಾಗದಿದ್ದರೆ ಬಡವರಿಗೆ ಊಟ ಹಾಕು" ಎಂದು ಹೇಳಿದೆ. ಅಂದರೆ ಇದರ ಅರ್ಥ, ಮನುಷ್ಯನೇ ನೀನು ಉಪವಾಸವಿರಲು ಸಾಧ್ಯವಿಲ್ಲದಿದ್ದರೆ ಉಪವಾಸ ಮಾಡಬೇಡ. ಆದರೆ ಹಸಿದವರ ಕಷ್ಟವನ್ನು ಅರಿತುಕೊ. ಬಡವರ ಕಷ್ಟವನ್ನು ಅರಿತುಕೊ. ಯಾರು ಹಸಿದಿದ್ದಾರೊ ಅವರಿಗೆ ಮೊದಲು ಊಟ ಹಾಕು. ಇದು ಮೊದಲ ಕರ್ತವ್ಯ. ಇದನ್ನು ಮಾಡದಿದ್ದವನು ಬೇರೇನನ್ನೂ ತಿಳಿದಿಲ್ಲ. ಅವನನ್ನು ಧರ್ಮ ಮುಟ್ಟೇ ಇಲ್ಲ. ಅವನು ಎಷ್ಟೇ ದೊಡ್ಡ ದೊಡ್ಡ ಪುಸ್ತಕಗಳನ್ನು ಓದುತ್ತಿರಬಹುದು. ಪೂಜೆ ಪುನಸ್ಕಾರಗಳನ್ನು ಮಾಡುತ್ತಿರಬಹುದು. ಅಂಥವನ ಮನಸ್ಸು ಎಷ್ಟೇ ನೊಂದಿದ್ದರೂ ಅವನಲ್ಲಿ ಮಾನವೀಯತೆ ಇಲ್ಲ. ಅವನಲ್ಲಿ ಕಲೆ ಇರಬಹುದು. ಬಹಳ ಬುದ್ಧಿ ಇರಬಹುದು. ಆದರೆ ಕರುಣೆ ಇಲ್ಲದ ಮೇಲೆ ಅವನಲ್ಲಿ ಮಾನವೀಯತೆ ಕೂಡ ಇಲ್ಲ. ಯಾರಲ್ಲಿ ಮಾನವೀಯತೆ ಇಲ್ಲವೊ ಅವನ ಮುಖದ ಸ್ವರೂಪ ಮನುಷ್ಯನಂತೆಯೇ ಇದ್ದರೂ ಅವನು ಮನುಷ್ಯನಲ್ಲ. ಅಂದರೆ ಉಪ್ಪಿನಲ್ಲಿ ಉಪ್ಪಿನ ರುಚಿ ಇಲ್ಲದಿದ್ದರೆ, ಸಕ್ಕರೆಯಲ್ಲಿ ಸಕ್ಕರೆಯ ರುಚಿಯಿಲ್ಲದಿದ್ದರೆ ಹೇಗೋ, ಹಾಗೆ ಮನುಷ್ಯನ ಸ್ಥಿತಿ. ಸಕ್ಕರೆಯಲ್ಲಿ ಸಿಹಿ ಇಲ್ಲದಿದ್ದರೆ ಅದೊಂದು ಪೌಡರ್ ರೀತಿಯ ವಸ್ತುವಾಗುವುದು. ಅದು ಸಕ್ಕರೆ ಅಲ್ಲ ಅಥವಾ ಉಪ್ಪು ಅಲ್ಲ. ಅಂತೆಯೇ ಮನುಷ್ಯನಲ್ಲಿ ಬೇರೆ ಯಾವುದೇ ಗುಣ ಇರಲಿ ಇಲ್ಲದಿರಲಿ, ಮಾನವೀಯತೆಯಂತೂ ಕನಿಷ್ಟ ಇರಲೇಬೇಕು.

ಇಂದು ಮಾನವೀಯತೆಯೇ ಇಲ್ಲವೆಂಬುದು ದುಃಖದ ಸಂಗತಿ. ಪೇಟೆಯಲ್ಲಿ ಇದು ದೊರೆಯುವುದಿಲ್ಲ. ಪ್ರೇಮ ದೊರೆಯುವುದಿಲ್ಲ. ಚಿಕ್ಕ ಹುಡುಗ ಎರಡು ಪೈಸೆಯ ಬೆಲ್ಲ ಖರೀದಿಗಾಗಿ ಪೇಟೆಗೆ ಹೋಗುತ್ತಾನೆ. ಆಗ ಮೋಸ ಮಾಡಲು ಒಳ್ಳೆಯ ಅವಕಾಶವೆಂದು ಅಂಗಡಿಯವನು ಆಲೋಚಿಸುತ್ತಾನೆ. ಪಾಪ, ಆ ಬಾಲಕನಿಗೆ ಪೇಟೆಯ ಧಾರಣೆ ಏನು ಗೊತ್ತು? ಆದ್ದರಿಂದ ಅಂಗಡಿಯವನಿಗೆ ಒಂದು ಅವಕಾಶ ಸಿಗುತ್ತದೆ. ತಮಾಷೆ ಏನೆಂದರೆ ಕೆಲವು ಜನ ಒಂದು ಕಡೆಗೆ ಧರ್ಮ ಪಾಲಿಸುತ್ತ ಇನ್ನೊಂದೆಡೆ ಮನಸ್ಸೋ ಇಚ್ಛೆ ಲಾಭವನ್ನು ಮಾಡುತ್ತಾರೆ. ಇಂದು ಎಷ್ಟೊಂದು ಮೋಸ ನಡೆಯುತ್ತಿದೆ! ಪ್ರತಿಯೊಂದು ವಸ್ತುವಿನಲ್ಲಿ ಬೆರಕೆ ಇದೆ. ಹಾಲು ತುಪ್ಪದಲ್ಲಂತೂ ಬೆರಕೆ ಇದ್ದೇ ಇದೆ. ಔಷದಿಯಾದರೂ ಕನಿಷ್ಟ ಶುದ್ಧವಿರಬೇಕು. ಆದರೆ ಅದು ಕೂಡ ಶುದ್ಧವಾಗಿ ಸಿಗುವುದಿಲ್ಲ. ಇಷ್ಟೊಂದು

ಕಠೋರತನ ನಡೆಯುತ್ತಿದೆ. ಔಷಧಿ ಖಾಯಿಲೆಗಾಗಿ ಇದೆ. ಅದರಲ್ಲೂ ಕೂಡ ಬೆರಕೆ! ಕೆಟ್ಟ ಪರಿಣಾಮವಾಗುತ್ತವೆ. ಮನುಷ್ಯನ ಇಂಥ ಕೆಲಸಗಳ ಪರಿಣಾಮವೇ ಪ್ರಕೃತಿಯ ವಿಕೋಪ. ಇಂದು ಮತಧರ್ಮದ ಭೇದವಿದೆ. ನೀವು ದೇವರಿಗೆ ಅಲ್ಲಾಹ್, ಈಶ್ವರ, ಗಾಡ್ ಎಂಬ ಯಾವುದೇ ಹೆಸರನ್ನು ಕೊಡಿ. ಅವನು ಒಬ್ಬನೇ! ಐವತ್ತು ಅಲ್ಲಾಹ್‌ಗಳು ಆಗಲು ಸಾಧ್ಯವಿಲ್ಲ. ಅವನ ಅನೇಕ ಹೆಸರುಗಳನ್ನು ಹೇಳಲಾಗುತ್ತದೆ. ಆದರೆ ಅವೆಲ್ಲವೂ ಒಬ್ಬನೇ ಪರಮಾತ್ಮನ ಹೆಸರು. ಇದನ್ನು ಎಲ್ಲರೂ ತಿಳಿದಿದ್ದಾರೆ.

ಇಂದಿನವರಿಗೆ ನಾನು ಹಳ್ಳಿ ಒಂದಾಗ ಬೇಕೆಂದು ಹೇಳುತ್ತಿದ್ದೆ. ಆದರೆ ಈಗ ಹಳ್ಳಿಯವರು ಒಬ್ಬರಿಗಾಗಿ ಇನ್ನೊಬ್ಬರು ಸಾಯುವುದಕ್ಕೂ ಸಿದ್ಧವಾಗಬೇಕೆಂದು ಹೇಳಬಯಸುತ್ತೇನೆ. ಆದ್ದರಿಂದ ಹಳ್ಳಿ ಒಂದು ಬಲವಾದ ಸೈನ್ಯವಾಗಬೇಕು. ಶತ್ರುಗಳೊಂದಿಗೆ ಯುದ್ಧ ಮಾಡುವುದಕ್ಕಾಗಿ ಸೈನ್ಯ ಬೇಕಿಲ್ಲ. ಏಕೆಂದರೆ ಅವರ ಎದುರಿನಲ್ಲಿ ಯಾವ ಶತ್ರುವೂ ಇಲ್ಲ. ಬದಲಿಗೆ ಪ್ರೇಮ ಮಾಡುವ ಸೈನ್ಯ ಬೇಕು. ಯಾವ ರೀತಿ ಸೈನಿಕರು ಅನುಶಾಸನದಿಂದ, ಕಾನೂನು ಬದ್ಧವಾಗಿ ಇರುತ್ತಾರೋ ಅದೇ ರೀತಿ ಹಳ್ಳಿಯವರು ತಮ್ಮದೇ ಕಾನೂನನ್ನು ಮಾಡಿಕೊಳ್ಳಲಿ, ಅದರಂತೆ ನಡೆದು ಕೊಳ್ಳಲಿ. ರಾಜ್ಯದ ಕಾನೂನು ಬೇರೆ; ಹಳ್ಳಿಯ ಕಾನೂನು ಬೇರೆಯಾಗಿರುವುದು. ಹಳ್ಳಿಯ ಜನರೆಲ್ಲ ಒಟ್ಟಿಗೆ ಸೇರಿ ಹಳ್ಳಿಯ ಶಕ್ತಿ ಯಾವ ಪ್ರಕಾರ ಬೆಳೆಯಬಹುದೆಂಬುದರ ಬಗ್ಗೆ ಆಲೋಚಿಸುವರು. ಹಳ್ಳಿಯ ಪ್ರತಿಯೊಂದು ಜನಸಮೂಹಕ್ಕೆ ಏನೇನು ಮಾಡಬೇಕು ಎಂದು ಆಲೋಚಿಸುವರು. ಸಮಾಜದಲ್ಲಿ ವಿವಿಧ ಪ್ರಕಾರದ ಜನ ಸಮೂಹಗಳು ಇರುತ್ತವೆ. ನಮ್ಮ ಹಳ್ಳಿಯಲ್ಲಿ ಯಾರೋ ಒಬ್ಬರು ದುಃಖದಲ್ಲಿ ಇದ್ದಾರೆ. ಅವನು ಒಬ್ಬನೇ ಅಳುತ್ತಿದ್ದಾನೆ. ಇದು ನಮಗೆ ಸಹಿಸಲಾಗುವುದಿಲ್ಲ. ಇಡೀ ಹಳ್ಳಿ ಅವನ ದುಃಖದಲ್ಲಿ ಭಾಗಿಯಾದರೆ ಅವನ ದುಃಖದ ಭಾರ ಕಡಿಮೆಯಾಗುವುದು. ಈ ರೀತಿ ಹಳ್ಳಿಯವರು ಸುಖ-ದುಃಖ ಎರಡನ್ನೂ ಹಂಚಿಕೊಳ್ಳುವರು. ಗೀತೆಯಲ್ಲಿ ಭಗವಂತ ತನ್ನ ವಿರಾಟ್‌ರೂಪವನ್ನು ತೋರಿಸಿದ. ಅವನಿಗೆ ಸಾವಿರ ಕೈಗಳಿವೆ, ಸಾವಿರ ಕಾಲುಗಳಿವೆ, ಸಾವಿರ ಕಿವಿಗಳಿವೆ, ಸಾವಿರ ಮೂಗು ಇವೆ, ಸಾವಿರ ಬಾಯಿಯಿವೆ. ಎಲ್ಲವೂ ಸಾವಿರ-ಸಾವಿರ! ಆದರೆ ಮನಸ್ಸು? ಸಾವಿರವೆಂದು ಹೇಳಲಿಲ್ಲ. ಇದು ತಿಳಿಯಬೇಕಾದ ಮಾತು. ಆದ್ದರಿಂದ ಎಲ್ಲರ ಮನಸ್ಸು ಒಂದಾಗ ಬೇಕು. ಹಳ್ಳಿ-ಹಳ್ಳಿಯ, ಜಿಲ್ಲೆ-ಜಿಲ್ಲೆಯ, ರಾಜ್ಯ-ರಾಜ್ಯಗಳ ಮತ್ತು ದೇಶ-ದೇಶಗಳ ಮನಸ್ಸು ಒಂದಾಗ ಬೇಕು. ಎಲ್ಲಿ ಮನಸ್ಸು ಒಂದಾಗುತ್ತದೋ ಅಲ್ಲಿ ಪರಮೇಶ್ವರನ ರೂಪ ಪ್ರಕಟವಾಗುತ್ತದೆ. ಕೆಲವು ಜನರು ಭೂಮಿಯನ್ನು ಒಂದುಗೂಡಿಸಿ ಎಂದು ಹೇಳುತ್ತಾರೆ. ನಾನು ಭೂಮಿಯನ್ನು ಒಂದು ಗೂಡಿಸುತ್ತೇನೆ. ಆದರೆ ಮನಸ್ಸು ಮೊದಲು ಒಂದಾಗಲಿ. ಗ್ರಾಮದಾನ ಅಂದರೆ ಗ್ರಾಮದ ಒಂದು ಮನಸ್ಸು. ಈ ರೀತಿ ನಾನು ಪ್ರಯತ್ನಿಸುವೆ. ಭಗವಂತನ ಕೃಪೆಯಿಂದ ಪಾಕಿಸ್ತಾನ, ಕೊರಿಯಾ, ಈಜಿಪ್ಟ್, ಯುರೋಪ್, ಅಮೇರಿಕಾ, ಶ್ರೀಲಂಕಾ ಇತ್ಯಾದಿ ಎಲ್ಲ ಬೇರೆ-ಬೇರೆ ದೇಶಗಳ ಮನಸ್ಸೂ ಕೂಡ ಒಂದಾಗಲಿ.

* * *

ಬಹುಗುಣರ ಜೀವನದಲ್ಲಿ ಗಾಂಧಿಯ ಪ್ರವೇಶ

ಮೂಲ - ಜಾರ್ಜ್ ಆಲ್ಫ್ರೆಡ್ ಜೇಮ್ಸ್- ಕನ್ನಡಕ್ಕೆ : ಸುರೇಂದ್ರ ಕೌಲಗಿ

ಅಂತಿಮವಾಗಿ ಪೋಲೀಸ್ ಮುಖ್ಯಸ್ಥ ಈ ಯುವ ಕೈದಿಯನ್ನು ವೈದ್ಯಕೀಯವಾಗಿ ಪರೀಕ್ಷಿಸಲು ವೈದ್ಯರನ್ನು ಬರಮಾಡಿದ. ರೋಗಿಯನ್ನು ಪರೀಕ್ಷಿಸಿದ ನಂತರ ಈ ಯುವಕನಿಗೆ ತತ್‌ಕ್ಷಣವೇ ಆರೋಗ್ಯದ ಬಗ್ಗೆ ಗಮನ ಹರಿಸಬೇಕಿದೆ. ಪೋಲೀಸ್ ಲಾಕಪ್ ಮತ್ತು ಸುತ್ತಲೂ ಇರುವ ಅಸ್ವಚ್ಛತೆಯ ಪರಿಸ್ಥಿತಿಯಲ್ಲಿ ಆಪರೇಷನ್ ಮಾಡಿದ ಪಕ್ಷದಲ್ಲಿ ಈ ಕೈದಿ ಸಾಯುವುದು ಖಂಡಿತ ಎಂದು ಆ ವೈದ್ಯ ಹೇಳಿದ. ಮಾರನೇ ದಿನ ಪೋಲೀಸ್ ಮುಖ್ಯಾಧಿಕಾರಿಯ ಆದೇಶದ ಮೇರೆಗೆ ಪೋಲೀಸರು ಬಹುಗಣರನ್ನು ನರೇಂದ್ರನಗರದಲ್ಲಿರುವ ಆಸ್ಪತ್ರೆಗೆ ಸ್ಟ್ರೆಚರ್ ಮೇಲೆ ಹೊತ್ತುಕೊಂಡು ಹೋದರು. ಆದರೆ ಆ ಆಸ್ಪತ್ರೆಯಲ್ಲೇನೂ ಈ ರೋಗಿಗೆ ಸ್ವಾಗತ ಸಿಗಲಿಲ್ಲ. ಅವರು ಈ ಕಾಯಿಲೆಯ ಮತ್ತು ದುರ್ಬಲವಾದ ಕೈದಿ ರೋಗಿಯನ್ನು ನೋಡುತ್ತಲೇ ವೈದ್ಯಾಧಿಕಾರಿ "ಈತನನ್ನು ಹಿಂದಕ್ಕೆ ಕರೆದು-ಕೊಂಡು ಹೋಗಿ! ಸಾಯುತ್ತಿರುವ ಈ ರೋಗಿಯನ್ನು ಇಲ್ಲಿಗೇಕೆ ಕರೆದುಕೊಂಡು ಬಂದಿರಿ" ಎಂದು ಗುಡುಗಿದ. ಮುಂದೇನು ಮಾಡಬೇಕು ಎಂದು ತಿಳಿಯದ ಪೋಲೀಸರು ಬಹುಗುಣರನ್ನು ಆಸ್ಪತ್ರೆಯ ಹೊರಗೆ ಸ್ಟ್ರೆಚರ್ ಮೇಲೆ ಹೆಣದಂತೆ ಬಿಟ್ಟು ತಮ್ಮ ಮುಖ್ಯಾಧಿಕಾರಿಯ ಸೂಚನೆ ಪಡೆಯಲು ಹೊರಟು ಹೋದರು. ಅದಕ್ಕೆ ಮೇಲಧಿಕಾರಿಯಿಂದ ಬಂದ ಉತ್ತರವೇನೆಂದರೆ ಇವನೊಬ್ಬ ಸಾಯುತ್ತಿರುವ ಹುಡುಗನೇ ಆಗಿರುವುದರಿಂದ ಅವನಿರುವಲ್ಲಿಯೇ ಸತ್ತು ಹೋಗುವುದು ಉತ್ತಮ. ಏಕೆಂದರೆ ಅವನ ಸಾವಿನ ಜವಾಬ್ದಾರಿ ಪೋಲೀಸರ ಹೆಗಲ ಮೇಲೆ ಬೀಳುವುದರಿಂದ ತಪ್ಪಿಸಬೇಕೇಂಬುದಾಗಿತ್ತು. ಆ ಆಸ್ಪತ್ರೆಯ ವೈದ್ಯ ಸುಂದರಲಾಲರ ಕುಟುಂಬದ ಪರಿಚಿತ ವೈದ್ಯನಾಗಿದ್ದ. ಮಾರನೇ ದಿನ ಯುವ ಕೈದಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಮನೆಯ ಹೊರಾಂಗಣದಲ್ಲಿ ಮಲಗಿಸಿದ. ಶಸ್ತ್ರಕ್ರಿಯೆಗಾಗಿ ಉಪಕರಣಗಳನ್ನು ಹೊಂದಿಸಿದ. ಶಸ್ತ್ರಕ್ರಿಯೆ ತುಂಬ ಸರಳವಾದುದು ಮತ್ತು ಬಹಳ ಬೇಗ ಗುಣಮುಖವಾಗುವುದೆಂದು ಆ ವೈದ್ಯ ಸುಂದರಲಾಲರಿಗೆ ಗುಟ್ಟಾಗಿ ತಿಳಿಸಿದ. ವೈದ್ಯನ ಉದ್ದೇಶವಾದರೂ ಸಹ ಸುಂದರಲಾಲರನ್ನು ಪೋಲೀಸರ ಕೈವಶದಿಂದ ಬಿಡಿಸಿಕೊಳ್ಳಬೇಕೆಂಬುದೇ ಆಗಿತ್ತು. ಸುಂದರಲಾಲರಿಗೆ ಉಪಚಾರ ಮಾಡಿದ ನಂತರ ಆ ವೈದ್ಯ ಪೋಲೀಸರಿಗೆ ಸುಂದರಲಾಲರ ಪರಿಸ್ಥಿತಿ ಗಂಭೀರವಾಗಿದೆ ಮತ್ತು ಅವರಿಗೆ ಎರಡು ತಿಂಗಳ ಅವಧಿಯ ಪೂರ್ಣ ವಿಶ್ರಾಂತಿ ಬೇಕಾಗಿದೆ ಎಂದು ತಿಳಿಸಿದ. ಪೋಲೀಸ್ ಮುಖ್ಯಸ್ಥ ಸುಂದರಲಾಲರನ್ನು ಆ ವೈದ್ಯನ ಮೇಲ್ವಿಚಾರಣೆಗೇ ಬಿಟ್ಟನು. ಒಂದು ವಾರದ ನಂತರ ಪ್ರವಾಸ ಮಾಡಲು ಸಮರ್ಥನಾದ ಕೂಡಲೇ ಸುಂದರಲಾಲ್ ಅಲ್ಲಿಂದ ತಪ್ಪಿಸಿಕೊಂಡು ಲಾಹೋರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ತನ್ನ ಹಿರಿಯಣ್ಣನನ್ನು ಸೇರಿಕೊಂಡರು. ಲಾಹೋರ್ ತಲುಪಿದಾಗ ಸುಂದರಲಾಲರ ಬಳಿ ಇದ್ದದ್ದು ಕೇವಲ ೨೫ ರುಪಾಯಿಗಳು. ತನ್ನ ಅಣ್ಣನ ರೂಮಿನಲ್ಲಿ ಸೇರಿಕೊಂಡ.

ಸುಂದರಲಾಲರು ಮಕ್ಕಳಿಗೆ ಪಾಠ ಮಾಡುವುದರ ಮೂಲಕ ತಿಂಗಳೊಂದಕ್ಕೆ ಹತ್ತು ರುಪಾಯಿ ಸಂಪಾದಿಸಲು ಸಾಧ್ಯವಾಯಿತು. ಮಕ್ಕಳಿಗೆ ಪಾಠ ಮಾಡುವುದಕ್ಕಾಗಿ ಪ್ರತಿದಿನ ಬೆಳಿಗ್ಗೆ ಮೂರು ಮೈಲಿ ನಡೆಯಬೇಕಿತ್ತು. ಈ ಸಣ್ಣ ಆದಾಯದಿಂದ ಸುಂದರಲಾಲರು ಚಪಾತಿ ಚಹಾವನ್ನು ಖರೀದಿಸಿ ತಿನ್ನುತ್ತಿದ್ದರು. ಪ್ರತಿದಿನ ಎರಡು ಪೈಸೆ ಬೆಲೆಯ ಹಾಲು ಖರೀದಿಸಿ ಚಹಾ ಮಾಡಿಕೊಳ್ಳುತ್ತಿದ್ದರು. ಆದರೆ ಇಷ್ಟು ಸಣ್ಣ ಪ್ರಮಾಣದಲ್ಲಿ ಹಾಲು ಕೊಡಲು ಹಾಲು ಮಾರುವವ ನಿರಾಕರಿಸಿದ. ಆದ್ದರಿಂದ ಹಾಲಿಲ್ಲದೆ ಚಹಾ ಕುಡಿಯಲು ಪ್ರಾರಂಭಿಸಿದರು. ಆದರೆ ತಮ್ಮ ಕೆಲಸದ ಮೇಲೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದರು. ಕೆಲಸಕ್ಕೆ ನಡೆದುಕೊಂಡು ಹೋಗಿ ಬರುವುದು, ಪೌಷ್ಟಿಕ ಆಹಾರದ ಕೊರತೆ ಬಹು ದುರ್ಬರವೆನಿಸಿತ್ತು. ಆದರೂ ಕೂಡ ದೃಢ ಮನಸ್ಸಿನಿಂದ ಪ್ರಯತ್ನಿಸಿ ಅವರು ಅಲ್ಲಿಯ ಸನಾತನ ಧರ್ಮ ಕಾಲೇಜಿನಲ್ಲಿ ಬಿ.ಎ. ಪದವಿಗಾಗಿ ಪ್ರವೇಶ ಪಡೆದರು. ಅಲ್ಲಿ ಅವರ ಅಧ್ಯಯನ ವಿಷಯಗಳು ಇಂಗ್ಲಿಷ್, ಇತಿಹಾಸ ಮತ್ತು ರಾಜ್ಯಶಾಸ್ತ್ರಗಳಾಗಿದ್ದವು. ತಮ್ಮೆಲ್ಲ ಕಷ್ಟಗಳ ಮಧ್ಯೆಯೂ ಗಂಭೀರವಾಗಿ ಅಧ್ಯಯನ ನಡೆಸಿ ಅರ್ಧವಾರ್ಷಿಕ ಪರೀಕ್ಷೆಗಳಲ್ಲಿ ಇತಿಹಾಸ ಮತ್ತು ರಾಜ್ಯಶಾಸ್ತ್ರಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಸುಂದರಲಾಲರ ಈ ಶೈಕ್ಷಣಿಕ ಸಾಧನೆ ಅದೇ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ರೋಷನ್‌ಲಾಲ್ ವರ್ಮಾರವರ ಗಮನ ಸೆಳೆಯಿತು. ಅವರು ಕೂಡ ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಕಾರಾಗೃಹವಾಸ ಅನುಭವಿಸಿದ್ದರು. ಅವರು ಈ ಯುವ ಸುಂದರಲಾಲರ ಶೈಕ್ಷಣಿಕ ಸಾಧನೆಯಿಂದ ಮಾತ್ರ ಪ್ರಭಾವಿತರಾಗದೆ ಅವರು ಖಾದಿ ಧರಿಸುತ್ತಿದ್ದುದ್ದರಿಂದಲೂ ಪ್ರಭಾವಿತರಾಗಿದ್ದರು. ಸ್ವತಃ ಪ್ರೊಫೆಸರ್ ವರ್ಮಾ ಕೂಡ ಖಾದಿ ಧಾರಿಯಾಗಿದ್ದರು. ಖಾದಿ ಎಂದರೆ ಗಾಂಧೀಜಿಯವರ ಸ್ವರಾಜ್ ವಿಚಾರದ ಕಾರ್ಯಕ್ರಮಕ್ಕೆ ಬದ್ಧತೆಯಾಗಿರುವುದರ ಸಂಕೇತವಾಗಿತ್ತು. ಪಠ್ಯ ಪುಸ್ತಕಗಳನ್ನು ಖರೀದಿಸಲಾರದಷ್ಟು ಕಷ್ಟ ಸುಂದರಲಾಲರಿಗಿತ್ತು. ಆದರೆ ಈ ಕಷ್ಟವನ್ನು ಅವರು ಆಹ್ವಾನವಾಗಿ ಸ್ವೀಕರಿಸಿ ಬಹು ಗಂಭೀರತೆಯಿಂದ ತಮ್ಮ ಅಧ್ಯಯನ ಮುಂದುವರೆಸಿದರು. ತಮ್ಮ ಹೆಚ್ಚಿನ ಸಮಯವನ್ನು ಗ್ರಂಥಾಲಯದಲ್ಲಿ ಕಳೆದರು. ಮುಂದಿನ ಪರೀಕ್ಷೆಗಳಲ್ಲಿ ಕೂಡ ಸುಂದರಲಾಲ್ ಉನ್ನತ ಅಂಕಗಳನ್ನು ಪಡೆದರು. ತತ್ಫಲವಾಗಿ ವಿದ್ಯಾರ್ಥಿವೇತನ ದೊರಕಿತು. ಆ ಸಮಯದಲ್ಲಿ ಅವರಿಗೆ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಜವಾಹರಲಾಲ್ ನೆಹರೂರವರ 'ದಿ ಡಿಸ್ಕವರಿ ಆಫ್ ಇಂಡಿಯಾ'ದ ಒಂದು ಪ್ರತಿ ಬಹುಮಾನವಾಗಿ ದೊರೆಯಿತು. ಕಾಲೇಜಿನ ವಿದ್ಯಾರ್ಥಿ ಸಮೂಹದಲ್ಲಿ ಸುಂದರಲಾಲ್ ಜನಪ್ರಿಯಗೊಂಡರು. ಅವರ ಪ್ರೊಫೆಸರ್‌ಗಳು ಸುಂದರಲಾಲರ ಶೈಕ್ಷಣಿಕ ಭವಿಷ್ಯದ ಬಗ್ಗೆ ಉನ್ನತ ನಿರೀಕ್ಷೆ ಇಟ್ಟುಕೊಂಡಿದ್ದರು. ಅವರ ಅಣ್ಣ ಎಂ.ಎ. ಮುಗಿಸಿ ಮನೆಗೆ ಹಿಂದಿರುಗಿದ್ದ. ಲಾಹೋರ್‌ನಲ್ಲಿ ಪ್ರಜಾಮಂಡಲದ ಶಾಖೆಯೊಂದಿತ್ತು. ಉದ್ಯೋಗ ಅರಸಿಕೊಂಡು ಲಾಹೋರ್‌ಗೆ ಬಂದಿದ್ದ ತೆಹರಿ ರಾಜ್ಯದ ಜನರು ಅದನ್ನು ಸ್ಥಾಪಿಸಿದ್ದರು. ಸುಂದರಲಾಲ್ ಅವರ ಸಭೆಗಳಿಗೆ ಹಾಜರಾಗಲು ಪ್ರಾರಂಭಿಸಿದರು. ಕಷ್ಟದ ದಿನಗಳು ಪುನಃ ಬರುವಂತೆ ತೋರಿತು. ಪೋಲೀಸರು ತೆಹರಿಯಲ್ಲಿಯ ಸುಂದರಲಾಲರ ಚಟುವಟಿಕೆಗಳನ್ನು ಮರೆತಿರಲಿಲ್ಲ. ಅದು ೧೯೪೪ರ ಜೂನ್ ೧೯. ಅಂದು ಸುಂದರಲಾಲರು ಸಾರ್ವಜನಿಕ ಗ್ರಂಥಾಲಯದಲ್ಲಿ ಸಮಯ ಕಳೆದು

ಊಟಕ್ಕಾಗಿ ತಮ್ಮ ಕೊಠಡಿಗೆ ಬರುತ್ತಿದ್ದಂತೆಯೇ ಹೊರಗಡೆ ಪೋಲೀಸ್ ಸೈಕಲ್ ನಿಂತಿರುವುದನ್ನು ಗಮನಿಸಿದರು. ಅವರ ಸ್ನೇಹಿತರು ಸುಂದರಲಾಲರನ್ನು ನೋಡುತ್ತಲೇ ಅವರನ್ನು ಕೂಡಲೇ ದೂರ ಕರೆದೋಯ್ದರು. ನಿಮ್ಮನ್ನು ಪೋಲೀಸರು ಹುಡುಕುತ್ತಿದ್ದಾರೆ ಎಂದು ಹೇಳಿದರು. ಅವರ ಸ್ನೇಹಿತರು ತಕ್ಷಣವೇ ಬೇರೊಂದು ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ಸುಂದರಲಾಲರ ವಾಸಕ್ಕೆ ವ್ಯವಸ್ಥೆ ಮಾಡಿದರು. ರಾತ್ರಿ ವೇಳೆ ಮಾತ್ರ ಹೊರಗೆ ಬರುವಂತೆ ಸುಂದರಲಾಲರಿಗೆ ಸೂಚಿಸಲಾಯಿತು. ಈ ಕ್ರಮ ಒಂದು ವಾರ ನಡೆಯಿತು. ನಂತರ ಅವರ ಸ್ನೇಹಿತರು ಸುಂದರಲಾಲರಿಗೆ ಲಾಹೋರಿನಿಂದ ದೂರದ ಪ್ರದೇಶದಲ್ಲಿ ಎಲ್ಲಿ ಯಾರಿಗೂ ಸುಂದರಲಾಲರ ಪರಿಚಯವಿಲ್ಲವೋ ಅಂಥ ಕಡೆ ಇರಬೇಕೆಂದು ಸಲಹೆ ಕೊಟ್ಟರು. ಸ್ನೇಹಿತರು ಸುಂದರಲಾಲರ ವೇಷವನ್ನು ಬದಲಾಯಿಸಿದರು. ಅವರ ಖಾದಿ ಕುರ್ತಾ ಮತ್ತು ಪೈಜಾಮದ ಬದಲು ಶರ್ಟ್ ಮತ್ತು ಪ್ಯಾಂಟ್ ಧರಿಸಿ ಮೇಲೊಂದು ಟೋಪಿ ಹಾಕಿಕೊಂಡು ಕನ್ನಡಕ ಧರಿಸುವಂತೆ ಮಾಡಿದರು. ಈ ವೇಷದಲ್ಲಿ ಸುಂದರಲಾಲರನ್ನು ೩೦೦ ಕಿ.ಮಿ ದೂರದ ಲಿಯಾಲ್‌ಪುರ್ ಎಂಬ ಊರಿಗೆ ರೈಲು ಹತ್ತಿಸಿದರು. ಲಿಯಾಲ್‌ಪುರ್ ಪಂಜಾಬ್‌ನಲ್ಲಿಯ ಒಂದು ಜಿಲ್ಲೆ. ಅಲ್ಲಿ ಸಿಖ್ ಧರ್ಮದ ಆಚರಣೆ ಮತ್ತು ಸಂಸ್ಕೃತಿ ಇತ್ತು. ಅಲ್ಲಿ ಸುಂದರಲಾಲರು ತಮ್ಮ ಹೆಸರನ್ನು ಮಾನ್‌ಸಿಂಗ್ ಎಂದು ಬದಲಾಯಿಸಿಕೊಂಡು ಒಂದು ಜವಳಿ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಆದರೆ ಅವರಿಗೆ ಮಿಲ್‌ನಲ್ಲಿ ಮಾಡುವ ಕೆಲಸದ ಅನುಭವ ಇಲ್ಲದ್ದರಿಂದ ಕೆಲಸದಿಂದ ತೆಗೆದುಹಾಕಿದರು. ಆಗ ಅಲ್ಲಿಯೇ ಹತ್ತಿರದಲ್ಲಿದ್ದ ಕ್ಯಾಂಟೀನ್‌ನಲ್ಲಿ ಪಾತ್ರೆ ತೊಳೆಯುವ ಕೆಲಸಕ್ಕೆ ಸೇರಿಕೊಂಡರು. ಒಂದು ಸಂಜೆ ಕಾರ್ಮಿಕರ ಸಂಘದ ಕಛೇರಿಯಲ್ಲಿ ಎಸ್.ಬಸಂತ್‌ಸಿಂಗ್ ಎಂಬುವವರನ್ನು ಭೇಟಿ ಮಾಡಿದರು. ಬಸಂತ್‌ಸಿಂಗ್ ಆ ಜಿಲ್ಲೆಯ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿಯಾಗಿದ್ದರು. ಬಸಂತ್‌ಸಿಂಗರಿಗೆ ಸುಂದರಲಾಲ್ ಕ್ಯಾಂಟೀನ್‌ನಲ್ಲಿ ತಟ್ಟೆ ತೊಳೆಯುವುದು ಇಷ್ಟವಾಗಲಿಲ್ಲ. ಅವರನ್ನು ಅಧ್ಯಾಪಕ ವೃತ್ತಿಗೆ ತೊಡಗಿಸಬೇಕೆಂದು ಬಯಸಿದರು. ಅದ್ದರಿಂದ ಅವರನ್ನು ತುಂಬ ದೂರದ ಹಳ್ಳಿಗೆ ಕಳುಹಿಸಿದರು. ಆ ಹಳ್ಳಿಯಲ್ಲಿ ಇರುವುದರಿಂದ ಸುಂದರಲಾಲರಿಗೆ ಪೋಲೀಸರ ಕಾಟ ತಪ್ಪಿದಂತೆ ಆಗುವುದೆಂದು ಸಹ ಬಸಂತ್‌ಸಿಂಗ್ ಆಲೋಚಿಸಿದರು. ಆ ಹಳ್ಳಿಯ ಹೆಸರು ಸಿಕ್ಕನ್‌ವಾಲಾ. ಆದರೆ ಅಲ್ಲಿಯೂ ಸಹ ಕಷ್ಟವನ್ನು ಅನುಭವಿಸಬೇಕಾಯಿತು. ಅಲ್ಲಿಯ ಪ್ರಾದೇಶಿಕ ಭಾಷೆ ಸುಂದರಲಾಲರಿಗೆ ತುಂಬ ಅಪರಿಚಿತವಾಗಿತ್ತು. ಉರ್ದು ಆಗಲಿ ಅಥವಾ ಗುರುಮುಖಿಯಾಗಲಿ ಗೊತ್ತಿರಲಿಲ್ಲ. ಆದ್ದರಿಂದ ಮಕ್ಕಳಿಗೆ ಪಾಠ ಹೇಳುವುದು ಕಷ್ಟವೆಂದು ಅನಿಸಿ ಅಲ್ಲಿಂದ ವಾಪಸ್ ಹೊರಡಲು ಆಲೋಚಿಸಿದರು. ಆದರೆ ಯಾವ ರೈತನ ಮನೆಯಲ್ಲಿ ಸುಂದರಲಾಲರು ಇದ್ದರೋ ಆ ರೈತನ ಹಿರಿಯಮಗ ಸುಂದರಲಾಲರು ತಮ್ಮ ಮನೆಯಲ್ಲಿಯೇ ಇರಲೆಂದು ತಂದೆಯನ್ನು ಒತ್ತಾಯಿಸಿದ. ಆದ್ದರಿಂದ ಸುಂದರಲಾಲ್ ಅವರ ಮನೆಯಲ್ಲಿಯೇ ಉಳಿದು ಆ ಮನೆಯ ಪರಿವಾರದ ಸದಸ್ಯರಾಗಿಬಿಟ್ಟರು. ಕ್ರಮೇಣ ಗುರುಮುಖಿ ಲಿಪಿಯನ್ನು ಕಲಿತರು. ಗುರುಮುಖಿ ಭಾಷೆಯಲ್ಲಿ ಪ್ರಭುತ್ವ ಸಂಪಾದಿಸಿದರು. ಕ್ರಮೇಣ ಉರ್ದುವಿನಲ್ಲೂ ಕೂಡ ಪ್ರಭುತ್ವ ಪಡೆದರು. ಆ ಮನೆಯ ಮಕ್ಕಳು ಇವರಿಗೆ ಗುರುಮುಖಿ ಮತ್ತು ಉರ್ದು ಕಲಿಸಿದರೆ, ಸುಂದರಲಾಲರು

ಅವರಿಗೆ ಹಿಂದಿ ಕಲಿಸಿದರು. ಗುರುಮುಖಿ ಲಿಪಿಯಲ್ಲಿರುವ ಸಿಖ್‌ರ ಪವಿತ್ರಗ್ರಂಥ ಗ್ರಂಥಸಾಹಿಬ್ ಅಧ್ಯಯನ ಮಾಡಲು ಪ್ರಾರಂಭಿಸಿದರು. ಮಕ್ಕಳು ಶಾಲೆಗೆ ಹೋದಾಗ ಸ್ಥಳೀಯ ಗುರುದ್ವಾರಕ್ಕೆ ಹೋಗುತ್ತಿದ್ದರು. ಆ ಗ್ರಂಥದಲ್ಲಿರುವ ಧಾರ್ಮಿಕ ವಿಚಾರಗಳು ಅವರ ಮೇಲೆ ತುಂಬ ಪ್ರಭಾವ ಬೀರಿದವು. ಅವರಿಗೆ ಬಹುಮಾನವಾಗಿ ಬಂದಿದ್ದ 'ದಿ ಡಿಸ್ಕವರಿ ಆಫ್ ಇಂಡಿಯಾ' ಪುಸ್ತಕ ಕೂಡ ಓದಿದರು. ಇತಿಹಾಸದ ಬರವಣಿಗೆ ಎಂದರೆ ಅದು ಕೇವಲ ಯುದ್ಧ ಮತ್ತು ಸಾಮ್ರಾಜ್ಯಗಳ ವಿವರಣೆಯಾಗಿರದೆ ಜನರ ಸಾಂಸ್ಕೃತಿಕ ಇತಿಹಾಸವನ್ನು ಅದು ಒಳಗೊಂಡಿರಬೇಕೆಂದು ತಿಳಿದುಕೊಂಡರು. ಸುಂದರಲಾಲರ ಪುಸ್ತಕ ಓದುವ ಹುಚ್ಚನ್ನು ತಿಳಿದ ಬಸಂತ್‌ಸಿಂಗ್ ಸುಂದರಲಾಲರ ಭೇಟಿಗೆ ಸಿಕ್ಕನ್‌ವಾಲಾಗೆ ಬಂದಾಗಲೆಲ್ಲಾ ಬಹಳಷ್ಟು ಪುಸ್ತಕಗಳನ್ನು ತಂದು ಕೊಡುತ್ತಿದ್ದರು. ಆ ಪುಸ್ತಕಗಳಲ್ಲಿ ಅನೇಕವು ರಷ್ಯನ್ ಭಾಷೆಯಿಂದ ಪಂಜಾಬಿ ಭಾಷೆಗೆ ಅನುವಾದಿತ ಪುಸ್ತಕಗಳಾಗಿರುತ್ತಿದ್ದವು. ಇಂಥ ಪುಸ್ತಕಗಳಲ್ಲಿ 'ಕಾಮನಬಿಲ್ಲಿನ ಏಳು ಬಣ್ಣಗಳು' ಎಂಬ ಪುಸ್ತಕವು ಒಂದಾಗಿತ್ತು. ಇದರಲ್ಲಿ ರಷ್ಯಾದ ಸಾಮಾನ್ಯ ಜನತೆ ಜರ್ಮನರ ವಿರುದ್ಧ ನಡೆಸಿದ ಹೋರಾಟದ ವಿವರಗಳಿದ್ದವು. ಈ ಪುಸ್ತಕವನ್ನಲ್ಲದೆ ಪಂಜಾಬಿ ಭಾಷೆಯ ಹಿರಿಯ ಕಾದಂಬರಿಕಾರ ನಾನಕ್‌ಸಿಂಗ್‌ರ ಕಾದಂಬರಿಗಳನ್ನು ಮತ್ತು ಗುರುಭಕ್ಷ್‌ಸಿಂಗ್‌ರ ಲೇಖನಗಳನ್ನು ಮತ್ತು ಅಮೃತಾ ಪ್ರೀತಮ್‌ರವರ ಕವನಗಳನ್ನು ಓದಿದರು. ಈ ಎಲ್ಲ ಪುಸ್ತಕಗಳಲ್ಲಿ ಅವರ ಮೇಲೆ ಹೆಚ್ಚು ಪ್ರಭಾವ ಬೀರಿದ ಪುಸ್ತಕಗಳು ಗಾಂಧೀ ಬರಹದ ಪುಸ್ತಕಗಳಾಗಿದ್ದವು. ಗಾಂಧೀಯವರ ಸತ್ಯದೊಂದಿಗೆ ನನ್ನ ಪ್ರಯೋಗ ಎಂಬ ಪುಸ್ತಕವನ್ನು ಆಳವಾಗಿ ಅಧ್ಯಯನ ಮಾಡಿದರು. ಅದನ್ನು ಓದುವಾಗ ಅವರ ಮನಸ್ಸಿನಲ್ಲಿ ದೇವಸುಮನ್‌ರ ಜೀವನ ಮತ್ತು ಅವರ ಹುತಾತ್ಮತೆ ಇದ್ದವು. ಅವರು ಗಾಂಧೀಯವರ ಸತ್ಯ ಮತ್ತು ಅಹಿಂಸೆಯ ವಿಚಾರಗಳಿಂದ ಅಷ್ಟೇ ಪ್ರಭಾವಿತರಾಗದೆ ಆ ವಿಚಾರಗಳನ್ನು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಹೇಗೆ ವ್ಯವಹಾರಿಕವಾಗಿ ಅನುಸರಿಸಲ್ಪಟ್ಟಿತೊ ಎಂಬುದರಿಂದಲೂ ಪ್ರಭಾವಿತರಾದರು. ಗಾಂಧೀಯವರ ವಿಚಾರಗಳನ್ನು ಓದಿದ ನಂತರ ಗಾಂದೀಯವರ ವಿಚಾರದ ತಿರುಳು ಕೆಳಮಟ್ಟದಿಂದ ಮೇಲ್ಮಟ್ಟದವರೆಗೆ ಸಮಾಜವನ್ನು ಪುನಾರಚಿಸುವುದಾಗಿದೆ ಎಂದು ತಿಳಿದರು. ಸಮಾಜ ಪುನಾರಚನೆಯ ಕೆಲಸಕ್ಕಾಗಿ ರಾಷ್ಟ್ರೀಯ ಐಕ್ಯತೆ ಮತ್ತು ಪರಸ್ಪರರ ಧರ್ಮಗಳ ಬಗ್ಗೆ ಗೌರವ ಹೊಂದುವುದು ಅಗತ್ಯವಾಗಿತ್ತು. ಅಲ್ಲದೆ ಹಳ್ಳಿಗಳಲ್ಲಿಯ ನೈರ್ಮಲ್ಯತೆ ಕಾಪಾಡುವುದು ತುಂಬ ಅಗತ್ಯವಾಗಿತ್ತು. ನೈರ್ಮಲ್ಯತೆಯ ಅಭಾವವೇ ಭಾರತದ ಹೆಮ್ಮೆಯ ಹಳ್ಳಿಗಳು ಗೊಬ್ಬರದ ಗುಂಡಿಗಳಾಗಿವೆ ಎಂದು ಗಾಂಧೀ ಭಾವಿಸಿದ್ದರು. ಖಾದಿ ಉದ್ಯೋಗದ ಜೊತೆಗೆ ಇತರ ಗ್ರಾಮೋದ್ಯೋಗಗಳನ್ನು ಜೀವಿತಗೊಳಿಸುವ ಕಾರ್ಯವು ಒಳಗೊಂಡಿತ್ತು. ಗ್ರಾಮೋದ್ಯೋಗಗಳಲ್ಲಿ ಎಣ್ಣೆ ಗಾಣ, ಬೀಸುವುದು, ಸೋಪು, ಕಾಗದ ಮತ್ತು ಜೆಂಕಿಪೊಟ್ಟಣ ಮಾಡುವುದು ಇತ್ಯಾದಿ ಸೇರಿದ್ದವು. ಈ ಉದ್ಯೋಗಗಳನ್ನು ಗಾಂಧೀಜಿ ಖಾದಿಯ ಸಖಿಯರೆಂದು ಕರೆದಿದ್ದರು. ಅಂದರೆ ವಿಕೇಂದ್ರಿತ ಉತ್ಪಾದನೆ ಮತ್ತು ಜೀವನಾವಶ್ಯಕ ಪದಾರ್ಥಗಳ ವಿತರಣೆ. ಈ ಉದ್ಯಮಗಳ ಗೊಂದಲಮಯ ವಿವರಣೆಯಿಂದಾಗಿ ಸುಂದರಲಾಲರು ಭ್ರಮಿತರಾದರು. ಭಗವದ್ಗೀತೆಯಿಂದ ರಚನಾತ್ಮಕ ಕಾರ್ಯಕ್ಕಾಗಿ ಪಡೆದಿದ್ದ ಆಧ್ಯಾತ್ಮಿಕ ಬೆಂಬಲವನ್ನು ಸುಂದರಲಾಲ್

ಭಗವದ್ಗೀತೆಯಲ್ಲಿ ಕಂಡುಕೊಂಡರು.

ಲಾಹೋರ್‌ನಲ್ಲಿದ್ದಾಗ ಸುಂದರಲಾಲರು ತಮ್ಮನ್ನು ಬಡತನದ ಸ್ಥಿತಿಗೆ ಹೊಂದಿಸಿಕೊಂಡಿದ್ದರು. ಸಿಕ್ಕನ್‌ವಾಲಾದಲ್ಲಿ ಇದ್ದ ಮೇಲಂತೂ ತಮ್ಮ ಶ್ರೀಮಂತ ಕುಟುಂಬದ ಯಾವುದೇ ಸದಸ್ಯರ ಜೊತೆಗೆ ಸಂಪರ್ಕವಿಲ್ಲದಂತೆ ಮಾಡಿತು. ಆದರೆ ಸಿಕ್ಕನ್‌ವಾಲಾದಲ್ಲಿ ಅವರು ವಾಸಿಸುತ್ತಿದ್ದ ರೈತರ ಮನೆ ಸಿರಿವಂತಿಕೆವುಳ್ಳದ್ದಾಗಿತ್ತು. ಆದ್ದರಿಂದ ಅವರಿಗೆ ಅನೇಕ ವೈಭೋಗದ ವಸ್ತುಗಳು ಸುಲಭವಾಗಿ ದೊರೆಯುತ್ತಿದ್ದವು. ಕುದುರೆಯನ್ನು ಹತ್ತಬೇಕೆಂಬ ಬಾಲ್ಯದ ಕನಸು ಸಹ ಅಲ್ಲಿ ನನಸಾಯಿತು. ಸುಂದರಲಾಲರ ತಂದೆ ಕುದುರೆಗಳ ದೊಡ್ಡ ಪ್ರೇಮಿಯಾಗಿದ್ದರು. ಸುಂದರಲಾಲ್ ಮಗುವಾಗಿದ್ದಾಗ ಅವರ ತಂದೆ ಅವರನ್ನು ಕುದುರೆ ಮೇಲೆ ಕೂರಿಸಿಕೊಂಡು ಹೊರಸುತ್ತಾಟಕ್ಕೆ ಹೋಗುತ್ತಿದ್ದರು. ಆದರೆ ಸುಂದರಲಾಲ ಎಂಟು ವರ್ಷದವರಿದ್ದಾಗ ಅವರ ತಂದೆ ತೀರಿಕೊಂಡರು. ಅಂದಿನಿಂದ ಅವರಿಗೆ ಕುದುರೆ ಸವಾರಿ ಮಾಡುವ ಅವಕಾಶ ಸಿಕ್ಕಿರಲಿಲ್ಲ. ಈಗ ಪ್ರತಿದಿನ ಸಂಜೆ ಮಿತ್ರರಾದ ನಿರಂಜನ ಮತ್ತು ಕಾರ್ನೈಲ್ ಅವರ ಜೊತೆ ಜಂಗ್ ಕಾಲುವೆ ಗುಂಟ ಕುದುರೆ ಸವಾರಿ ಮಾಡಲು ಹೋಗುತ್ತಿದ್ದರು. ಪೌಷ್ಟಿಕ ಆಹಾರವನ್ನು ಸುಖ ಜೀವನವನ್ನು ಸುಂದರಲಾಲ್ ಖುಷಿಯಿಂದ ಅನುಭವಿಸಿದರು. ಆದರೆ ಗಾಂಧೀ ಸಾಹಿತ್ಯದ ಅವರ ಓದು ಈ ಶ್ರೀಮಂತಿಕೆಯ ಜೀವನ ಪದ್ಧತಿಯನ್ನು ಅಣಕಿಸುವಂತಿತ್ತು. ಗಾಂಧೀಯವರ ನಿಸ್ವಾರ್ಥ ಸೇವೆ, ಸ್ವಾಧ್ಯಾಯ, ಶ್ರಮದಾನ, ಅಸ್ವಾದ ಮುಂತಾದ ಆದರ್ಶಗಳಿಂದ ವಿಶೇಷವಾಗಿ ಪ್ರಭಾವಿತರಾದರು. ಈ ತತ್ವಗಳನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಳ್ಳಲು ಪ್ರಾರಂಭಿಸಿದರು. ಮೊಟ್ಟ ಮೊದಲನೆಯದಾಗಿ ತಮಗೆ ಈಗ ಸಿಗುತ್ತಿರುವ ಸುಖ ಭೋಜನದ ಹಕ್ಕನ್ನು ಪ್ರಶ್ನಿಸಿಕೊಳ್ಳಲಾರಂಭಿಸಿದರು. ರೈತ ಕುಟುಂಬದ ಹಿರಿಯರಲ್ಲಿ ಪ್ರಾರ್ಥಿಸಿ ತಮಗೆ ಸಾಮಾನ್ಯ ರೀತಿಯ ಊಟಕೊಡಲು ವಿನಂತಿಸಿಕೊಂಡರು. ಆದರೆ ಆ ವಿಚಾರವನ್ನು ಆ ಕುಟುಬವು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ಆದ್ದರಿಂದ ನಾಲಗೆ ಮೇಲೆ ಹಿಡಿತ ಸಾಧಿಸುವುದೇ ಗಾಂಧೀಯವರ ಆದರ್ಶ ಪಾಲಿಸುವುದಕ್ಕೆ ಇರುವ ಉತ್ತಮ ಮಾರ್ಗವೆಂದು ತಿಳಿದರು. ಭವಿಷ್ಯದಲ್ಲಿ ತಾವು ಕೈಗೊಳ್ಳಬಹುದಾದ ಕಠಿಣತಮ ಉಪವಾಸಗಳಿಗೆ ಈ ಶಿಸ್ತು ತುಂಬ ಉಪಯೋಗಕಾರಿಯೆಂದು ಅನಿಸಿತು. ಶ್ರೀ ದೇವಸುಮನ್‌ರವರು ಹೇಳಿದ್ದ ಮೊದಲ ಪಾಠವನ್ನು ಜ್ಞಾಪಿಸಿಕೊಂಡು ಸುಂದರಲಾಲ್ ಪುನಃ ಚರಕ ಕೈಗೆತ್ತಿಕೊಂಡು ನೂಲು ತೆಗೆಯುವ ಅಭ್ಯಾಸ ಪ್ರಾರಂಭಿಸಿದರು. ಸಿಕ್ಕನ್‌ವಾಲಾ ಸುತ್ತ ಹೊಲಗಳಲ್ಲಿ ಹತ್ತಿ ಬೆಳೆಯಲಾಗುತ್ತಿತ್ತು. ಪ್ರತಿ ಮನೆಯಲ್ಲೂ ನೂಲುಗಾರಿಕೆ ನಡೆಯುತ್ತಿತ್ತು. ಆದರೆ ನೂಲುಗಾರಿಕೆ ಮಹಿಳೆಯ ಕೆಲಸವೆಂದು ಭಾವಿಸಲಾಗಿತ್ತು. ಸುಂದರಲಾಲ್ ಚರಕದಲ್ಲಿ ದಾರ ತೆಗೆಯುವುದನ್ನು ಮಕ್ಕಳು ಮೊದಲಬಾರಿಗೆ ನೋಡಿದಾಗ ಅವರು ತಮಾಷೆಗೆ ಏನೋ ಮಾಡುತ್ತಿದ್ದಾರೆ ಎಂದು ಆಲೋಚಿಸಿದರು. ಆದರೆ ಸುಂದರಲಾಲ್ ಗಂಟೆಕಟ್ಟಲೆ ನೂಲು ತೆಗೆಯುವುದನ್ನು ನೋಡಿದ ಮೇಲೆ ಅವರಿಗೆಲ್ಲ ಕುತೂಹಲ ಉಂಟಾಯಿತು. ಮತ್ತು ತಮಾಷೆಯಾಗಿ ಮಾತನಾಡಲು ಪ್ರಾರಂಭಿಸಿದರು. ಮುಂದೆ ಸುಂದರಲಾಲ್ ನಯವಾದ ಖಾದಿ ಬಟ್ಟೆಯನ್ನು ಧರಿಸಲು ನಿರಾಕರಿಸಿ ತಾವೇ ಸ್ವತಃ ತೆಗೆದ ದಾರದಿಂದ ತಯಾರಿಸಿದ ಒರಟಾದ ಖಾದಿ ಬಟ್ಟೆಯನ್ನು ಧರಿಸುವುದಾಗಿ

ತೀರ್ಮಾನಿಸಿದ ಮೇಲೆ ಅವರಿದ್ದ ಕುಟುಂಬದ ಸದಸ್ಯರಿಗೆ ಮುಜುಗರ ಉಂಟಾಗುತ್ತಿತ್ತು. ಹಳ್ಳಿಯ ಸುತ್ತಲೂ ಗಲೀಜು ಇರುವುದನ್ನು ಮತ್ತು ಎಲ್ಲೆಂದರಲ್ಲಿ ಮಲಮೂತ್ರ ವಿಸರ್ಜನೆಯಾಗುತ್ತಿರುವುದನ್ನು ಸುಂದರಲಾಲ್ ಗಮನಿಸಿದರು. ಕಸ ಗುಡಿಸಲು ಬರುತ್ತಿದ್ದ ವ್ಯಕ್ತಿ ಕೃಷಿ ಕಾರ್ಮಿಕನಾಗಿ ಕೆಲಸ ಬಿಟ್ಟು ಹೋದ. ಆಗ ಸುಂದರಲಾಲರು ಈ ವಿಷಯದಲ್ಲಿ ಏನನ್ನಾದರೂ ಮಾಡಬೇಕೆಂದು ತೀರ್ಮಾನಿಸಿದರು. ಗಾಂಧೀಯವರ ನಿಸ್ವಾರ್ಥ ಸೇವೆ ವಿಷಯದಿಂದ ಸಬಲೀಕರಣಗೊಂಡು ಅವರೇ ಸ್ವತಃ ಕಸಗುಡಿಸುವವನಾಗಿ ಕೆಲಸ ಪ್ರಾರಂಭಿಸಿದರು. ಸುತ್ತಲಿದ್ದ ಕಸವನ್ನೆಲ್ಲ ಕೂಡಿಹಾಕಿ ಅದನ್ನು ಬೂದಿ ಅಥವಾ ಮಣ್ಣಿನಿಂದ ಮುಚ್ಚುತ್ತಿದ್ದರು. ನಂತರ ಅದೆಲ್ಲವನ್ನು ಬಕೆಟ್‌ನಲ್ಲಿ ಸಂಗ್ರಹಿಸಿ ತೋಟದಲ್ಲಿ ಕೂಡಿಹಾಕುತ್ತಿದ್ದರು. ಸುಂದರಲಾಲರ ಈ ನಡುವಳಿಕೆ ಅವರಿದ್ದ ಕುಟುಂಬದವರಿಗೆ ಕಿರಿಕಿರಿ ಮಾಡಲಾರಂಭಿಸಿತು. ತಮ್ಮ ಮನೆಯ ಹಿರಿಯ ಮಗನಂತಿರುವ ಸುಂದರಲಾಲರು ಭಂಗಿ ಕೆಲಸ ಮಾಡುವುದು ತಮ್ಮ ಕುಟುಂಬ ಗೌರವಕ್ಕೆ ಕುಂದು ಎಂದು ಭಾವಿಸಿದರು. ಸುಂದರಲಾಲರನ್ನು ತ್ಯಜಿಸುವುದಕ್ಕಿಂತ ಬೀದಿಗಳನ್ನು ಗಲೀಜು ಮಾಡುತ್ತಿದ್ದವರನ್ನು ಅವರು ಬೈಯಲು ಪ್ರಾರಂಭಿಸಿದರು. ಆದರೆ ಸುಂದರಲಾಲರಿಗೆ ಹಳ್ಳಿ ಸ್ವಚ್ಛವಾಗಿರಬೇಕು ಮತ್ತು ತಾನು ಹಳ್ಳಿಯ ಸಮುದಾಯದ ಒಳ್ಳೆಯದಕ್ಕಾಗಿ ಶ್ರಮವಹಿಸಬೇಕೆಂಬುದು ಮಹತ್ವದ ಸಂಗತಿಯಾಗಿತ್ತು. ಅದೊಂದು ಗೌರವದ ಕೆಲಸವೆಂದೇ ಅವರಿಗೆ ಅನಿಸಿತ್ತು. ಅಲ್ಲದೇ ತನ್ನಲ್ಲಿರುವ ಅಹಂಕಾರವನ್ನು ಹೋಗಲಾಡಿಸುವ ಮಾರ್ಗವೆಂದೂ ಭಾವಿಸಿದ್ದರು. ಸಿಖ್ ಧರ್ಮದ ಪ್ರಕಾರ ಅಹಂಕಾರವೆಂಬುದು ದೇವರೊಂದಿಗೆ ಒಂದಾಗುವುದಕ್ಕೆ ಅಡ್ಡಿಯೆಂದು ಭಾವಿಸಿದ್ದರು. ಅನೇಕ ವರ್ಷಗಳ ತರುವಾಯ ಬಾಬಾ ರಾಘವದಾಸ್ ಎಂಬ ಶ್ರದ್ಧಾವಂತ ಗಾಂಧೀ ವಿಚಾರದ ಸಮಾಜ ಸೇವಕ ಸುಂದರಲಾಲರಿಗೆ ಗಾಂಧೀಯವರು ಬರೆದ ಸೇವಕನ ಪ್ರಾರ್ಥನೆ ಎಂಬ ಕವನವನ್ನು ಕೊಟ್ಟರು. ಆ ಕವನವನ್ನು ಓದಿದ ನಂತರ ಸುಂದರಲಾಲರಿಗೆ ತಾವು ಮಾಡುತ್ತಿರುವ ಕೆಲಸದ ಮಹತ್ವ ತಿಳಿಯಿತು. ಗಾಂಧೀಯವರು ಆ ಪ್ರಾರ್ಥನೆಯನ್ನು ತಮ್ಮ ಇಂಗ್ಲಿಷ್ ಶಿಷ್ಯೆ ಮೀರಾ ಬೆಹನ್‌ರ ವಿನಂತಿಯ ಮೇರೆಗೆ ರಚಿಸಿದ್ದರು. ಆ ಕವಿತೆಯನ್ನು ಸುಂದರಲಾಲರು ನನಗೆ ಓದಿ ಹೇಳಿದರು. ಮೂಲ ಇಂಗ್ಲಿಷ್ ಕವಿತೆಯ ಪ್ರಾದೇಶಿಕ ಭಾಷೆಯ ಅನುವಾದ ಈ ರೀತಿ ಇದೆ.

ಹೇ ನಮ್ರತೆಯ ಸಾಗರನೆ
ದೀನ ಭಂಗಿಗಳ ಕುಟೀರದ ನಿವಾಸಿಯೆ
ಗಂಗಾ, ಯಮುನಾ ಮತ್ತು ಬ್ರಹ್ಮಪುತ್ರದ ಜಲದಿಂದ
ಸಿಂಚಿತ ಈ ಸುಂದರ ದೇಶದಲ್ಲಿ
ನಿನ್ನನ್ನು ಎಲ್ಲ ಸ್ಥಳದಲ್ಲಿ ಹುಡುಕಲು ಸಹಾಯ ಮಾಡು.
ನಮಗೆ ಗ್ರಹಣಶೀಲತೆ ಮತ್ತು ಮುಕ್ತ ಮನಸ್ಸುಕೊಡು.
ನೀನು ನಿನ್ನ ನಮ್ರತೆಯನ್ನು ಕೊಡು.
ಹಿಂದೂಸ್ಥಾನದ ಜನತೆಯಲ್ಲಿ
ಏಕರೂಪನಾಗುವ ಶಕ್ತಿ ಮತ್ತು ಉತ್ಕಂಠತೆ ಕೊಡು.
ಹೇ ದೇವರೇ! ನೀನು ಆಗಲೇ ನೆರವಿಗೆ ಬರುತ್ತೀ

ಯಾವಾಗ ಮನುಷ್ಯ ಶೂನ್ಯನಾಗಿ ಶರಣಾಗುತ್ತಾನೆ.
ಆಗ ನೀನು ನಮಗೆ ಸೇವಕ ಮತ್ತು ಮಿತ್ರನೆಂದು ಭಾವಿಸಿ
ಯಾವ ದೇಶದ ಜನತೆಯ ಸೇವೆ ಮಾಡಬಯಸುತ್ತೇವೆಯೋ
ಈ ದೇಶವನ್ನು ನಾವು ಹೆಚ್ಚು ತಿಳಿಯುವಂತಾಗಲು
ಮತ್ತೂ ಹೆಚ್ಚು ತಿಳಿಯುವಂತಾಗಲು ·
ತ್ಯಾಗ, ಭಕ್ತಿ, ನಮ್ರತೆಯ ಮೂರ್ತಿಯನ್ನಾಗಿ ಮಾಡು.

– ಮೋ.ಕ.ಗಾಂಧೀ

ಗಾಂಧೀಗೆ ದೇವರು ವೈಭವಯುತ ದೇವಸ್ಥಾನಗಳ ಅಥವಾ ಚಿನ್ನದ ವಿಗ್ರಹಗಳ ನಿವಾಸಿಯಾಗಿರಲಿಲ್ಲ. ದೇವರು ಬಡವರಲ್ಲಿ ಅತ್ಯಂತ ಬಡವರಾಗಿರುವರ ಮಧ್ಯೆ ಇರುವಂಥವನಾಗಿದ್ದಾನೆ. ಮಲವನ್ನು ಸಂಗ್ರಹಿಸುವಾಗ ಭಂಗಿಗಳ ಕಷ್ಟವನ್ನು ಅರ್ಥ ಮಾಡಿಕೊಳ್ಳುತ್ತಿದ್ದರು. ಗಾಂಧೀ ಯಾರನ್ನು ದೇವರ ಮಕ್ಕಳೆಂದು ತಿಳಿದಿದ್ದರೋ ಅಂಥವರ ಮಧ್ಯೆ ಸುಂದರಲಾಲರು ಗುರುತಿಸಿಕೊಳ್ಳಲಾರಂಭಿಸಿದರು. ತಮ್ಮ ನೂಲುಗಾರಿಕೆ ಮತ್ತು ನೈರ್ಮಲ್ಯೀಕರಣದ ಕೆಲಸದೊಂದಿಗೆ ತಾವಿದ್ದ ಕುಟುಂಬದ ಮಕ್ಕಳಿಗೆ ಒಳ್ಳೆಯ ಅಧ್ಯಾಪಕರಾಗಿಯೂ ಕೆಲಸ ಮಾಡಿದರು. ಅವರು ನಡೆಸುತ್ತಿದ್ದ ಸರಳ ಜೀವನ ಮಕ್ಕಳ ಮೇಲೆ ಅವರು ಮಾಡುತ್ತಿದ್ದ ಪಾಠ ಪ್ರವಚನಗಳಿಗಿಂತ ಹೆಚ್ಚು ಪ್ರಭಾವ ಬೀರಿತು. ಈ ಸಂಗತಿ ಆ ಕುಟುಂಬದಲ್ಲಿ ಬಿರುಗಾಳಿಯನ್ನು ಎಬ್ಬಿಸಿತು. ಆ ಕುಟುಂಬದ ತಾಯಿ ಸುಂದರಲಾಲರ ಬಳಿಗೆ ಬಂದು ಹೀಗೆ ಪ್ರಶ್ನೆ ಹಾಕಿದಳು. "ಈ ಮಕ್ಕಳಿಗೆ ಏನು ಕಲಿಸುತ್ತಿದ್ದೀಯೆ. ಈ ಮಕ್ಕಳು ಸಮಾಜದಲ್ಲಿ ಬೆರೆಯ ಬೇಕಾಗಿದೆ. ನೀನು ಕಲಿಸುತ್ತಿರುವ ರೀತಿಯಲ್ಲಿ ಮಕ್ಕಳು ನಡೆದುಕೊಂಡರೆ ಜನರು ಅವರನ್ನು ಗೌರವಯುತ ಕುಟುಂಬದ ಮಕ್ಕಳೆಂದು ನಂಬುವುದಿಲ್ಲ" ಎಂದು ಸುಂದರಲಾಲರನ್ನು ತರಾಟೆಗೆ ತೆಗೆದುಕೊಂಡರು. ಸುಂದರಲಾಲರ ನಡುವಳಿಕೆ ಮತ್ತು ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಿದ್ದ ತತ್ವಗಳು ಆ ಕುಟುಂಬಕ್ಕೆ ಒಂದು ರೀತಿಯಲ್ಲಿ ಸವಾಲಾಗಿದ್ದರೂ ಸಹ ಮಕ್ಕಳ ಮೇಲಿನ ಅವರ ಪ್ರಭಾವ ಮುಂದುವರಿಯಿತು ಮತ್ತು ಅವರನ್ನು ಪ್ರೀತಿಸುವಂತೆ ಮಾಡಿತು. ಕುಟುಂಬದ ಯಜಮಾನ ಗುಲಾಸಿಂಗ್‌ಗೆ ಕೂಡ ಸುಂದರಲಾಲರ ಬಗ್ಗೆ ಅಭಿಮಾನ ಉಂಟಾಗಿ ತನ್ನ ವಿಶೇಷ ಅತಿಥಿಗಳಿಗೆ ಸುಂದರಲಾಲರನ್ನು ಪರಿಚಯಿಸುವುದರಲ್ಲಿ ಅಭಿಮಾನ ಪಡೆಯುತ್ತಿದ್ದ. ಸುಂದರಲಾಲರು ಇಂಗ್ಲಿಷ್ ಮಾತನಾಡುತ್ತಾರೆ ಮತ್ತು ಮಕ್ಕಳಿಗೆ ಪಾಠ ಮಾಡುತ್ತಾರೆ ಎಂದು ಸಹ ಒತ್ತಿ ಹೇಳುತ್ತಿದ್ದರು. ಒಂದು ಬಾರಿ ಅವರ ಮನೆಗೆ ಹತ್ತಿರದ ಪೋಲೀಸ್ ಠಾಣೆಯ ಅಧಿಕಾರಿ ಬಂದರು. ಆತ ವಾಡಿಕೆಯ ರೀತಿಯಲ್ಲಿ ಬಂದಿದ್ದನೇ ಹೊರತು ಹಳ್ಳಿಯಲ್ಲಿಯ ಯಾವುದೇ ಅಪರಾಧದ ತನಿಖೆಗಾಗಿ ಬಂದಿರಲಿಲ್ಲ. ಆ ಪೋಲೀಸ್ ಅಧಿಕಾರಿ ತನ್ನನ್ನು ಗುರುತಿಸಲು ಸಾಧ್ಯವಾಗದಂತೆ ಸುಂದರಲಾಲರು ತೋಟದಲ್ಲಿ ಅವಿತುಕೊಂಡರು. ಆತ ಹೋದ ಮೇಲೆ ಹೊರಬಂದರು. ತಮ್ಮ ಗುರುತು ಸಿಗುವ ಸಾಧ್ಯತೆ ತುಂಬ ಕಡಿಮೆ ಎಂದು ಭಾವಿಸಿದ್ದರು. ಅಂದಿನ ದಿನಗಳಲ್ಲಿ ಪೂರ್ತ ಸಿಖ್‌ನಂತೆಯೇ ಕಾಣುತ್ತಿದ್ದರು. ಸಿಖ್ ಹೆಸರನ್ನು ಸಹ ಇಟ್ಟುಕೊಂಡಿದ್ದರು. ಇದು ಸಾಲದಕ್ಕೆ ಅವರು ಒಂದು ಸಿಖ್ ಕುಟುಂಬದಲ್ಲೇ ಇದ್ದರು. ಅವರಿಗಿದ್ದ ಒಂದೇ ಒಂದು ಕಷ್ಟವೇನೆಂದರೆ ತಲೆಗೆ ಪೇಟ

ಸುತ್ತಿಕೊಳ್ಳುವುದು ಸಾಧ್ಯವಾಗುತ್ತಿರಲಿಲ್ಲ. ೧೯೪೬ ಮೇ ತಿಂಗಳಲ್ಲಿ ಸುಂದರಲಾಲ್ ತಮಗೆ ಸನಾತನ ಧರ್ಮ ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದ ಪ್ರೋಫೆಸರ್ ರೋಷನ್ ವರ್ಮಾರವರಿಗೆ ಒಂದು ಪತ್ರ ಬರೆದರು. ಆಗ ಸುಂದರಲಾಲರಿಗೆ ರಿಗೆ ೧೯ ವರ್ಷ ವಯಸ್ಸು. ತಮ್ಮ ಕಾಗದದಲ್ಲಿ ತಾವು ಇರುತ್ತಿದ್ದ ಸ್ಥಳದ ಬಗ್ಗೆ ಮತ್ತು ತಾವು ಮಾಡುತ್ತಿರುವ ಕೆಲಸದ ಬಗ್ಗೆ ವಿವರವಾಗಿ ತಿಳಿಸಿದರು. ಆ ಕಾಗದಕ್ಕೆ ಪ್ರೋಫೆಸರ್ ವರ್ಮಾ .ಕೂಡಲೆ ಉತ್ತರಿಸಿದರು. ಪೋಲೀಸರಿಗೆ ಸುಂದರಲಾಲರ ಕೇಸ್‌ನಲ್ಲಿ ಈಗ ಯಾವ ಆಸಕ್ತಿಯೂ ಇಲ್ಲ ಮತ್ತು ಅವರ ಬಂಧನದ ಯಾವ ಭೀತಿಯೂ ಇಲ್ಲ ಎಂದು ತಿಳಿಸಿದರು. ಅಲ್ಲದೆ, ಸ್ವಾತಂತ್ರ್ಯದ ಮಾತು ಎಲ್ಲಡೆ ಕೇಳಿ ಬರುತ್ತಿತ್ತು. ಲಾಹೋರ್‌ಗೆ ಕೂಡಲೆ ಬಂದು ಬಿಡಬೇಕೆಂದು ಪ್ರೋಫೆಸರ್ ವರ್ಮಾ ಸೂಚಿಸಿದರು. ಸುಂದರಲಾಲ್ ಕೂಡಲೆ ವರ್ಮಾರನ್ನು ಭೇಟಿಮಾಡುವುದಕ್ಕೆ ಸಿದ್ಧತೆ ಮಾಡಿಕೊಂಡು ಲಾಹೋರ್‌ಗೆ ಹೊರಟರು. ಸುಂದರಲಾಲ್ ಎಷ್ಟರ ಮಟ್ಟಿಗೆ ಸಿಖ್ ವೇಷಭೂಷ, ರೀತಿನೀತಿ ಅಳವಡಿಸಿಕೊಂಡಿದ್ದರೆಂದರೆ ಲಾಹೋರ್‌ನಲ್ಲಿ ಅವರ ಸ್ನೇಹಿತರು ಸುಂದರಲಾಲರನ್ನು ಗುರುತಿಸಲು ಅಸಮರ್ಥರಾದರು. ಪ್ರೋಫೆಸರ್ ವರ್ಮಾ ಕೂಡ ಅವರನ್ನು ಗುರುತಿಸುವುದು ಸಾಧ್ಯವಾಗಲಿಲ್ಲ. ಅವರಿಬ್ಬರ ಭೇಟಿ ಆನಂದಮಯವಾಗಿತ್ತು. ನಂತರ ಸುಂದರಲಾಲ್ ಸಿಕ್ಕನ್‌ವಾಲಾಗೆ ಹೋಗಿ ಅಲ್ಲಿ ತಾವಿದ್ದ ಕುಟುಂಬದ ಸದಸ್ಯರಿಗೆ ವಿದಾಯ ಹೇಳಿ ಬಂದರು. ಆ ವಿದಾಯ ಬಹಳ ದುಃಖದಾಯಕವಾಗಿತ್ತು. ಮಕ್ಕಳೆಲ್ಲರೂ ಅವರು ಹೋಗುವುದಕ್ಕಾಗಿ ತುಂಬ ಅತ್ತರು. ದೀಪಾವಳಿ ಹಬ್ಬದಲ್ಲಿ ತಾವು ಭೇಟಿ ಮಾಡಲು ಬರುವುದಾಗಿ ಮಕ್ಕಳಿಗೆ ಮಾತು ಕೊಟ್ಟರು. ಲಾಹೋರ್‌ಗೆ ಬರುತ್ತಲೇ ಸನಾತನ ಧರ್ಮ ಕಾಲೇಜ್‌ಗೆ ಹೋದರೂ ಈಗ ಅವರು ಎಸ್.ಮಾನ್‌ಸಿಂಗ್ ಆಗಿರದೆ ಬಹುಗುಣ ಆಗಿದ್ದರು. ಕಾಲೇಜಿನ ವಿದ್ಯಾರ್ಥಿಯಾಗಿದ್ದರು. ಆದರೆ ಈಗ ಈ ವಿದ್ಯಾರ್ಥಿ ಜೀವನದ ಬಗ್ಗೆ ಹೊಸ ದೃಷ್ಟಿಕೋನ ಹೊಂದಿದ ವಿದ್ಯಾರ್ಥಿಯಾಗಿದ್ದರು. ಶೈಕ್ಷಣಿಕ ಜೀವನಕ್ಕೆ ಹಿಂದಿರುಗಿದ ಕೂಡಲೇ ಸುಂದರಲಾಲ್ ತಮ್ಮ ಅಧ್ಯಯನವನ್ನು ತುಂಬ ಗಂಭೀರವಾಗಿ ತೆಗೆದುಕೊಂಡರು. ಆದರೆ ರಾಜ್ಯಶಾಸ್ತ್ರದ ಸೂತ್ರಗಳು ಮತ್ತು ಐತಿಹಾಸಿಕ ಘಟನೆಗಳು ವಾಸ್ತವ ಜೀವನಕ್ಕೆ ಹೆಚ್ಚು ಪ್ರಯೋಜನ ಇಲ್ಲವೆಂದು ಅವರಿಗೆ ಅನಿಸಲಾರಂಭಿಸಿತು. ಏಕೆಂದರೆ ಗಾಂಧೀಯವರ ರಚನಾತ್ಮಕ ಕಾರ್ಯದಿಂದ, ಭಗವದ್ಗೀತೆಯಿಂದ ಮತ್ತು ಗ್ರಂಥಸಾಹೇಬದಿಂದ ಅವರಿಗೆ ಜೀವನದ ಒಳನೋಟ ಪರಿಚಯವಾಗಿತ್ತು. ಅವರು ಸ್ಥಾನೀಯ ಪ್ರಜಾಮಂಡಲದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ೧೯೪೭ ಮೇನಲ್ಲಿ ಅವರು ಇಂಗ್ಲಿಷ್, ಇತಿಹಾಸ ಮತ್ತು ರಾಜ್ಯಶಾಸ್ತ್ರದಲ್ಲಿ ಬಿ.ಎ.ಪದವಿಗಾಗಿ ಪರೀಕ್ಷೆ ತೆಗೆದುಕೊಂಡರು. ಮತ್ತು ಅಗಸ್ಟ್ ೧೫ ದೇಶಕ್ಕೆ ಸ್ವಾತಂತ್ರ ಬಂದು ದೇಶ ಬಿಡುಗಡೆಯಾದ ದಿನವೇ ಅವರಿಗೆ ಬಿ.ಎ. ಪದವಿ ದೊರೆಯಿತು. ದೇಶದ ಸ್ವಾತಂತ್ರ್ಯ ಹೋರಾಟ ದೇಶದ ವಿಭಜನೆಯೊಂದಿಗೆ ಕೊನೆಗೊಂಡಿತು. ಪಂಜಾಬ್ ಎರಡಾಯಿತು. ತಮ್ಮ ಅಂತಿಮ ಪರೀಕ್ಷೆ ಮುಗಿಸಿಕೊಂಡು ಪದವಿಯನ್ನು ಪಡೆದಾದ ನಂತರ ಅವರು ತೆಹರಿಗೆ ಹೊರಟರು. ಮುದೆಂದಿಗೂ ಅವರು ಲಾಹೋರನ್ನಾಗಲಿ, ಸಿಕ್ಕನ್‌ವಾಲಾವನ್ನಾಗಲೀ ನೋಡಲಿಲ್ಲ.

(ಮುಂದುವರಿಯುವುದು...)

ಸ್ವಯಂ ಸೇವಾ ಸಂಘ-ಸಂಸ್ಥೆಗಳ ಕಾರ್ಯಕ್ಷೇತ್ರಕ್ಕೆ ಗಾಂಧೀಜಿಯವರ ಆದರ್ಶ

- ಜಿ.ಎಸ್.ಜಯದೇವ

"ನನ್ನ ಜೀವನವೇ ನನ್ನ ಸಂದೇಶ" ಎನ್ನುವ ಗಾಂಧೀಜಿಯವರ ಮಾತಿನ ಆಳವನ್ನು ಈವರೆಗೆ ದಾಖಲಾಗಿರುವ ಅವರ ಬರಹ ಮತ್ತು ನುಡಿಗಳ ಪ್ರತಿ ಅಕ್ಷರದಲ್ಲೂ ಗುರುತಿಸಬಹುದು. ಗಾಂಧೀ ಸಾಹಿತ್ಯ ಅಗಾಧವಾಗಿದೆ. ಹಾಗೆಯೇ ಗಾಂಧೀಜಿಯವರ ಮೇಲೆ ಬಂದಿರುವಷ್ಟು ಪುಸ್ತಕಗಳು ಬಹುಶಃ ಪ್ರಪಂಚದ ಇತರೆ ಯಾವುದೇ ವ್ಯಕ್ತಿಯ ಮೇಲೆ ಬಂದಿರಲಿಕ್ಕಿಲ್ಲ. ಅಗೆದಷ್ಟು ಹೊಸ ರತ್ನಗಳನ್ನು ಕೊಡುವ 'ಗಾಂಧೀಗಣಿ' ಮನುಷ್ಯಕುಲ ಇರುವವರೆಗೂ ಬರಿದಾಗಲಾರದು'.

ಎಲ್ಲರಿಗೂ ಅರ್ಥವಾಗಬಹುದಾದ ಅವರ ಸರಳ ನುಡಿಗಳು ಅದಕ್ಕೆ ಚಾಚೂತಪ್ಪದ ಆಚರಣೆಗಳು. ಸಂದಿಗ್ಧ ಕಾಲದಲ್ಲೂ ತಮ್ಮ ಅಂತರಂಗದ ವಾಣಿಗೆ ಬದ್ಧವಾಗಿ ತೆಗೆದುಕೊಂಡ ಅವರ ನಿರ್ಧಾರಗಳು ಇಡೀ ವಿಶ್ವಕ್ಕೆ ಮಾದರಿಯಾಗಿವೆ. ಅವರು ಹಿಡಿದಿದ್ದು ಸತ್ಯ-ಅಹಿಂಸೆಯ ಚುಕ್ಕಾಣಿ. ಇಂದು ಇಡೀ ಮನುಕುಲದ ನಾವೆಗೆ ಬೇಕಾದದ್ದು. ಚುಕ್ಕಾಣಿಯನ್ನು ಸಡಿಲ ಬಿಟ್ಟರೆ ಪರಿಣಾಮ ಏನು ಎಂಬುದನ್ನು ಇಂದಿನ ಭಯೋತ್ಪಾದನಾ ದಿನಗಳು, ಅಂತರರಾಷ್ಟ್ರೀಯ ಸಂಬಂಧಗಳು ಮತ್ತು ಇಂದಿನ ರಾಜಕೀಯ - ಈ ಎಲ್ಲವೂ ನಮಗೆ ಸ್ಪಷ್ಟವಾಗಿ ತೋರಿಸುತ್ತಿವೆ. ಆದರೂ ದಂಡ ಮಾತ್ರದಿಂದ ಬದಲಾಗಬಲ್ಲ ಭಂಡ ಮನುಕುಲ ಚುಕ್ಕಾಣಿಯನ್ನು ಸಡಿಲಬಿಟ್ಟು ದೊಡ್ಡ ದುರಂತದಲ್ಲಿ ಸಿಕ್ಕಿಕೊಂಡಿರುವುದು ದುರದೃಷ್ಟ.

ಈ ಸಂದರ್ಭದಲ್ಲಿ ಸರ್ಕಾರೇತರ ಸಂಸ್ಥೆಗಳು ಸರ್ಕಾರ ಸಾಧಿಸಲಾರದ ಗುಣಾತ್ಮಕ ಬದಲಾವಣೆಯನ್ನು ತರುವ ಉದ್ದೇಶದಿಂದ ಸ್ವಯಂ ಪ್ರೇರಣೆಯಿಂದ ಕೆಲಸ ಮಾಡುತ್ತಿರುವುದು ಪ್ರಶಂಸಾರ್ಹ. ಬೇಡಿಕೆ ಇದ್ದಲ್ಲೆಲ್ಲಾ ವ್ಯಾಪಾರಿ ಉದ್ದಿಮೆಗಳು ನಾಯಿ ಕೊಡೆಗಳಂತೆ ಹುಟ್ಟುವುದನ್ನು ನಾವು ನೋಡುತ್ತೇವೆ. ಹಾಗೆಯೇ ಸ್ವಯಂ ಸೇವಾ ಸಂಸ್ಥೆಗಳಿಗೂ ಅನೇಕ ಕಾರಣಗಳಿಗಾಗಿ ಇಂದು ಬೇಡಿಕೆ ಇದೆ. ಬೇಡಿಕೆ ಇದೆ ಎಂಬ ಕಾರಣಕ್ಕಾಗಿ ಮಾತ್ರ ಹುಟ್ಟಿಕೊಂಡ ಈ ಸಂಸ್ಥೆಗಳು ತಮ್ಮ ವ್ಯಾಪಾರಿ ಧೋರಣೆಯಿಂದ ಹೊರಬಂದು ಗುಣಾತ್ಮಕ ಬದಲಾವಣೆಯನ್ನು ಸಾಧಿಸಬೇಕಾದರೆ ಗಾಂಧಿಯ ಆದರ್ಶವನ್ನು ಕೊಂಚವಾದರೂ ಮೈಗೂಡಿಸಿಕೊಳ್ಳಬೇಕು. ಈ ಸಂದರ್ಭದಲ್ಲಿ ನಾವು ಗಮನಿಸಲೇಬೇಕಾದ ಮತ್ತೊಂದು ಮುಖ್ಯವಾದ ವಿಷಯವಿದೆ. ಅದೇನೆಂದರೆ, ಗಾಂಧೀಜಿಯ ಕೊಡುಗೆ ಕೇವಲ ಆದರ್ಶಗಳಷ್ಟೇ ಅಲ್ಲ. ಅವರು ಆದರ್ಶಗಳ ಜೊತೆಜೊತೆಗೆ ಈ ಆದರ್ಶದ ಹೃದಯ ಮಧ್ಯದಿಂದ ಹುಟ್ಟಿದ ಸುಸ್ಥಿರ ಅಭಿವೃದ್ಧಿಗಾಗಿ ಹಾಗೂ ನಿತ್ಯ ಶಾಶ್ವತ ಬದುಕಿಗಾಗಿ ಸರಳವಾದ ಮಾರ್ಗವನ್ನು ನಮಗೆ ಸೂಚಿಸಿದ್ದಾರೆ. ನಿತ್ಯ ಶಾಶ್ವತವಾದದ್ದು ಸರಳವಾಗಿಯೂ ಸುಂದರವಾಗಿಯೂ ಇರುತ್ತದೆ. ಅದನ್ನು ಕಾಣಲು ಸರಳ ಹೃದಯ ಬೇಕು. ರಾಮಕೃಷ್ಣ ಪರಮಹಂಸರು ಹೇಳುತ್ತಿದ್ದರು, ಅನೇಕ ಜನ್ಮಗಳ ತಪಸ್ಸಿನಿಂದ ಮನುಷ್ಯ ಸರಳನಾಗುತ್ತಾನೆ. ಸರಳ ಕಾಣ್ಕೆ ಬಹುಶಃ ಪ್ರಪಂಚದಲ್ಲೇ ಅತ್ಯಂತ ಕಷ್ಟಕರವಾದ ವಿಷಯ. ಗಾಂಧೀಜಿಯ

ಸರಳ ಕಾಣ್ಕೆಯ ಕೊಡುಗೆ ಎಂದರೆ ಅವರು ಸೂಚಿಸಿದ ಗ್ರಾಮಕೇಂದ್ರಿತ ಅಭಿವೃದ್ಧಿ. ಈ ಅಭಿವೃದ್ಧಿಗೂ ಸಂಸ್ಕೃತಿಗೂ ನಿಕಟ ಸಂಬಂಧವಿದೆ. ಗಾಂಧೀಜಿಯವರ ಕನಸಿನ ಅಭಿವೃದ್ಧಿ ಮನುಷ್ಯನ ದೈಹಿಕ ಶ್ರಮವನ್ನು ಒತ್ತಿ ಹೇಳುವ, ಈ ನೆಲದ ಸಂಸ್ಕೃತಿಗೆ ಅನುಗುಣವಾದ, ಭಾರತೀಯ ಮನಸ್ಸು ಕಾಣುವ ಜೀವನ ಸಾಫಲ್ಯಕ್ಕೆ ಸಂಬಂಧಪಟ್ಟ ಅಭಿವೃದ್ಧಿಯಾಗಿದೆ. ಜೊತೆಗೆ ಅತಿಯಾದ ಯಾಂತ್ರೀಕರಣದ ವಿರುದ್ಧ ಅವರು ಮಂಡಿಸಿದ ವಿಚಾರಧಾರೆಗಳ ವಿವೇಕ ಇಂದು ಇಡೀ ವಿಶ್ವವೇ ಅಂಗೀಕರಿಸಬೇಕಾದ ಪರಿಸ್ಥಿತಿಗೆ ನಾವು ಬಂದು ತಲುಪಿದ್ದೇವೆ. ಅತಿಯಾದ ಯಾಂತ್ರೀಕರಣ ಮನುಷ್ಯನ ವಿಕೃತ ಮನಸ್ಸಿನ ಕಲ್ಮಶಗಳನ್ನು ಸಾಕಾರಗೊಳಿಸಲು ಸಹಕಾರಿಯಾಗಿದೆ. ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಬದಲು ಅಲ್ಪಸಂಖ್ಯಾತರ ಅಸಗತ್ಯ ಅವಶ್ಯಕತೆಗಳನ್ನು ಪೂರೈಸಲು ಕೈಗಾರಿಕೆಗಳು ಬೆಳೆಯುತ್ತಿವೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಅತಿಯಾದ ಕೈಗಾರಿಕೀಕರಣದ ವಿನಾಶಕಾರಿ ಪ್ರಭಾವವನ್ನು ನಾವು ಗುರುತಿಸಿದ್ದೇವೆ. ಕಾಡಿನ ನಾಶ–ಮಾಲಿನ್ಯ, ಬಡವ–ಬಲ್ಲಿದ ತಾರತಮ್ಯವನ್ನು ಹೆಚ್ಚಿಸುವ ಈ ರಾಕ್ಷಸೀ ಪ್ರವೃತ್ತಿಗಳಿಗೆ ಕೈಗಾರಿಕೆಗಳ ಶಕ್ತಿಯೇ ಕಾರಣ. ಹಿಂದಿನ ರಾಕ್ಷಸರಿಗೆ ಮಾಯಾಮಂತ್ರದ ಶಕ್ತಿ ಇದ್ದುದು ನಿಜವಾದರೆ, ಇಂದು ನಮ್ಮೊಳಗೆ ಇರುವ ರಾಕ್ಷಸರಿಗೆ ಕೈಗಾರಿಕೆ ಮತ್ತು ತಾಂತ್ರಿಕಜ್ಞಾನ ಮಾಯಾಮಂತ್ರದ ಶಕ್ತಿಯಾಗಿ ನೆರವಾಗುತ್ತದೆ.

ಗಾಂಧೀಜಿಯವರ ಜೀವನವನ್ನು ನೋಡಿದಾಗ ಅವರ ನಡೆನುಡಿಗಳಲ್ಲಿ ವಸ್ತುಗಳಿಗಿಂತ ಮನುಷ್ಯನಿಗೆ ಹೆಚ್ಚು ಒತ್ತು ಇದ್ದುದು ಕಂಡುಬರುತ್ತದೆ. ಐವಾನ್ ಇಲಿಯಚ್ ಎಂಬ ಲ್ಯಾಟಿನ್ ಅಮೆರಿಕನ್ ಚಿಂತಕ ವಾರ್ಧಾದ ಗಾಂಧೀ ಕುಟೀರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಕುಟೀರದ ಮಹತ್ವ ಕುರಿತು ಚರ್ಚಿಸುತ್ತಾನೆ. ಆ ಕುಟೀರ ಸ್ಥಳೀಯವಾಗಿ ಮಾತ್ರ ದೊರೆಯುವ ವಸ್ತುಗಳಿಂದಾಗಿದೆ. ಜೊತೆಗೆ ಆ ಕುಟೀರದಲ್ಲಿ ಮೇಜು ಕುರ್ಚಿಗಳಿಗಿಂತ ಮನುಷ್ಯನಿಗಾಗಿ ಮೀಸಲಿರಿಸಿದ ವಿಶಾಲವಾದ ಸ್ಥಳವಿದೆ. ನಮ್ಮ ಆಧುನಿಕ ಐಷಾರಾಮಿ ಕಟ್ಟಡಗಳು ಆ ಮನೆಯ ನಿವಾಸಿಗಿಂತ ಕಟ್ಟಡದೊಳಗೆ ಅಡಕ ಮಾಡಬೇಕಾಗಿರುವ ವಸ್ತು ಪರಿಕರಗಳಿಗೆ ಹೆಚ್ಚು ಪ್ರಾಧ್ಯಾನ್ಯತೆ ನೀಡಿ ನಿರ್ಮಿಸಲಾಗುತ್ತದೆ. ಈ ಆದ್ಯತೆಯ ವ್ಯತ್ಯಾಸ ಗಾಂಧೀ ಜೀವನದರ್ಶನ, ಜೀವನಸಾಫಲ್ಯಗಳಿಗೂ ಈ ಆಧುನಿಕ ಜೀವನವಿಧಾನಕ್ಕೂ ಇರುವ ಧೃವಾಂತರವನ್ನು ಸ್ಪಷ್ಟವಾಗಿ ತೋರುತ್ತದೆ. ಯಾವ ವ್ಯವಸ್ಥೆ ಮನುಷ್ಯನಿಗಿಂತ ಮರ ಮುಟ್ಟುಗಳಿಗೆ ಪ್ರಾಧ್ಯಾನ್ಯತೆ ಕೊಡುತ್ತದೆಯೋ ಆ ವ್ಯವಸ್ಥೆಯ ನಿರ್ಮಾತೃ ಮನುಷ್ಯ ದ್ವೇಷಿಯಾಗಿರಬೇಕಲ್ಲವೇ? ಆತ ಬಹುಶಃ ತನ್ನನ್ನು ತಾನೇ ದ್ವೇಷಿಸಿಕೊಳ್ಳುವ ವ್ಯಕ್ತಿಯಾಗಿರಬಹುದು ಅಥವಾ ತನಗೆ ಮಾತ್ರ ವಿನಾಯಿತಿ ನೀಡಬಲ್ಲ ಒಂದು ಅಸಮಂಜಸ ನೀತಿ ಸಂಹಿತೆಯನ್ನು ಸೃಷ್ಟಿಸಿಕೊಂಡು ವಿಕೃತವಾಗಿ ಅದನ್ನು ಅರಗಿಸಿಕೊಂಡಿರಬಹುದು. ಇದು ಜೀವನವನ್ನು ಪ್ರೀತಿಸುವವನ ಲಕ್ಷಣವಲ್ಲ. ಇಂತಹ ಜನ ಈ ಜೀವನವನ್ನು ಸದಾ ಕತ್ತಿಯ ಅಲುಗಿನ ಮೇಲೆ ಚಾಕಚಕ್ಯತೆಯಿಂದ ನಡೆಯುವ, ಇತರರನ್ನು ಅಭದ್ರತೆಯಲ್ಲಿಡುವ ಮೂಲಕ ಮಾತ್ರ ತನ್ನ ಸುಭದ್ರತೆಯಸ್ನು ಕಾಣಬಲ್ಲ ಅಸಂತೋಷಿಗಳು. ಗಾಂಧೀ ಜೀವನ ದರ್ಶನದಲ್ಲಿ 'ಮನುಷ್ಯನಿಗೆ' ಪ್ರಾಧ್ಯಾನ್ಯತೆ ಇದೆ. ಸಮಯ ಬಂದಾಗ ಗಾಂಧೀಜಿ ಉಪವಾಸ ಮಾಡಿದರೂ, ಊಟ ಮಾಡುವಾಗ ತಾವು ಮನಗಂಡ ತಮ್ಮ ಹಿತಾಸಕ್ತಿಯನ್ನು ಅನವಶ್ಯಕವಾಗಿ ಎಲ್ಲೂ ಬಲಿಗೊಡಲಿಲ್ಲ. ಒಟ್ಟಿನಲ್ಲಿ ಜೀವನ ಪ್ರೀತಿ ಎಂದರೆ ಮನುಷ್ಯ ತನ್ನನ್ನೇ ತಾನು ತನ್ನ ಎಚ್ಚರದ ಸ್ಥಿತಿಯಲ್ಲಿ ಗುರುತಿಸಿಕೊಳ್ಳುವುದು ಮತ್ತು ಆ ಸ್ಥಿತಿಯಲ್ಲಿ ತನ್ನದೇ ಇರುವಿಕೆಗೆ ಪ್ರಾಮುಖ್ಯತೆ ನೀಡುವುದು.

ಗಾಂಧೀಜಿಯ ಜೀವನದೃಷ್ಟಿ ಅಭಿವೃದ್ಧಿ–ಸಂಸ್ಕೃತಿಯ ಸಂದೇಶವನ್ನು

ಎಲ್ಲರೂ ಅರಿಯಬಹುದು. ನಮ್ಮ ಇಂದಿನ ದುರಂತಗಳಿಗೆ ನಾವು ಈ ಸಂದೇಶಗಳಿಗೆ ವಿಮುಖವಾಗಿರುವುದೇ ಕಾರಣ. ಸರ್ಕಾರೇತರ ಸಂಸ್ಥೆಗಳಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಗಾಂಧೀಜಿಯವರ ಆದರ್ಶಗಳ ಅವಶ್ಯಕತೆಯನ್ನು ಈ ಹಿನ್ನಲೆಯಲ್ಲಿ ಅರ್ಥ ಮಾಡಿಕೊಳ್ಳಬಹುದು. ಗಾಂಧೀಜಿಯವರ 'ನೀನು ಬಯಸುವ ಬದಲಾವಣೆ ಮೊದಲು ನಿನ್ನಲ್ಲೇ ಆಗಲಿ' ಎಂಬ ಮಾತು ಬಹಳ ಮುಖ್ಯವಾದದ್ದು. ಅಣ್ಣಾ ಹಜಾರೆಯವರ ಜೀವನದಲ್ಲಿ ಈ ಬಗೆಯ ಬದಲಾವಣೆಗಳಾದ್ದದ್ದು, ತತ್ಪರಿಣಾಮವಾಗಿ ಇಡೀ ಹಳ್ಳಿಯ ನೈತಿಕತೆಯಲ್ಲಿ ಬದಲಾವಣೆಯಾದದ್ದನ್ನು ನಾವು ಕಾಣುತ್ತೇವೆ. ಬಹುಶಃ ಸರ್ಕಾರೇತರ ಸಂಸ್ಥೆಗಳಿಗೆ ಬಹುಮುಖ್ಯವಾದ ಗಾಂಧೀ ಸಂದೇಶವೆಂದರೆ ಯಾರು ಕಾರ್ಯಪ್ರವೃತ್ತರಾಗುತ್ತಾರೋ ಮೊದಲು ಅವರ ಕಾಯಕಲ್ಪವಾಗಬೇಕು. ಹಾಗಾಗಿ ವ್ಯಾಪಾರಿ ಧೋರಣೆಯಿಂದ ಅಥವಾ ಬೇಡಿಕೆ ಇದೆ ಎಂದ ಮಾತ್ರಕ್ಕೆ ಸ್ವಯಂ ಸೇವೆ ಸಾಧ್ಯವಿಲ್ಲ. ರೋಗ ಗುಣಮಾಡುವ ವೈದ್ಯನೇ ಅಸಂಖ್ಯಾತ ರೋಗಗಳಿಂದ ಬಳಲುತ್ತಿದ್ದರೆ ಅವನು ಯಾವ ರೋಗಿಯನ್ನು ತಾನೇ ಗುಣ ಮಾಡುತ್ತಾನೆ?

ದೀನಬಂಧು ಕೆಲಸದಲ್ಲಿ ನನ್ನ ಅನುಭವವನ್ನೇ ಉದಾಹರಣೆಯಾಗಿ ತೆಗೆದುಕೊಂಡು ಮಾತನಾಡುವುದಾದರೆ ಈ ಮಾತು ಎಷ್ಟು ಸತ್ಯ ಎಂದು ನನಗೇ ಅನುಭವಕ್ಕೆ ಬರುತ್ತಿದೆ. ಹಾಗೆಯೇ ಇತರೆ ಕೆಲವು ಸಂಸ್ಥೆಗಳ ಪ್ರವರ್ತಕರು ತಾವು ಬದಲಾವಣೆಯಾಗದೆ ಸಂಸ್ಥೆಯನ್ನು ಬೆಳೆಸಿದ್ದು ಮತ್ತು ಅದರ ಪರಿಣಾಮವನ್ನು ಸಹ ನಾನು ಗಮನಿಸಿದ್ದೇನೆ. ದಿನಕಳೆದಂತೆ ನನಗೆ ಅರಿವಾಗುತ್ತಿದೆ – ನನ್ನ ಸಂಸ್ಥೆಯ ಕೆಲಸ ಕಾರ್ಯಗಳ ವಿಫಲತೆಗೆ ಅಥವಾ ಅದರ ಮಂದಗತಿಯ ಪ್ರಗತಿಗೆ ನನ್ನೊಳಗೆ ಇರುವ ಕುಂದುಕೊರತೆಗಳೇ ಕಾರಣ. ಮೊದಲು ನನಗೇ ಸ್ಪಷ್ಟತೆಯನ್ನು ತರುವ ಮೂಲಕ ನಾನು ನನ್ನ ಸಹವರ್ತಿಗಳಲ್ಲಿ ಸ್ಪಷ್ಟತೆಯನ್ನು ತರಬಹುದು. ನನ್ನಲ್ಲೇ ಸಂಯಮ ಗಳಿಸುವ ಮೂಲಕ ನನ್ನ ಸಹವರ್ತಿಗಳಿಗೂ ಈ ಗುಣವನ್ನು ಸಾಂಕ್ರಾಮಿಕವಾಗಿ ಹರಡಬಹುದು. ಒಟ್ಟಿನಲ್ಲಿ ನನ್ನೊಳಗೆ ನಾನು ಬೆಳಕು ಕಾಣದೆ ಇತರರಿಗೆ ಬೆಳಕು ಕೊಡಲು ಹೇಗೆ ಸಾಧ್ಯ? ದಿನಕಳೆದಂತೆ ಇದು ಸ್ಪಷ್ಟವಾಗಿ ಮನವರಿಕೆಯಾಗುತ್ತಿದೆ. ಹಾಗೆಯೇ ನನ್ನ ಸಫಲತೆಗಳಿಗೆ ಗಾಂಧೀಮಾರ್ಗ ಎಷ್ಟು ಕಾರಣವಾಯಿತು ಎಂಬುದನ್ನು ನಾನು ಯಾವ ಸಂಕೋಚವು ಇಲ್ಲದೇ ಧೈರ್ಯವಾಗಿ ಹೇಳಬಲ್ಲೆ. ಮೊದಲನೆಯದಾಗಿ ಸತ್ಯ-ಅಹಿಂಸೆಗಳು. ಸಂಸ್ಥೆ ಪ್ರಾರಂಭಿಸಿದ ಮೊದಲ ದಿನ ಎಂದರೆ ಟ್ರಸ್ಟ್ ರಿಜಿಸ್ಟ್ರೇಷನ್ ಮಾಡಿಸಿದ ದಿನ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ನಾವು ಟ್ರಸ್ಟಿಗಳು ನಮ್ಮ ಪ್ರಾಮಾಣಿಕತೆಗೆ ಬದ್ಧವಾದ ನಿಲುವನ್ನು ಆ ಕಛೇರಿಯ ಮುಖ್ಯಸ್ಥನಿಗೆ ಮನವರಿಕೆ ಮಾಡಿಕೊಟ್ಟೆವು. ಏಕೆಂದರೆ ಟ್ರಸ್ಟ್ ರಿಜಿಸ್ಟ್ರೇಷನ್ ಸಂದರ್ಭದಲ್ಲೂ ಲಂಚ ಕೊಡುವುದು ವಾಡಿಕೆ. ಆ ಕಛೇರಿಯ ಮುಖ್ಯಸ್ಥನಿಗೆ ನಮ್ಮ ನಿಲುವು ತಿಳಿಯಿತು ಮತ್ತು ಅವನಿಗೆ ಲಂಚ ಕೊಡಬೇಕಾಗಿ ಬರಲಿಲ್ಲ. ಆ ಅಧಿಕಾರಿಗೆ ನಾವುಗಳು ಅರೆಹುಚ್ಚರಂತೆ ಕಂಡಿರಬಹುದು ಅಥವಾ ಅವನು ಒಳ್ಳೆಯವನೇ ಆಗಿದ್ದರೆ ನಮ್ಮ ಬಗ್ಗೆ ಗೌರವ ಬಂದಿರಬಹುದು. ಆದರೆ ನಾವು ಮಾತ್ರ ನಮ್ಮ ಖಚಿತ ನಿಲುವಿಗೆ ಬದ್ಧರಾಗಿದ್ದೆವು. ಈ ಸಂಸ್ಥೆ ಪ್ರಾರಂಭವಾಗಿ ಇನ್ನೇನು ಇಪ್ಪತ್ತು ವರ್ಷಗಳಾಗುತ್ತಿವೆ. ಈವರೆಗೆ ನಾವು ಎಲ್ಲೂ ಯಾವ ಸಂದರ್ಭದಲ್ಲೂ ಲಂಚ ಕೊಡಲಿಲ್ಲ.

ಮತ್ತೊಂದು ಘಟನೆ ಹೀಗಿದೆ. ೮೦ಜಿ ಆದಾಯ ತೆರಿಗೆ ನಿಯಮದ ಪ್ರಕಾರ ಆದಾಯ ತೆರಿಗೆ ವಿನಾಯಿತಿಗಾಗಿ ಪತ್ರವ್ಯವಹಾರ ಶುರುವಾಯಿತು. ಇಲಾಖೆಯಲ್ಲಿ ನಮ್ಮ ಕಡತ ಅದೇಕೋ ಏನೋ ಮುಂದಕ್ಕೆ ಹೋಗದೆ ಸ್ಥಗಿತವಾಗಿಬಿಟ್ಟಿತ್ತು. ನಾನು ಹೋಗಿ

ಎಲ್ಲರೂ ಅರಿಯಬಹುದು. ನಮ್ಮ ಇಂದಿನ ದುರಂತಗಳಿಗೆ ನಾವು ಈ ಸಂದೇಶಗಳಿಗೆ ವಿಮುಖವಾಗಿರುವುದೇ ಕಾರಣ. ಸರ್ಕಾರೇತರ ಸಂಸ್ಥೆಗಳಿಗೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಿಗೆ ಗಾಂಧೀಜಿಯವರ ಆದರ್ಶಗಳ ಅವಶ್ಯಕತೆಯನ್ನು ಈ ಓಸ್ನಲೆಯಲ್ಲಿ ಅರ್ಥ ಮಾಡಿಕೊಳ್ಳಬಹುದು. ಗಾಂಧೀಜಿಯವರ 'ನೀನು ಬಯಸುವ ಬದಲಾವಣೆ ಮೊದಲು ನಿನ್ನಲ್ಲೇ ಆಗಲಿ' ಎಂಬ ಮಾತು ಬಹಳ ಮುಖ್ಯವಾದದ್ದು. ಅಣ್ಣಾ ಹಜಾರೆಯವರ ಜೀವನದಲ್ಲಿ ಈ ಬಗೆಯ ಬದಲಾವಣೆಗಳಾದ್ದದ್ದು, ತತ್ಪರಿಣಾಮವಾಗಿ ಇಡೀ ಹಳ್ಳಿಯ ನೈತಿಕತೆಯಲ್ಲಿ ಬದಲಾವಣೆಯಾದದ್ದನ್ನು ನಾವು ಕಾಣುತ್ತೇವೆ. ಬಹುಶಃ ಸರ್ಕಾರೇತರ ಸಂಸ್ಥೆಗಳಿಗೆ ಬಹುಮುಖ್ಯವಾದ ಗಾಂಧೀ ಸಂದೇಶವೆಂದರೆ ಯಾರು ಕಾರ್ಯಪ್ರವೃತ್ತರಾಗುತ್ತಾರೋ ಮೊದಲು ಅವರ ಕಾಯಕಲ್ಪವಾಗಬೇಕು. ಹಾಗಾಗಿ ವ್ಯಾಪಾರಿ ಧೋರಣೆಯಿಂದ ಅಥವಾ ಬೇಡಿಕೆ ಇದೆ ಎಂದ ಮಾತ್ರಕ್ಕೆ ಸ್ವಯಂ ಸೇವೆ ಸಾಧ್ಯವಿಲ್ಲ. ರೋಗ ಗುಣಮಾಡುವ ವೈದ್ಯನೇ ಅಸಂಖ್ಯಾತ ರೋಗಗಳಿಂದ ಬಳಲುತ್ತಿದ್ದರೆ ಅವನು ಯಾವ ರೋಗಿಯನ್ನು ತಾನೇ ಗುಣ ಮಾಡುತ್ತಾನೆ?

ದೀನಬಂಧು ಕೆಲಸದಲ್ಲಿ ನನ್ನ ಅನುಭವವನ್ನೇ ಉದಾಹರಣೆಯಾಗಿ ತೆಗೆದುಕೊಂಡು ಮಾತನಾಡುವುದಾದರೆ ಈ ಮ ಾತು ಎಷ್ಟು ಸತ್ಯ ಎಂದು ನನಗೇ ಅನುಭವಕ್ಕೆ ಬರುತ್ತಿದೆ. ಹಾಗೆಯೇ ಇತರೆ ಕೆಲವು ಸಂಸ್ಥೆಗಳ ಪ್ರವರ್ತಕರು ತಾವು ಬದಲಾವಣೆಯಾಗದೆ ಸಂಸ್ಥೆಯನ್ನು ಬೆಳೆಸಿದ್ದು ಮತ್ತು ಅದರ ಪರಿಣಾಮವನ್ನು ಸಹ ನಾನು ಗಮನಿಸಿದ್ದೇನೆ. ದಿನಕಳೆದಂತೆ ನನಗೆ ಅರಿವಾಗುತ್ತಿದೆ – ನನ್ನ ಸಂಸ್ಥೆಯ ಕೆಲಸ ಕಾರ್ಯಗಳ ವಿಫಲತೆಗೆ ಅಥವಾ ಅದರ ಮಂದಗತಿಯ ಪ್ರಗತಿಗೆ ನನ್ನೊಳಗೆ ಇರುವ ಕುಂದುಕೊರತೆಗಳೇ ಕಾರಣ. ಮೊದಲು ನನಗೇ ಸ್ಪಷ್ಟತೆಯನ್ನು ತರುವ ಮೂಲಕ ನಾನು ನನ್ನ ಸಹವರ್ತಿಗಳಲ್ಲಿ ಸ್ಪಷ್ಟತೆಯನ್ನು ತರಬಹುದು, ನನ್ನಲ್ಲೇ ಸಂಯಮ ಗಳಿಸುವ ಮೂಲಕ ನನ್ನ ಸಹವರ್ತಿಗಳಿಗೂ ಈ ಗುಣವನ್ನು ಸಾಂಕ್ರಾಮಿಕವಾಗಿ ಹರಡಬಹುದು. ಒಟ್ಟಿನಲ್ಲಿ ನನ್ನೊಳಗೆ ನಾನು ಬೆಳಕು ಕಾಣದೆ ಇತರರಿಗೆ ಬೆಳಕು ಕೊಡಲು ಹೇಗೆ ಸಾಧ್ಯ? ದಿನಕಳೆದಂತೆ ಇದು ಸ್ಪಷ್ಟವಾಗಿ ಮನವರಿಕೆಯಾಗುತ್ತಿದೆ. ಹಾಗೆಯೇ ನನ್ನ ಸಫಲತೆಗಳಿಗೆ ಗಾಂಧೀಮಾರ್ಗ ಎಷ್ಟು ಕಾರಣವಾಯಿತು ಎಂಬುದನ್ನು ನಾನು ಯಾವ ಸಂಕೋಚವು ಇಲ್ಲದೇ ಧೈರ್ಯವಾಗಿ ಹೇಳಬಲ್ಲೆ. ಮೊದಲನೆಯದಾಗಿ ಸತ್ಯ-ಅಹಿಂಸೆಗಳು. ಸಂಸ್ಥೆ ಪ್ರಾರಂಭಿಸಿದ ಮೊದಲ ದಿನ ಎಂದರೆ ಟ್ರಸ್ಟ್ ರಿಜಿಸ್ಟ್ರೇಷನ್ ಮಾಡಿಸಿದ ದಿನ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ನಾವು ಟ್ರಸ್ಟಿಗಳು ನಮ್ಮ ಪ್ರಾಮಾಣಿಕತೆಗೆ ಬದ್ಧವಾದ ನಿಲುವನ್ನು ಆ ಕಛೇರಿಯ ಮುಖ್ಯಸ್ಥನಿಗೆ ಮನವರಿಕೆ ಮಾಡಿಕೊಟ್ಟೆವು. ಏಕೆಂದರೆ ಟ್ರಸ್ಟ್ ರಿಜಿಸ್ಟ್ರೇಷನ್ ಸಂದರ್ಭದಲ್ಲೂ ಲಂಚ ಕೊಡುವುದು ವಾಡಿಕೆ. ಆ ಕಛೇರಿಯ ಮುಖ್ಯಸ್ಥನಿಗೆ ನಮ್ಮ ನಿಲುವು ತಿಳಿಯಿತು ಮತ್ತು ಅವನಿಗೆ ಲಂಚ ಕೊಡಬೇಕಾಗಿ ಬರಲಿಲ್ಲ. ಆ ಅಧಿಕಾರಿಗೆ ನಾವುಗಳು ಅರೆಹುಚ್ಚರಂತೆ ಕಂಡಿರಬಹುದು ಅಥವಾ ಅವನು ಒಳ್ಳೆಯವನೇ ಆಗಿದ್ದರೆ ನಮ್ಮ ಬಗ್ಗೆ ಗೌರವ ಬಂದಿರಬಹುದು. ಆದರೆ ನಾವು ಮಾತ್ರ ನಮ್ಮ ಖಚಿತ ನಿಲುವಿಗೆ ಬದ್ಧರಾಗಿದ್ದೆವು. ಈ ಸಂಸ್ಥೆ ಪ್ರಾರಂಭವಾಗಿ ಇನ್ನೇನು ಇಪ್ಪತ್ತು ವರ್ಷಗಳಾಗುತ್ತಿವೆ. ಈವರೆಗೆ ನಾವು ಎಲ್ಲೂ ಯಾವ ಸಂದರ್ಭದಲ್ಲೂ ಲಂಚ ಕೊಡಲಿಲ್ಲ.

ಮತ್ತೊಂದು ಘಟನೆ ಹೀಗಿದೆ. ಲಂಚಿ ಆದಾಯ ತೆರಿಗೆ ನಿಯಮದ ಪ್ರಕಾರ ಆದಾಯ ತೆರಿಗೆ ವಿನಾಯಿತಿಗಾಗಿ ಪತ್ರವ್ಯವಹಾರ ಶುರುವಾಯಿತು. ಇಲಾಖೆಯಲ್ಲಿ ನಮ್ಮ ಕಡತ ಅದೇಕೋ ಏನೋ ಮುಂದಕ್ಕೆ ಹೋಗದೆ ಸ್ಥಗಿತವಾಗಿಬಿಟ್ಟಿತ್ತು. ನಾನು ಹೋಗಿ

ಕೆಲಸ ಮಾಡಿಕೊಟ್ಟಿದ್ದೇನೆ ನನ್ನ ಕಛೇರಿ ಖರ್ಚಿಗೆಂದು ಒಂದು ಸಾವಿರ ರೂ.ಗಳನ್ನಾದರೂ ಕೊಡಬೇಡವೇ'. ನಾನು ಹೇಳಿದೆ, 'ನೀವೆಲ್ಲರೂ ಈ ಕಛೇರಿಯಲ್ಲಿ ಇಷ್ಟೊಂದು ಜನರಿದ್ದೀರಿ. ಮನಸ್ಸು ಮಾಡಿ ನೀವೆಲ್ಲರೂ ಸೇರಿ ನಿಮ್ಮ ಸಂಬಳದ ಶೇಕಡ ಒಂದು ಭಾಗವನ್ನಾದರೂ ನಮ್ಮ ಅನಾಥಾಶ್ರಮಕ್ಕೆ ದಾನ ಮಾಡಿ. ಇದರಿಂದ ನಿಮ್ಮ ಮನಸ್ಸಿಗೆ ನೆಮ್ಮದಿ ಸಿಗುತ್ತದೆ'. ಸಿಟ್ಟುಗೊಂಡು ನಿಮ್ಮ ಕಾಗದ ತೆಗೆದುಕೊಂಡು ಹೋಗಿ ಎಂದು ನನ್ನ ಕಳುಹಿಸಿಬಿಟ್ಟಳು.

ಇದೇ ಜಿಗುಟು ತತ್ವವನ್ನು ಅನುಸರಿಸುತ್ತಾ ಸುಮಾರು ಹತ್ತು ವರ್ಷಗಳ ಕಾಲ ಕೆಲಸ ಮಾಡಿದ್ದರಿಂದ ನಮ್ಮ ಊರಿನ ಎಲ್ಲಾ ಸರ್ಕಾರಿ ಸಂಸ್ಥೆಗಳಿಗೂ ನಮ್ಮ ಬಗ್ಗೆ ವಿಶೇಷವಾದ ಗೌರವ ನಿಧಾನವಾಗಿ ಮೂಡಿದೆ. ಈಗಂತೂ ನಮ್ಮ ಸಂಸ್ಥೆಯ ಹೆಸರು ಹೇಳಿದರೆ ಸಾಕು ಕೆಲಸ ಸಲೀಸಾಗಿ ನಡೆದುಬಿಡುತ್ತದೆ. ಕೆಲವೊಮ್ಮೆ ಹಿರಿಯ ಅಧಿಕಾರಿಗಳು ವರ್ಗವಾಗಿ ಹೋದಾಗ ಹೊಸ ಅಧಿಕಾರಿಗಳಿಗೆ ನಮ್ಮ ಬಗ್ಗೆ ನಾವೇ ಅಮೂಲಾಗ್ರವಾಗಿ ತಿಳಿಸಬೇಕಾದ ಸಂದರ್ಭ ಬರುತ್ತದೆ. ಆಗ ಈ ಅಧಿಕಾರಿಗಳು ಸಂಬಂಧಪಟ್ಟ ಗುಮಾಸ್ತರನ್ನು ಕರೆಸಿದಾಗ ಆ ಗುಮಾಸ್ತರುಗಳೇ ನಮ್ಮ ಸಂಸ್ಥೆಯ ಬಗ್ಗೆ ಹೊಗಳಿಕೆ ಮಾತನ್ನಾಡುತ್ತಾರೆ. ಕೆಲಸವನ್ನು ಬೇಗ ಮಾಡಿಕೊಡಬೇಕೆಂದು ಶಿಫಾರಸ್ಸು ಮಾಡುತ್ತಾರೆ. ಅವರಿಗೆ ನಾವು ಹಿಂದೆಲ್ಲಾ ದುಡ್ಡು ಕಾಸು ಕೊಟ್ಟಿಲ್ಲವೆಂಬ ಕೋಪ ಅಥವಾ ಪ್ರತೀಕಾರ ಬುದ್ಧಿ ಇರುವಂತೆ ಕಾಣುವುದೇ ಇಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ 'ನಿಮ್ಮನ್ನು ಸೋಲಿಸಿ ನಾವು ಗೆದ್ದ ಸ್ಥಾನದಲ್ಲಿದ್ದೇವೆ' ಎಂಬಂತಹ ಅನುಮಾನಗಳು ಹಾಗೂ ಭಾವನೆಗಳು ಅವರ ಮನಸ್ಸಿನಲ್ಲಿ ಯಾವ ಕಾರಣಕ್ಕೂ ಬರದಂತೆ ನಾವು ನಡೆದುಕೊಂಡಿದ್ದೇವೆ. ಕಾರಣವೇನೆಂದರೆ ನಾವು ಏಕಮುಖವಾಗಿ ನಮ್ಮ ಬದ್ಧತೆಯನ್ನು ಮಾತ್ರ ನಮ್ಮ ಕಾರ್ಯವೈಖರಿಯಲ್ಲಿ ಪ್ರಧಾನವಾಗಿ ಕಾಣುವಂತೆ ಪ್ರಜ್ಞಾಪೂರ್ವಕವಾಗಿ ವರ್ತಿಸುತ್ತೇವೆ. ಇಡೀ ಪ್ರಕ್ರಿಯೆಯನ್ನು ಸೋಲು ಗೆಲುವಿನ ಒಂದು ಪ್ರಶ್ನೆಯಾಗಿ ಬಿಂಬಿಸಿ ರಣಕಹಳೆ ಊದಿ ಕೆಲಸ ಪ್ರಾರಂಭಿಸುವುದಿಲ್ಲ. ಏಕೆಂದರೆ ನಮಗೆ ಗೆಲ್ಲುವುದರಲ್ಲಿ ಯಾವ ಆಸಕ್ತಿಯೂ ಇಲ್ಲ. ನಮ್ಮ ಇರುವಿಕೆ ಅನವಶ್ಯಕವಾಗಿ ಇತರೆಲ್ಲರಿಗೂ ತಿಳಿಯಬೇಕೆಂಬ ಆಗ್ರಹವೂ ಇಲ್ಲ. ನಾವು ನಿಜವಾಗಿಯೂ ಬಯಸುವುದು ಬದಲಾವಣೆಯಾದರೆ ಸೋಲು-ಗೆಲುವುಗಳ ಪ್ರಶ್ನೆ ಏಕೆ ಎದುರಾಗಬೇಕು. ಸೋಲು ಗೆಲುವುಗಳ ಪ್ರಶ್ನೆಯೇ ಪ್ರಧಾನವಾದಾಗ ನಾವೇ ಎದುರಾಳಿಗಳಿಗೆ ಶಕ್ತಿ ತುಂಬಿ ನಡೆಯುವ ಯುದ್ಧ ಮತ್ತಷ್ಟು ಕಳೆಗಟ್ಟುವಂತೆ ಸುಪ್ತವಾಗಿ ಪ್ರಯತ್ನಿಸುತ್ತೇವೆ. ಏಕೆಂದರೆ ಕಷ್ಟಪಟ್ಟು ಸಂಪಾದಿಸಿದ್ದಕ್ಕೆ ರುಚಿ ಹೆಚ್ಚು. ಜೊತೆಗೆ ಹೆಚ್ಚು ಪ್ರಸಿದ್ಧಿಯೂ ಸಾಧ್ಯ. ಆದರೆ ನಮ್ಮ ಉದ್ದೇಶ ಯುದ್ಧ ಮಹಾಯುದ್ಧವಾಗಬೇಕು. ತತ್ಫಲವಾಗಿ ನಾವು ವಿಜಯೋತ್ಸಾಹದಲ್ಲಿ ಮೆರೆಯಬೇಕು ಎಂಬಿವೇ ಆಸೆಗಳಿಲ್ಲ. ಪ್ರಜ್ಞಾಪೂರ್ವಕವಾಗಿ ಅತ್ಯಂತ ಕಡಿಮೆ ಘರ್ಷಣೆಯಲ್ಲಿ ನಮ್ಮ ಬದ್ಧತೆಯನ್ನು ಕಳೆದುಕೊಳ್ಳದೆ ಕೆಲಸ ಸಾಧಿಸುವ ಪ್ರಯತ್ನ ಮಾಡುತ್ತೇವೆ. ಈ ಸಂದರ್ಭದಲ್ಲಿ ಗಾಂಧೀಜಿಯ ಮಾತು "ಹಿಂಸೆಯಿಂದ ಗೆದ್ದಿದ್ದು ಕ್ಷಣಿಕ; ಪ್ರೀತಿಯಿಂದ ಗೆದ್ದಿದ್ದು ಶಾಶ್ವತ" ಎಂಬ ಮಾತು ನೆನಪಿಗೆ ಬರುತ್ತದೆ.

ಗಾಂಧೀಜಿಯ ಜಿಗುಟು ತತ್ವ ಫಲ ಕೊಡುತ್ತದೆ ಎಂಬುದಕ್ಕೆ ಗಾಂಧೀ ಚರಿತ್ರೆಯೇ ನಮಗೆ ರುಜುವಾತಾಗಿದೆ. ಒಮ್ಮೆ ಜೆ.ಬಿ.ಕೃಪಲಾನಿ ಎಂಬ ಚರಿತ್ರೆಯ ತಜ್ಞ ಗಾಂಧೀಜಿಯವರಿಗೆ ಹೇಳಿದ "ಮಿಸ್ಟರ್ ಗಾಂಧೀ, ನಿಮಗೆ ಭಗವದ್ಗೀತೆ ಗೊತ್ತಿರಬಹುದು ಅಥವಾ ಬೈಬಲ್ ತಿಳಿದಿರಬಹುದು ಆದರೆ ನಿಮಗೆ ಚರಿತ್ರೆ ತಿಳಿದಿಲ್ಲವೆಂದೆ ತೋರುತ್ತದೆ. ಈ ರೀತಿಯ ಅಹಿಂಸಾ ಮಾರ್ಗದಿಂದ ಯಾವ ದೇಶವೂ ಸ್ವಾತಂತ್ರ್ಯ ಗಳಿಸಿಲ್ಲ". ಇದಕ್ಕೆ ಉತ್ತರವಾಗಿ ಗಾಂಧೀಜಿ ಕೊಂಚವೂ ಅಳುಕದೆ ಹೇಳಿದರು, "ನಿಮಗೆ ಸರಿಯಾಗಿ ಚರಿತ್ರೆ ತಿಳಿದಿಲ್ಲ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಚರಿತ್ರೆಯ ಮುಖ್ಯ ಪಾಠವೆಂದರೆ ಚರಿತ್ರೆಯಲ್ಲಿ

ಹಿಂದೆಂದೂ ಘಟಿಸಲಿಲ್ಲ ಎಂಬ ಕಾರಣಕ್ಕೆ ಅದು ಮುಂದೆಂದೂ ಘಟಿಸುವುದೇ ಇಲ್ಲ ಎಂದು ನಿರ್ಧರಿಸುವುದು ತಪ್ಪು ನಿರ್ಧಾರ ಎಂಬುದನ್ನು ಚರಿತ್ರೆಯೇ ನಮಗೆ ತೋರಿಸುತ್ತದೆ."

ಇಂತಹ ಒಂದು ಆತ್ಮಸ್ಥೈರ್ಯ ಗಾಂಧೀಜಿಗೆ ಬಂದದ್ದು ಸತ್ಯ ಅಹಿಂಸೆಗಳ ಬಗ್ಗೆ ಅವರಿಗಿದ್ದ ಅಚಲ ನಂಬಿಕೆಯಿಂದ. ಈ ತತ್ವಗಳು ಅವರ ಜೀವನದುದ್ದಕ್ಕೂ ತಪ್ಪದೇ ಫಲ ನೀಡುತ್ತಾ ಬಂದಿವೆ. ಈ ಜಿಗುಟು ತತ್ವಕ್ಕೆ ಬದ್ಧರಾಗಿ ನಿಲ್ಲುವಷ್ಟು ತಾಳ್ಮೆ ಸಹಿಷ್ಣುತೆಗಳನ್ನು ನಾವು ಬೆಳೆಸಿಕೊಂಡರೆ ನಮ್ಮ ದೌರ್ಬಲ್ಯಗಳು ಎಷ್ಟೇ ಇದ್ದರೂ ನಾವು ಗುರಿ ಮುಟ್ಟಿಬಿಡುತ್ತೇವೆ. ಗಾಂಧೀಜಿಯವರ ಮಾತು "ನನ್ನ ದೌರ್ಬಲ್ಯಗಳ ಅರಿವೇ ನನ್ನ ಸರ್ವ ಶಕ್ತಿಯ ಮೂಲ" ಎಂಬುದನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು.

ಸಮಾಜಕಾರ್ಯ ಮಾಡುವ ನಾವು ಜೀವನ ಪ್ರೀತಿಯನ್ನು ಉಳಿಸಿಕೊಂಡೇ ಕೆಲಸ ಮಾಡಬೇಕು. ತ್ಯಾಗ ಬಲಿದಾನಗಳ ಹೆಸರಿನಲ್ಲಿ ಕೆಲವರು ತಮ್ಮ ಹಿತವನ್ನು ಸಂಪೂರ್ಣವಾಗಿ ಕಡೆಗಣಿಸಿ ಯಾವುದೋ ಭಾವೋದ್ವೇಗದಲ್ಲಿ ಕಾರ್ಯಪ್ರವೃತ್ತರಾಗಿರುತ್ತಾರೆ. ಮತ್ತು ವಿಫಲತೆಗಳು ಎದುರಾದಾಗ ಇಡೀ ಜಗತ್ತನ್ನೇ ದೂಶಿಸಲು ಪ್ರಾರಂಭಿಸುತ್ತಾರೆ. ಈ ಸಂದರ್ಭದಲ್ಲಿ ಈ ಮಂಕುತಿಮ್ಮನ ಕಗ್ಗ ನಮ್ಮ ಕಣ್ಣು ತೆರೆಸುತ್ತದೆ.

ಅಷ್ಟದಿಗ್ಗಜನೆ ನೀನು ಆದಿಶೇಷನೆ ನೀನು
ಕಷ್ಟಭಾರವಿದೆಂದು ನಿಟ್ಟುಸಿರ ಬಿಡುವೆ
ನಿಷ್ಠುರದ ನಿನ್ನ ಕನಿಕರ ಜಗಕೆ ಬೇಕಿಲ್ಲ
ಎಷ್ಟಾದರಷ್ಟೆ ಸರಿ ಮಂಕುತಿಮ್ಮ

ಕೆಲವೊಮ್ಮೆ ಅತಿಯಾದ ಭೋಗದ ಆಸೆ ಅಧಿಕಾರ ದಾಹಗಳು ಒಂದು ಸಂಸ್ಥೆಯ ನಾಯಕನನ್ನು ಮೆಟ್ಟಿಕೊಳ್ಳಬಹುದು. ನನಗೆ ಒಂದು ಸಂಸ್ಥೆಯ ನಾಯಕನ ಪರಿಚಯವಿದೆ. ಈತ ಮೊದಲ ದಿನಗಳಲ್ಲಿ ರಾಮಕೃಷ್ಣಪರಮಹಂಸ ವಿವೇಕಾನಂದರ ತತ್ವವನ್ನು ಅನುಯಾಯಿಗಳಿಗೆ ಬೋಧಿಸುತ್ತಿದ್ದ. ಅನಂತರ ಅನೈತಿಕ ಜೀವನ ಅವನಿಗೆ ಶಾಪವಾಯಿತು. ಈ ಮಹಾಶಯ ತಕ್ಷಣ ಆಚಾರ್ಯ ರಜನೀಶರನ್ನು ತನ್ನ ಆದರ್ಶ ಮಾಡಿಕೊಂಡ. ಅಷ್ಟೇ ಅಲ್ಲ ತನ್ನ ಅನುಯಾಯಿಗಳಿಗೂ ಇದೇ ಆದರ್ಶವನ್ನು ಕಡ್ಡಾಯ ಮಾಡತೊಡಗಿದ. ಒಟ್ಟಿನಲ್ಲಿ ಇವನು ಮಾಡಿದ್ದೆಲ್ಲಾ ಆದರ್ಶವಾಗಬೇಕು. ಹಾಗೆ ತನ್ನ ದೌರ್ಬಲ್ಯಗಳಿಗೆ ಹೊಸ ಮೆರುಗು ಕೊಟ್ಟು ಅದಕ್ಕೆ ಮನೋವಿಜ್ಞಾನದ ವ್ಯಾಖ್ಯಾನ ಕೊಡುತ್ತಿದ್ದ. ಇತರರು ತನ್ನನ್ನು ತನ್ನ ದೌರ್ಬಲ್ಯಗಳೊಂದಿಗೆ ಸ್ವೀಕರಿಸಲಿ ಎಂದು ಎಷ್ಟೊಂದು ಕಷ್ಟ ಪಟ್ಟನೆಂದರೆ ಈ ಅಸಹಜ ಸರ್ಕಸ್ ಮಾಡುವ ಬದಲು ಈತ ತನ್ನ ದೌರ್ಬಲ್ಯಗಳನ್ನು ಮೆಟ್ಟಿ ನಿಲ್ಲಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಇವನೊಬ್ಬ ಮಹಾತ್ಮನೇ ಆಗುತ್ತಿದ್ದ. 'ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬ ಹಠದಿಂದ ತನ್ನೆಲ್ಲಾ ಪತನಗಳನ್ನು ಸಮರ್ಥಿಸಿಕೊಳ್ಳುತ್ತ ಹೊಸ ಆದರ್ಶಗಳ ಹರಿಕಾರ ತಾನೆಂಬಂತೆ ತನ್ನನ್ನೇ ತಾನು ಬಿಂಬಿಸಿಕೊಳ್ಳುತ್ತಿದ್ದ. ಒಟ್ಟಿನಲ್ಲಿ ತನಗೆ ತಾನು ಮೋಸ ಮಾಡಿಕೊಳ್ಳುತ್ತಿದ್ದ.

ಅತಿಯಾದ ಭೋಗಾಭಿಲಾಷೆ - ಅಧಿಕಾರದಾಹ ಜೀವನ ಪ್ರೀತಿಯನ್ನು ಸೂಚಿಸುವುದಿಲ್ಲ. ಬದಲಾಗಿ ಈ ಜೀವನ ಪ್ರೀತಿಯನ್ನು ಬಲಿಗೊಟ್ಟು ಇತರೆಲ್ಲರನ್ನು ಆತಂಕದಲ್ಲಿಡುವ ಮೂಲಕ ತನ್ನೊಬ್ಬನ ಭದ್ರತೆಯನ್ನು ಕಾಯ್ದುಕೊಳ್ಳುವ ಸ್ವಾರ್ಥಮಯವಾದ ಹೇಡಿ ಮನಸ್ಸನ್ನು ಸೂಚಿಸುತ್ತದೆ. ಬದುಕನ್ನು ಪ್ರೀತಿಸುವವನು ಈ ಬದುಕನ್ನು ಮುಖಾಮುಖಿಯಾಗಿ ಎದುರಿಸಿ ವಾಸ್ತವತೆಗಳನ್ನು ಇಡಿಯಾಗಿ ಒಪ್ಪಿಕೊಂಡು, ಸರಳ ಬದುಕಿನ ಮೂಲಕ ತನ್ನ ಸುಭದ್ರತೆಯನ್ನು ಪಡೆಯುತ್ತಾನೆ. ವಾಸ್ತವತೆಗಳ

ನಿರಾಕರಣೆ ಅಭದ್ರತೆಯನ್ನುಂಟು ಮಾಡುತ್ತದೆ. ಭೋಗಲಾಲಸೆಯ ಬದುಕಾಗಲೀ, ಇತರರನ್ನು ನಿಯಂತ್ರಿಸುತ್ತ ಮಾತ್ರ ಬದುಕಬಲ್ಲ ಮನಸ್ಸಾಗಲೀ ಎಂದೂ ವಾಸ್ತವತೆಗಳನ್ನು ಒಪ್ಪಿಕೊಳ್ಳುವುದಿಲ್ಲ. ಹಾಗಾಗಿ ಈ ಕೃತಕ ಬದುಕಿಗೆ ಹೊಂದುವ ಕೃತಕ ಮೌಲ್ಯಗಳು, ಕೃತಕ ಜೀವನ ವಿಧಾನ, ಕೃತಕ ಮಾನವ ಸಂಬಂಧಗಳು, ಕೃತಕವಾದ ಆಹಾರ ವಿಹಾರಾದಿಗಳು, ಕೃತಕವಾದ ಪ್ರೀತಿ ಹೀಗೆ ಎಲ್ಲವನ್ನೂ ಕೃತಕ ಮಾಡಿಸಿ ಇಡೀ ಪರಿಸರ – ಮಾನವನ ಬದುಕನ್ನು ಕೃತಕವಾಗಿಸುವ ಮೂಲಕ ಈ ಮನುಷ್ಯ ತನ್ನ ತೆವಲುಗಳನ್ನು ತೀರಿಸಿಕೊಳ್ಳಲು ಹವಣಿಸುತ್ತಾನೆ. ಇತರರನ್ನು ನಿಯಂತ್ರಿಸದೆ ಜೀವನ ಪ್ರೀತಿಯನ್ನು ಉಳಿಸಿಕೊಂಡು ತಾನು ಬದುಕಿ ಇತರರನ್ನು ಬದುಕಲು ಬಿಡುವ ಜೀವನ ದೃಷ್ಟಿಯನ್ನು ಜೀವನ ಸಾಫಲ್ಯವನ್ನು ಗಾಂಧೀಜಿ ತೋರಿಸಿಕೊಟ್ಟಿದ್ದಾರೆ.

ಅಭದ್ರತೆಯ ಹುಟ್ಟರಿವು ಮನುಷ್ಯ ಜೀವನದ ಸೌಂದರ್ಯವನ್ನು ಕಸಿದುಕೊಂಡು ಬದುಕನ್ನು ಕುರೂಪ ಮಾಡುತ್ತಿದೆ. ಈ ಅಭದ್ರತೆ ಕೇವಲ ಮನುಷ್ಯ ಕೇಂದ್ರಿತವಷ್ಟೆ ಅಲ್ಲ. ಅದು ಜಾಗತೀಕರಣದ ಸಂದರ್ಭದಲ್ಲಿ ಸಾಂಸ್ಥಿಕ ರೂಪಪಡೆಯುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು ಜಾಗತಿಕವಾಗಿ ತಾನು ಅನುಭವಿಸುವ ಅಭದ್ರತೆ ಮತ್ತು ಅದಕ್ಕೆ ತಾನು ಕಂಡುಕೊಂಡ ಪರಿಹಾರವನ್ನು ಸಹ ಜಾಗತೀಕರಣಗೊಳಿಸುತ್ತದೆ. ತನ್ನ ಮಾರುಕಟ್ಟೆ ಹಾಗು ಜಾಹಿರಾತು ವಿಧಾನಗಳಲ್ಲಿ ಇದೇ ಅಭದ್ರತೆಯನ್ನೆ ಆದರ್ಶವಾಗಿ ನೀಡುತ್ತಾ ತಾನು ಬಿಕರಿ ಮಾಡುವ ತಾಂತ್ರಿಕತೆಯನ್ನು ಬಳಸಿ ಹೇಗೆ ಈ ಅಭದ್ರತೆಗಳಿಂದ ಹೊರಬರಬಹುದು ಎಂದು ತಿಳಿಸುತ್ತದೆ. ಜಾಗತೀಕರಣದ ಹುನ್ನಾರ ಏನೆಂದರೆ ನೆಮ್ಮದಿಯ ಸರಳ ಬದುಕುವ್ಯಾಪಾರಕ್ಕೆ ಕುತ್ತು; ಹಾಗಾಗಿ ಸದಾ ಅಭದ್ರತೆಯಲ್ಲಿ ತೊಳಲುವ ಮನಸ್ಸುಗಳನ್ನು ಸೃಷ್ಟಿಸಿದರೆ ತನ್ನ ಸರಕು ವ್ಯಾಪಾರವು ಸಲೀಸಾಗಿ ನಡೆಯುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಜನರಿಗೆ ತಾವು ಬಿಕರಿ ಮಾಡುವ ವಸ್ತುಗಳ ಅಭಾವದಲ್ಲಿ ಅಭದ್ರತೆಯ ಅನುಭವವಾಗುವಂತೆ ಮಾಡುವುದೇ ಈ ಜಾಹಿರಾತುಗಳ ಉದ್ದೇಶ. ಜಾಹಿರಾತುಗಳ ಸುಪ್ತ ಸಂದೇಶಗಳನ್ನು ನೋಡಿ – ನಿಮಗೆ ಸಮಯವಿಲ್ಲವೇ? ನೀವು ಇದನ್ನು ಕೊಳ್ಳಿ, ಇದು ನಿಮ್ಮ ಸಮಯವನ್ನು ಉಳಿಸುತ್ತದೆ. ಈ ಸಂದೇಶಗಳು ನಿಧಾನವಾಗಿ ಸಮಯವಿಲ್ಲದೆ ಇರುವುದೇ ಒಂದು ಪ್ರತಿಷ್ಠಿತ ಆದರ್ಶವಾಗಿ ಜನಗಳ ಮನಸ್ಸಿನಲ್ಲಿ ಬೇರೂರುವಂತೆ ಮಾಡುತ್ತದೆ. ಸಮಯ ಸಾಕಷ್ಟು ಇರುವ, ತಮ್ಮ ಕೆಲಸವನ್ನು ತಾವೇ ಯಂತ್ರಗಳ ಸಹಾಯವಿಲ್ಲದೆ ಮಾಡಿಕೊಳ್ಳುವ ಜನರು ಆಧುನಿಕ ಸರಕುಗಳನ್ನು ಕೊಳ್ಳಲಾರದ ಅಸಮರ್ಥರು ಅಥವ ಸಮಯವನ್ನು ಉಪಯುಕ್ತವಾಗಿ ಮತ್ತಷ್ಟು ಹಣಗಳಿಸಲು ಬಳಸಲಾರದ ಕಳಪೆಜನಗಳು ಎಂಬಂಥ ಅರ್ಥನೀಡುತ್ತವೆ. ನನಗೆ ಸಮಯವಿಲ್ಲ. 'Time is money' ಎನ್ನುವುದು ಅನೇಕರ ಆದರ್ಶದ ಮಾತಾಗಿರುವುದು ಕ್ರಮೇಣ ಸ್ವಯಂ ಸೇವಾ ಸಂಸ್ಥೆಗಳಿಗೂ ವ್ಯಾಪಿಸುತ್ತಿದೆ. ಜಾಗತೀಕರಣದ ಪ್ರಭಾವದಿಂದ ಪ್ರತಿಯೊಬ್ಬರೂ ಪ್ರಪಂಚದ ಪ್ರತಿಯೊಂದನ್ನೂ ಹಣಕ್ಕೆ ವಿನಿಮಯ ಮಾಡಡಿಕೊಳ್ಳಬಹುದಾದ ಸರಕು ಎಂದು ಭಾವಿಸುವ ಸ್ಥಿತಿಗೆ ಬಂದಿರುವುದರಿಂದ ಸರಕು ಸಂಸ್ಕೃತಿಯನ್ನು ಕಾಣುತ್ತಿದ್ದೇವೆ. ತಂತ್ರಜ್ಞಾನದಿಂದ ಎ.ಕೆ.೪೭ ಬಂದೂಕುಗಳನ್ನು ಅಥವಾ ಇದಕ್ಕೂ ಮಿಗಿಲಾದ ಶಸ್ತ್ರಾಸ್ತ್ರಗಳನ್ನು ತಯಾರಿಸಬಹುದು. ಅದರೆ ಗಾಂಧೀವಿವೇಕದಿಂದ ಮಾತ್ರ ನಾವು ಈ ಶಸ್ತ್ರಾಸ್ತ್ರಗಳನ್ನು ತಿರಸ್ಕರಿಸಲು ಸಾಧ್ಯ.

ಜಾಗತೀಕರಣದ ದುರಾಸೆಗಳನ್ನು, ಮೌಲ್ಯ ದೂರವಾದ ಕಾರ್ಯ ವಿಧಾನಗಳನ್ನು ಮತ್ತು ಹಣ ಗಳಿಕೆಯ ಏಕಮಾತ್ರ ಉದ್ದೇಶಗಳನ್ನು ಬಹುತೇಕ ಕಾರ್ಪೊರೇಟ್ ಸಂಸ್ಥೆಗಳು ಅಳವಡಿಸಿಕೊಂಡಿದೆ. ಇಂದು ಇದೇ ಬಗೆಯ ಮೌಲ್ಯವಿಹೀನ ಧೋರಣೆಗಳನ್ನು

ಮಠ-ಮಾನ್ಯಗಳು. ಸ್ವಯಂ-ಸೇವಾ ಸಂಸ್ಥೆಗಳು ಅಳವಡಿಸಿಕೊಂಡಿರುವುದನ್ನು ಕಾಣುತ್ತೇವೆ. ಕಾರ್ಪೋರೇಟ್ ವಲಯಗಳ ಅಪಾರ ಆರ್ಥಿಕ ಸಂವೃದ್ಧಿಗೆ ಮನಸೋತ ಸರ್ಕಾರೇತರ ಸಂಸ್ಥೆಗಳು ಈ ಧೋರಣೆಯ ಜೊತೆಜೊತೆಗೆ ಹುಟ್ಟುವ ಬುದ್ಧಿ ಸಾಮರ್ಥ್ಯವನ್ನು ಮಾತ್ರ ಗೌರವಿಸುತ್ತವೆ. ಅಲ್ಲದೆ ಮಾರ್ಗ ಯಾವುದಾದರೇನು ಕೆಲಸ ಸಾಧಿಸುವ ಚಾಕಚಕ್ಯತೆಯನ್ನು ಪುರಸ್ಕರಿಸುತ್ತವೆ. ವ್ಯಾಪಾರೀ ದೃಷ್ಟಿಯಿಂದ ಸಮರ್ಥ ಆಡಳಿತಾತ್ಮಕ ವ್ಯವಸ್ಥೆಗೆ ಒತ್ತು ಕೊಟ್ಟು ತಮ್ಮ ನಿರೀಕ್ಷೆಗೆ ಏರಿ ನಿಲ್ಲದ ದುರ್ಬಲ ವರ್ಗವನ್ನು ಅನರ್ಹರು ಎಂದು ಪರಿಗಣಿಸಿ ದೂರ ತಳ್ಳುವ ಸ್ಥಿತಿಗೆ ಅನೇಕ ಮಠ-ಮಾನ್ಯಗಳು ಇಂದು ಬಂದು ನಿಂತಿವೆ. ಬಡವರ ಪರವಾಗಿ, ಹಿಂದುಳಿದವರ ಪರವಾಗಿ ಕೆಲಸ ಮಾಡಲು ಕಂಕಣಬದ್ಧವಾಗಿ ನಿಂತ ಸ್ವಯಂಸೇವಾ ಸಂಸ್ಥೆಗಳು ಸಹ ಇದಕ್ಕೆ ಹೊರತಾಗಿಲ್ಲ. ಸ್ವಯಂ ಸೇವಾ ಕೆಲಸವನ್ನು ಸಹ ಅದಕ್ಕೆ ಸಮನಾದ ಆರ್ಥಿಕ ಪ್ರತಿಫಲವನ್ನು ಪಡೆಯದೆ ಮಾಡಲೇಕೂಡದು ಎಂಬ ಹೊಸ ಮನೋವಿಜ್ಞಾನಾಧರಿತ ಸಿದ್ಧಾಂತವನ್ನು ಅನೇಕ ಸ್ವಯಂಸೇವಾ ಸಂಸ್ಥೆಗಳು ಅಂಗೀಕರಿಸಿವೆ. ಗಾಂಧಿ ಆದರ್ಶದಿಂದ ಭಿನ್ನವಾದ ಈ ಸಿದ್ಧಾಂತ ಹೇಗೆ ಯುರೋಪ್ ಕೇಂದ್ರಿತ ಜೀವನದೃಷ್ಟಿ ಮತ್ತು ಜೀವನ ಸಾಫಲ್ಯಗಳಿಂದ ಪ್ರಭಾವಿತವಾಗಿವೆ ಎಂಬುದನ್ನು ನಾವು ಗಮನಿಸಬಹುದು. ಸ್ವಯಂ ಸೇವಾ ಸಂಸ್ಥೆಗಳು ಹೀಗೆ ನಮ್ಮದೇ ನೆಲದಲ್ಲಿ ಕಂಡು ಹಿಡಿದ, ಸಮಸ್ಯೆಗೆ ಶಾಶ್ವತ ಪರಿಹಾರವನ್ನು ನೀಡಬಲ್ಲ ಗಾಂಧಿ ಜೀವನ ದೃಷ್ಟಿಯನ್ನು ಅರಗಿಸಿಕೊಳ್ಳಲಾರದೆ ಪಾಶ್ಚಾತ್ಯ ಮಾದರಿಗೆ ಮಾರುಹೋಗುತ್ತಿರುವುದು ದುರದೃಷ್ಟವೇ ಸರಿ. ಇದಕ್ಕೆ ಮುಖ್ಯ ಕಾರಣ ಗಾಂಧೀ ಜೀವನ ದೃಷ್ಟಿ ಇವರ ಪ್ರಕಾರ ನಷ್ಟದ ವ್ಯಾಪಾರ. ಈ ನಷ್ಟದ ವ್ಯಾಪಾರಕ್ಕೆ ಯಾರೂ ತಯಾರಿಲ್ಲ. ಈ ಸಂಸ್ಥೆಗಳ ಬುನಾದಿಯಲ್ಲಿ ಆಧ್ಯಾತ್ಮದ ಅಭಾವ ಮತ್ತು ಅದನ್ನು ಸರಿದೂಗಿಸಲು ಮನೋವಿಜ್ಞಾನದ ಮೌಲ್ಯಗಳನ್ನು ಅಳವಡಿಸಿರುವುದನ್ನು ಕಾಣುತ್ತೇವೆ. ಈ ಮನೋವಿಜ್ಞಾನಾಧಾರಿತ ಧೋರಣೆ ಎಲ್ಲ ಬಗೆಯ ಸರಳತೆಯನ್ನು ಅರ್ಥಹೀನವಾದ ಬಡತನಕ್ಕೆ ಸಮೀಕರಿಸಿ ತ್ಯಾಗ ಸರಳತೆಗಳನ್ನು ಅರ್ಥವಿಲ್ಲದ ಆತ್ಮಹಿಂಸೆ ಎಂದು ಪರಿಗಣಿಸುವಂತೆ ಕಂಡುಬರುತ್ತದೆ.

ಗಾಂಧೀಜಿಯವರು ಯಾವ ದೌರ್ಬಲ್ಯಗಳಿಂದ ತಮ್ಮನ್ನೇ ತಾವು ದೂರವಿಟ್ಟು ಕಾಯ್ದುಕೊಂಡಿದ್ದರೊ ಅದೇ ದೌರ್ಬಲ್ಯಗಳನ್ನು ಈ ಸರ್ಕಾರೇತರ ಸಂಸ್ಥೆಗಳು ಅಭಿವೃದ್ಧಿಯ ಹೆಸರಿನಲ್ಲಿ ಪೋಷಿಸುತ್ತಿವೆ. ನಾವು ಕಂಡಂತೆ ಅನೇಕ ಮಠಗಳು ಹುಟ್ಟಿದ್ದು ಹಳ್ಳಿಗಳಲ್ಲಿ. ಅದರೆ ನಿಧಾನವಾಗಿ ಅವು ಪಟ್ಟಣಗಳ ಕಡೆ ವಲಸೆ ಹೋಗಿವೆ. ಅವುಗಳ ನಗರ ಶಾಖೆಗಳು ಐಶಾರಾಮಿ ಅರಮನೆಗಳಂತೆ ಕಂಗೊಳಿಸುತ್ತವೆ. ಅಭಿವೃದ್ಧಿಯ ಹೆಸರಿನಲ್ಲಿ, ಮಠಗಳ ಆಸ್ತಿ-ಪಾಸ್ತಿಗಳು ಕೆಲವೊಮ್ಮೆ ಕಪ್ಪು ಹಣವನ್ನು ಬಳಸಿಕೊಂಡು ಎಲ್ಲೆ ಮೀರಿ ಬೆಳೆಯುತ್ತಿವೆ. ಸಹಜವಾಗಿ ಭಾವಿಸುವುದಾದರೆ ಈ ಮಠಗಳು ಪ್ರಮಾಣಿಕತೆ, ಸರಳತೆ ಮತ್ತು ಅತಿಯಾದ ಯಾಂತ್ರಿಕರಣದನಿರಾಕರಣೆ ಇವುಗಳನ್ನು ಎತ್ತಿ ಹಿಡಿಯಬೇಕಾಗಿತ್ತು. ಇಂದು ಸಮಾಜಕ್ಕೆ ಬೇಕಾಗಿರುವುದು ಸರಳ ಬದುಕಿನ ಆಧ್ಯಾತ್ಮ ಪ್ರಧಾನವಾದ ಬದುಕಿನ ಮಾದರಿ. ಆರೋಗ್ಯ ಹಾಗೂ ಶಿಕ್ಷಣ ಸಂಸ್ಥೆಗಳನ್ನು ಮಠಗಳು ನೇರವಾಗಿ ನಡೆಸುವ ಮೂಲಕ ಯಾವ ಮೂಲಭೂತ ಮೌಲ್ಯಗಳಿಗೆ ಬದ್ಧವಾಗಿರಬೇಕಾಗಿತ್ತೊ ಆ ಮೌಲ್ಯಗಳನ್ನು ಸಂಪೂರ್ಣವಾಗಿ ಸಡಿಲ ಬಿಟ್ಟಿವೆ. ಮಠ ಸಮರ್ಥ ಆಡಳಿತ ನೀಡುವ ಸಂಸ್ಥೆಗಳನ್ನು ನಡೆಸುವ ಅವಶ್ಯಕತೆ ಇಲ್ಲ. ಏಕೆಂದರೆ ಸಂಸ್ಥೆಗಳನ್ನು ನಡೆಸಲು ತರಬೇತಿ ಪಡೆದ ಬುದ್ಧಿಶಾಲಿಗಳಾದ ಅನೇಕ ಜನ ಇಂದು ಸಿದ್ಧರಿದ್ದಾರೆ. ಆದರೆ ಸಮಾಜಕ್ಕೆ ಮೌಲ್ಯದ ಮಾದರಿಯನ್ನು ಒದಗಿಸಬಲ್ಲವರು ಕೆಲವೇ ಕೆಲವು ಧರ್ಮಗುರುಗಳು. ಈಗಲೂ ಕೂಡ ಮಠಗಳು ತಮ್ಮ ವ್ಯವಸ್ಥೆಯನ್ನು ಶುದ್ಧ

ಆಧ್ಯಾತ್ಮಿಕ ಮತ್ತು ಶುದ್ಧ ಅಭಿವೃದ್ಧಿ ವಿಭಾಗಗಳಾಗಿ ವಿಭಜಿಸಿ ಪ್ರಮಾಣಿಕ ಪರಿಣತರ ಕೈಗೆ ಅಭಿವೃದ್ಧಿಯ ಕೆಲಸವನ್ನು ಕೊಟ್ಟು ತನ್ನ ಆಧ್ಯಾತ್ಮ ಹಾಗೂ ಸರಳ ಜೀವನ ದರ್ಶನವನ್ನು ದಿನನಿತ್ಯವೂ ಆಚರಿಸಿ ತೋರಿಸುವುದರಿಂದ ಅಮೂಲ್ಯವಾದ ಕೊಡುಗೆಯನ್ನು ಸಮಾಜಕ್ಕೆ ನೀಡಬಹುದು. ಮಠದ ಗುರುವೊಬ್ಬ ಸಂಪೂರ್ಣವಾಗಿ ತನ್ನನ್ನು ತಾನೇ ಈ ಆದರ್ಶಕ್ಕೆ ತೊಡಗಿಸಿಕೊಂಡನೆಂದರೆ ಅದರ ಪರಿಣಾಮವಾಗಿ ಆ ಸಂಸ್ಥೆಯ ಅಭಿವೃದ್ಧಿ ರಂಗದಲ್ಲೂ ಮೌಲ್ಯ ಪ್ರವೇಶವಾಗಿ ಉತ್ತಮ ಪರಿಣಾಮಗಳನ್ನು ಕಾಣಬಹುದು. ಇದಕ್ಕೆ ಗಾಂಧೀಜಿ ಹೇಳುವ 'ನೀನು ಬಯಸುವ ಬದಲಾವಣೆ ಮೊದಲು ನಿನ್ನಲ್ಲೆ ಆಗಲಿ' ಎಂಬ ಮಾತು ಮಠದ ಮುಖ್ಯಸ್ಥನಲ್ಲಿ ಉಂಟಾಗಬೇಕು. ಇದೊಂದು ಬಹು ದೊಡ್ಡ ನಿರ್ಧಾರವಾದರೂ ನಮ್ಮ ಇಂದಿನ ಮಠ-ಮಾನ್ಯಗಳು ಸಮಾಜದ ಅಗತ್ಯಗಳಿಗೆ ಪ್ರಸ್ತುತವಾಗಿ ಮುಂದುವರೆಯಬೇಕಾದರೆ ಈ ನಿರ್ಧಾರ ಅನಿವಾರ್ಯ.

'It is good to be born in Church, but it is not wise to die there' ಎಂಬ ಮಾತಿನಂತೆ ಎಲ್ಲಾ ಸರ್ಕಾರೇತರ ಸಂಸ್ಥೆಗಳು ಸಾಂಸ್ಥಿಕವಾಗಿ ಪ್ರಾರಂಭವಾದರೂ ತಮ್ಮ ಕಾರ್ಯಕ್ಷೇತ್ರವನ್ನು ನಾಲ್ಕು ಗೋಡೆಗಳ ಆಚೆಗೆ ಗುಣಾತ್ಮಕವಾಗಿ ವಿಸ್ತರಿಸದೆ ಅನ್ಯಮಾರ್ಗವಿಲ್ಲ. ಆದರೆ "ತೆರಣಿಯ ಹುಳು ತನ್ನ ನೂಲೊಳು ತಾನೆ ಸಿಕ್ಕಿ ಸಾವಂತೆ" ಎಂಬ ಅಕ್ಕನ ವಚನದಂತೆ ಅನೇಕ ಸಂಸ್ಥೆಗಳು ಅನಾವಶ್ಯಕವಾದ ಗಾತ್ರ ಪಡೆಯುತ್ತ ಬೆಳೆದು ಬೆಳೆದು ಕೊನೆಗೆ ತನ್ನ ಭಾರಕ್ಕೆ ತಾನೇ ಕುಸಿದು ಸಂಪೂರ್ಣವಾಗಿ ನಿಶ್ಕ್ರಿಯವಾಗಿ ಬಿಡುತ್ತವೆ. ಇಂದು ಅನೇಕ ಸ್ವಯಂ ಸೇವಾ ಸಂಸ್ಥೆಗಳು ಗ್ರಾಮಾಭ್ಯುದಯಕ್ಕೆಂದು ಗ್ರಾಮಗಳಲ್ಲೆ ಪ್ರಾರಂಭವಾಗಿ ಕೊನೆಗೆ ನಗರ ಪ್ರದೇಶಗಳಲ್ಲಿ ತಮ್ಮ ಶಾಖೆಗಳನ್ನು ಪ್ರಾರಂಭಿಸಿ ಹವಾನಿಯಂತ್ರಿತ ಕೊಠಡಿಗಳನ್ನು ನಿರ್ಮಿಸಿಕೊಳ್ಳುತ್ತವೆ. ಈ ಹೊತ್ತಿಗೆ ಈ ಸಂಸ್ಥೆಗಳಿಗೆ ನೇರವಾಗಿ ಬಡವರ ದುರ್ಬಲರ ಒಡನಾಟ ಅಸಹನೀಯವಾಗಿ 'ಸಂಶೋಧನೆ', 'ಪ್ರಚಾರ' ಮುಂತಾದ ಬಿಳಿಕತ್ತಿನ ಪಟ್ಟಿ (white collared jobs) ಕೆಲಸಗಳಲ್ಲಿ ತೊಡಗುತ್ತದೆ. ಸ್ವಾಮಿ ವಿವೇಕಾನಂದರು ಈ ಬಗೆಯ ಸಮಾಜ ಕಾರ್ಯವನ್ನು ನೂರು ವರ್ಷಗಳ ಹಿಂದೆಯೇ 'Ornamental social work' ಎಂದು ವರ್ಣಿಸುತ್ತಿದ್ದರು.

ಜನಗಳು ವಲಸೆ ಹೋಗುವಂತೆ ಮಠಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ಇತರ ಸರ್ಕಾರೇತರ ಸಂಸ್ಥೆಗಳೂ ಪಟ್ಟಣಗಳ ಕಡೆ ವಲಸೆ ಹೋಗುವುದು ದೊಡ್ಡ ದುರಂತ. ಗಾಂಧೀಜಿಯವರು ಇಡೀ ಸ್ವಾತಂತ್ರ ಸಂಗ್ರಾಮವನ್ನು ಕುಗ್ರಾಮವೊಂದರ ಜೋಪಡಿಯಿಂದ ನಡೆಸಿದರು. ನೆಹರೂ, ಪಟೇಲ್ ಅವರಂತಹ ಧುರೀಣರು ಈ ಜೋಪಡಿಯಲ್ಲೆ ಉಳಿದುಕೊಳ್ಳಬೇಕಾಗುತ್ತಿತ್ತು. ಚಕ್ರವರ್ತಿ ಜಾರ್ಜ್‌ನ ದುಂಡು ಮೇಜಿನ ಪರಿಶತ್ತಿಗೆ ತುಂಡು ಪಂಚೆಯುಟ್ಟು ಹೋದರು. ಯಾವ ಬಡ ಭಾರತೀಯನನ್ನು ನಾನು ಪ್ರತಿನಿಧಿಸುತ್ತೇನೊ ಅವನಿಗಿಂತ ಭಿನ್ನವಾಗಿ ಹೊಸ ಉಡುಪು ಧರಿಸಿ ಚಕ್ರವರ್ತಿಯನ್ನು ಕಾಣಲಾರೆ ಎಂದು ಬಿಟ್ಟರು. ಈ ಚಕ್ರವರ್ತಿ ಗಾಂಧೀಜಿಯವರನ್ನು ಅವರ ತುಂಡು ಪಂಚೆಯಲ್ಲಿಯೆ ನೋಡಲು ತನ್ನ ಮನಸ್ಸು ಬದಲಿಸಿಕೊಳ್ಳಬೇಕಾಯಿತೆ ಹೊರತು ಗಾಂಧೀಜಿ ಮಾತ್ರ ತಮ್ಮ ನಿಲುವನ್ನು ಬದಲಿಸಲಿಲ್ಲ. ಈ ಜಿಗುಟುತತ್ವ ಕೇವಲ ಅರ್ಥವಿಲ್ಲದ ಹಠಮಾರಿತನವಾಗಿರಲಿಲ್ಲ. ಅದರ ಹಿಂದೆ ಒಂದು ಪ್ರಾಜ್ಞ ಮನಸ್ಸು, ಅಪ್ಪಟ ಪ್ರಮಾಣಿಕತೆ ಧೈರ್ಯಗಳು ಕೆಲಸ ಮಾಡುತ್ತಿತ್ತು ಎಂಬುದನ್ನು ನಾವು ಗುರುತಿಸಬೇಕು.

ಕಲಬೆರಕೆಯ ಇಂದಿನ ದಿನಗಳಲ್ಲಿ ಮಾರ್ಗ ಮತ್ತು ಗುರಿ ಎರಡು ಮುಖ್ಯ ಎಂಬುದನ್ನು ಸರ್ಕಾರೇತರ ಸಂಸ್ಥೆಗಳು ಮನಗಾಣದೆ ಬೇರೆ ದಾರಿ ಇಲ್ಲ. ಹೊಸ

ಹುರುಪಿನಲ್ಲಿ ಎತ್ತಿ ಹಿಡಿದ ಆದರ್ಶಗಳನ್ನು ನಾವು ಕಡೆತನಕ ಉಳಿಸಿಕೊಳ್ಳಬೇಕಾದರೆ ಗುರಿ ಎಷ್ಟು ಮುಖ್ಯವೋ ಮಾರ್ಗವೂ ಅಷ್ಟೇ ಮುಖ್ಯ ಎಂದು ಅರಿತು ಮುನ್ನಡೆಯಬೇಕು. ಹೊಸ ಹುರುಪಿನ ಆದರ್ಶಗಳು ಹೇಗೆ ಕ್ಷೀಣಿಸುತ್ತವೆ ಎಂಬುದನ್ನು ವರ್ಣಿಸಲು ಖಾಲಿಲ್ ಗಿಬ್ರಾನ್ ಒಂದು ಕಥೆ ಹೇಳುತ್ತಾರೆ. ಮರಳು ಗಾಡಿನ ಒಂದು ನರಿ ಸೂರ್ಯೋದಯ ಕಾಲದಲ್ಲಿ ತನ್ನ ನೆರಳನ್ನು ನೋಡಿತು. ವಿಶಾಲವಾಗಿ ಚಾಚಿಕೊಂಡಿದ್ದ ತನ್ನ ನೆರಳಿಗೆ ತಾನೇ ಸಂಭ್ರಮ ಪಟ್ಟು ಈ ದಿನ ಊಟಕ್ಕೆ ಒಂದು ಒಂಟೆಯನ್ನೆ ಹಿಡಿಯುತ್ತೇನೆ ಎಂದು ಭಾವಿಸಿತು. ಅದರೆ ಮಧ್ಯಾಹ್ನದ ವೇಳೆಗೆ ಸೂರ್ಯ ನೆತ್ತಿಯ ಮೇಲೆ ಬಂದ. ನರಿಗೆ ಹಸಿವಾಗಿತ್ತು ಬೇಟೆ ಮಾತ್ರ ಸಿಕ್ಕಿರಲಿಲ್ಲ. ಆಗ ಅದು ಖಿನ್ನವಾಗಿ ತನ್ನ ಮೊಟಕಾದ ನೆರಳನ್ನು ನೋಡಿ ಮಧ್ಯಾಹ್ನದ ಊಟಕ್ಕೆ ಒಂದು ಇಲಿಯಾದರು ಸಿಕ್ಕರೆ ಸಾಕು ಎಂದು ಭಾವಿಸಿತು. ಎಷ್ಟೋ ವೇಳೆ ಹೊಸ ಹುರುಪಿನಲ್ಲಿ ಘೋಷಿಸಿದ ಆದರ್ಶಗಳು, ಸಾಧ್ಯತೆಗಳು ವಾಸ್ತವ ಜಗತ್ತಿನ ಸವಾಲುಗಳೆದುರು ನಿಧಾನವಾಗಿ ಕುಸಿದು ಕುಬ್ಜವಾಗಿಬಿಡುತ್ತವೆ.

ಸ್ವಾತಂತ್ರಪೂರ್ವದ ಹೋರಾಟದ ದಿನಗಳಲ್ಲಿ ಸಮಾಜವಾದಿಗಳ ಗುಂಪು ಮಾರ್ಗ ಯಾವುದಾದರೇನು ಗುರಿ ಸಾಧಿಸಿದರೆ ಆಯಿತು ಎಂಬ ನಿಲುವು ತಳೆದಿತ್ತು. ಗಾಂಧೀಜಿ ಇದನ್ನು ಒಪ್ಪಲಿಲ್ಲ. ಕೊನೆಗೆ ಈ ತತ್ವದ ಅನಿವಾರ್ಯತೆಯನ್ನು ಸಮಾಜವಾದಿ ಚಿಂತಕರಾದ ಜಯಪ್ರಕಾಶನಾರಾಯಣರು ಮನಗಂಡರು.

ಅನೇಕ ಕಾರ್ಪೋರೆಟ್ ಸಂಸ್ಥೆಗಳು ದೇಶಪ್ರೇಮವನ್ನು, ಅಭಿವೃದ್ಧಿಯ ಆಶಯವನ್ನು ವ್ಯಕ್ತಪಡಿಸುತ್ತವೆ. ನಿಜವಾಗಿ ಹೇಳಬೇಕೆಂದರೆ ಈ ಕಾರ್ಪೋರೆಟ್ ಸಂಸ್ಥೆಗಳು ಸಾಧಿಸಿರುವ ಅಸಾಧಾರಣವಾದ ಶಿಸ್ತು ಮತ್ತು ಆಡಳಿತಾತ್ಮಕ ಕೌಶಲಗಳು ದೇಶ ಕಟ್ಟುವ ನಿಟ್ಟಿನಲ್ಲಿ ಬಳಕೆಯಾದರೆ ಹಿಂದೆಂದು ಕಾಣದಂತಹ ಅದ್ಭುತವಾದ ಬದಲಾವಣೆ ಸಾಧ್ಯ. ಮುಖ್ಯವಾಗಿ ಸರ್ಕಾರಿ ವ್ಯವಸ್ಥೆಯ ಕುಂದು ಕೊರತೆಗಳನ್ನು ಈ ಸಂಸ್ಥೆಗಳಲ್ಲಿರುವ ಮಹಾನ್ ಬುದ್ಧಿಶಾಲಿಗಳು ಸರಿಪಡಿಸಲು ನೆರವು ನೀಡಬಹುದು. ಒಂದು ವ್ಯವಸ್ಥೆಯ ಅಡಿಯಲ್ಲಿ ನಡೆಯುವ ಒಪ್ಪಂದಗಳು, ಕರಾರುಗಳು ಹಾಗೂ ಪಾಲಿಸಿ ನಿರ್ಧಾರಗಳು ಇಡೀ ವ್ಯವಸ್ಥೆಯ ಆರೋಗ್ಯಕ್ಕೆ ಪೂರಕವಾಗಿವೆ. ಆದರೆ ಭ್ರಷ್ಟಾಚಾರ ತಂಡವವಾಡುತ್ತಿರುವ ನಮ್ಮ ವ್ಯವಸ್ಥೆಯಲ್ಲಿ ಪಟ್ಟಭದ್ರ ಹಿತಾಶಕ್ತಿಗಳು ಈ ಎಲ್ಲ ಕರಾರುಗಳು ರೂಪುಗೊಳ್ಳುವ ಮೂಲದಲ್ಲೇ ತಾನು ಕೊಳ್ಳೆ ಹೊಡೆಯಲು ಬೇಕಾದ ಎಲ್ಲ ಅನುಕೂಲಗಳನ್ನು ಕಲ್ಪಿಸಿಕೊಳ್ಳುತ್ತವೆ. ಬೃಹತ್ ಆರ್ಥಿಕ ವ್ಯವಹಾರಗಳು ಸರ್ಕಾರ ಮತ್ತು ಗುತ್ತಿಗೆದಾರರ ನಡುವೆ ಎಲ್ಲೆಲ್ಲಿ ನಡೆಯುತ್ತದೊ ಆ ಎಲ್ಲ ಕರಾರು ಪತ್ರಗಳನ್ನು ಕಾರ್ಪೋರೆಟ್ ಸಂಸ್ಥೆಗಳ ಬುದ್ಧಿಶಾಲಿ ಜನರಿಂದ ಲೋಪವಿಲ್ಲದಂತೆ ಮಾಡಿಸಲು ಸಾಧ್ಯವಿದೆ. ಇದನ್ನು ಸರ್ಕಾರ ಒಪ್ಪಬೇಕು ಮತ್ತು ಈ ಕೆಲಸವನ್ನು ಬಹಳ ಗಂಭೀರವಾಗಿ ಕಾರ್ಪೋರೇಟ್ ಸಂಸ್ಥೆಗಳು ತೆಗೆದುಕೊಂಡು ಈ ಕೆಲಸಕ್ಕಾಗಿಯೇ ಒಂದು ದೊಡ್ಡ ಶಾಖೆಯನ್ನು ತೆರೆದು ಹೊಸದಾಗಿ ಇಡೀ ದೇಶವನ್ನು ಕಟ್ಟುವ ಕೆಲಸ ಪ್ರಾರಂಭವಾಗಬೇಕು. ತಂತ್ರಜ್ಞಾನವನ್ನು ಭ್ರಷ್ಟಚಾರ ನಿರ್ಮೂಲನೆಗೆ ನಾವು ಯಶಸ್ವಿಯಾಗಿ ಬಳಸಿಕೊಂಡಿಲ್ಲ. ಇದಕ್ಕೆ ಒಪ್ಪುವಂತೆ ಸರ್ಕಾರದ ಮೇಲೆ ನಾವು ಒತ್ತಾಯ ಹಾಕಬೇಕು ಜೊತೆಗೆ ಈ ಕೆಲಸದಲ್ಲಿ ನೆರವಾಗಲು ಮಾಹಿತಿ ತಂತ್ರಜ್ಞಾನದ ಕಾರ್ಪೋರೇಟ್ ವಲಯಗಳು ಸ್ವಯಂಸ್ಫೂರ್ತಿಯಿಂದ ಮುಂದಾಗಬೇಕು.

ಈ ಚರ್ಚೆಯನ್ನು ಬ್ರಿಟಿಷ್ ಚಿಂತಕ ಎಡ್ಮಡ್ ಬುರ್ಕೆ ಅವರ ಮಾತಿನಿಂದ ಮುಗಿಸೋಣ 'The only thing necessary for the triumph of evil is for good men to do nothing'

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಸಹೃದಯರ ಬಳಗದ ಎರಡನೇ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾದ ಶ್ರೀ ಸಚ್ಚಿದಾನಂದ ಹೆಗಡೆ ಬಂದಿದ್ದರು. ಅವರು 'ಆರೋಗ್ಯ ಸಂಪನ್ನ ಸಮಾಜ ಅಗತ್ಯ' ಎಂಬ ವಿಷಯವಾಗಿ ಪರಿಣಾಮಕಾರಿಯಾಗಿ ಮಾತನಾಡಿದರು. ಸಭೆಯಲ್ಲಿ ಸುಮಾರು ೩೦ ಜನ ಭಾಗವಹಿಸಿದ್ದರು. ಅವರು ಸ್ಥಳೀಯ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಹೊಸ ಜೀವನ ದಾರಿ ಕೇಂದ್ರಕ್ಕೂ ಭೇಟಿಕೊಟ್ಟರು.

ಮೈಸೂರಿನಲ್ಲಿರುವ ವಿವೇಕಾನಂದ ಯುತ್ ಮೂವ್‌ಮೆಂಟ್ ಸಂಸ್ಥೆಯಲ್ಲಿ ಟ್ರಸ್ಟಿನ ಅಧ್ಯಕ್ಷರು ಗಾಂಧೀಜಿ ವಿಚಾರದ ಪ್ರಸ್ತುತತೆ ಎಂಬ ವಿಷಯವಾಗಿ ಮಾತನಾಡಿದರು. ಈ ಸಂಸ್ಥೆಯನ್ನು ಡಾ॥ ಆರ್. ಬಾಲಸುಬ್ರಮಣ್ಯಂ ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದಾರೆ. ಗಾಂಧೀಜಿಯವರು ೧೯೨೭, ೧೯೩೪ರಲ್ಲಿ ಮೈಸೂರಿಗೆ ಭೇಟಿಕೊಟ್ಟ ಸ್ಮರಣೆ ನಿಮಿತ್ತ ಈ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಧಾರವಾಡದಲ್ಲಿಯ 'ಅಭಿವೃದ್ಧಿ ಕುರಿತ ಅಧ್ಯಯನ ಸಂಸ್ಥೆ'ಯಲ್ಲಿ ಏರ್ಪಡಿಸಲಾಗಿದ್ದ ಸಭೆಯಲ್ಲಿ ಮತ್ತು ರಾಷ್ಟ್ರೋತ್ಥಾನ ಪರಿಷತ್‌ನ ಶಾಲೆಯಲ್ಲಿ ಮತ್ತು ಡಾ॥ ಸಂಜೀವ ಕುಲಕರ್ಣಿಯವರ 'ಬಾಳಬಳಗ' ಸಂಸ್ಥೆಯಲ್ಲಿ ಮಾತನಾಡಿದರು. ಧಾರವಾಡ ಆಕಾಶವಾಣಿಯವರು ಸಂದರ್ಶನ ನಡೆಸಿದರು. ಹೊಸ ಜೀವನ ದಾರಿ ಕೇಂದ್ರದಲ್ಲಿ ಕೈಗೊಳ್ಳಲಿರುವ 'ನೆಸೆ-ಬಸ' ಕಾರ್ಯಕ್ರಮದ ಅಂಗವಾಗಿ ಅಕ್ಕಪಕ್ಕದ ಕಾಡಿನಲ್ಲಿಯ ವಿಶೇಷ ಮರಗಳ ಬೀಜಗಳ ಸಂಗ್ರಹಣಾ ಕಾರ್ಯ ಕೈಗೊಳ್ಳಲಾಯಿತು. ಈ ಕೆಲಸಕ್ಕಾಗಿ ಮೈಸೂರಿನಿಂದ ಕೆಲ ಯುವಕರು ಬಂದಿದ್ದರು. ಹುಣ್ಣಿಮೆಯಂದು ಬೆಳದಿಂಗಳ ಊಟವನ್ನು ನೆರವೇರಿಸಿದರು. ಇತ್ತೀಚೆಗೆ ಮೇಲುಕೋಟೆಯಲ್ಲಿ ಪು.ತಿ.ನ ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ಆ ಸಮಯದಲ್ಲಿ ಮೇಲುಕೋಟೆಗೆ ಬಂದಿದ್ದ ಪ್ರಭುಶಂಕರ ಮತ್ತು ಡಾ॥ಸರ್ವಮಂಗಳಾ ಬಂದಿದ್ದರು.

೨೦೧೧ ಮಾರ್ಚ್ ಮಾಹೆಯ ದಾನಿಗಳು

ಶ್ರೀ ಎಚ್.ಎಸ್.ವೆಂಕಟೇಶ್, ಶ್ರೀ ಆರ್.ಆರ್.ಅನವಟ್ಟಿ, ಶ್ರೀ ಎಂ.ಕೆ.ನಾರಾಯಣ, ಶ್ರೀ ಕೆ.ಬಿ.ನಾರಾಯಣ್- ಬೆಂಗಳೂರು * ಶ್ರೀ ರವಿ ಅಯ್ಯಂಗಾರ್-ಧಾರವಾಡ ಶ್ರೀಮತಿ ಎಂ.ಮನೋರಮ-ಶಿವಮೊಗ್ಗ * ಶ್ರೀ ಸಚ್ಚಿದಾನಂದ ಹೆಗಡೆ-ಸಿರ್ಸಿ ಶ್ರೀ ಕೌಸರ್, ಶ್ರೀ ಕೆ.ಬಿ.ಸದಾನಂದ-ಮೈಸೂರು* ಡಾ॥ ಸಿ.ಪಿ.ರಂಗನಾಥ-ಚನ್ನಪಟ್ಟಣ ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೮೯

- ಸುರೇಂದ್ರ ಕೌಲಗಿ



ಜನಪದ ನಿಲಯ ಟ್ರಸ್ಟಿನ ಜೀವಮಾನದ ಏರಿಳಿತಗಳ ಸಾಕ್ಷಿಯಾಗಿ ನಿಂತು ಮಾತನಾಡಲು ಪ್ರಾರಂಭಿಸಿ ಐವತ್ತು ವರ್ಷಗಳೇ ಆದವು. ಅರ್ಧಶತಮಾನದ ಕಾಲ ಪ್ರವಾಹದಲ್ಲಿ ಜನಪದ ನಿಲಯದಲ್ಲಿ ಘಟಿಸಿದ ಘಟನಾವಳಿಗಳು, ಅಲ್ಲಿ ಬಿದ್ದ ನೂರಾರು ಟ್ರಸ್ಟಿನ ಅಭಿಮಾನಿಗಳ ದಾನಿಗಳ, ಅತಿಥಿಗಳ ಮತ್ತು ಮಕ್ಕಳ ಪಾದಧೂಳಿಯ ಭಾವನಾತ್ಮಕ ದಾಖಲೆ ಇದೆ. ಅಕ್ಷರರೂಪಿ ದಾಖಲೆ ಮಸುಕು ಮಸುಕಾಗಿದೆ. ಆದರೆ ಒಂದು ವಸ್ತು ಮಾತ್ರ ಜನಪದ ನಿಲಯದ ಜೀವನದಲ್ಲಿ ಮೂಕಸಾಕ್ಷಿಯಾಗಿ ನಿಂತಿದೆ. ಅದು ಮೂಕ ಸಾಕ್ಷಿಯಾಗಿದ್ದರೂ ಸಾಹಿತ್ಯಾತ್ಮಕ ರೂಪಕಾರ್ಥದಲ್ಲಿ ಮತ್ತು ಮಾನವ ಹಾಗು ಪ್ರಕೃತಿ ಸಂಬಂಧದ ಅವಿನಾಭಾವ ಸಂಬಂಧದ ದೃಷ್ಟಿಯಲ್ಲಿ ಅದು ಮೂಕಸಾಕ್ಷಿಯಾಗಿರದೆ, ಜೀವಂತ ಸಾಕ್ಷಿಯೆಂದು ಹೇಳಬಹುದೇನೋ. ಅದುವೇ ಜನಪದ ನಿಲಯದ ಹಿತ್ತಲಲ್ಲಿ ನಿಂತಿರುವ ಬೇಲದ ಮರ. ಐವತ್ತು ವರ್ಷಗಳ ಹಿಂದೆ ಆ ಬೇಲದ ಮರ ಯಾವ ರೀತಿ ಗ್ರಾಮದ ಮಕ್ಕಳಿಗೆ ಬೇಲದ ಹಣ್ಣು ಪಡೆಯುವುದಕ್ಕಾಗಿ ಯಾವೆಲ್ಲಾ ಸಾಹಸಗಳಿಗೆ ಪ್ರಚೋದನೆಗೆ ಕಾರಣವಾಗಿತ್ತೊ ಇಂದಿನ ಮಕ್ಕಳಿಗೂ ಅದು ಕಾರಣವಾಗುತ್ತಿದೆ! ಹಣ್ಣಿಗಾಗಿ ಮಕ್ಕಳ ಸಾಹಸ ಕ್ರೀಡೆಗಳು ಒಂದಲ್ಲ, ಎರಡಲ್ಲ. ಅವುಗಳಲ್ಲಿ ಮುಖ್ಯವಾದವು ಹಣ್ಣುಗಳತ್ತ ಕಲ್ಲು ಎಸೆಯುವುದು, ಕದ್ದು ಮುಚ್ಚಿ ಹಿತ್ತಲ ಗೋಡೆಯನ್ನು ಹಾರಿ ಹಿತ್ತಲಿಗೆ ಬಂದು ಕೆಳಗೆ ಬಿದ್ದರಬಹುದಾದ ಬೇಲದ ಕಾಯಿಗಳನ್ನು ಹುಡುಕುವುದು. ಇಲ್ಲವೇ ಮುಂಬಾಗಿಲಿಗೆ ಬಂದು ಯಾವ ಸಂಕೋಚವಿಲ್ಲದೆ ಹಕ್ಕಿನ ಮನೋಭಾವನೆಯಿಂದ ಬೇಲದ ಕಾಯಿಗಾಗಿ ಅಂಗಲಾಚುವುದು. ಗ್ರಾಮದ ಮಕ್ಕಳ ಈ ಎಲ್ಲ ಸಾಹಸಗಳಿಗೆ ತಡೆಯೊಡ್ಡಬೇಕಾದ ಪರಿಸ್ಥಿತಿ ಮಕ್ಕಳ ದೌರ್ಭಾಗ್ಯವಶದಿಂದ ಬಂದಿತು. ಅಂದರೆ ಎತ್ತರಕ್ಕೆ ಗೋಡೆ ಕಟ್ಟಿಸ ಬೇಕಾಗಿ ಬಂತು. ಐವತ್ತು ವರ್ಷದ ಹಿಂದೆ ಬೇಲದ ಮರದಲ್ಲಿ ಬಿಡುತ್ತಿದ್ದ ಕಾಯಿಗಳ ಸಂಖ್ಯೆ ಹೆಚ್ಚಾಗಿರಲಿಲ್ಲ. ಕಾಯಿಗಳ ಸುತ್ತಳತೆ ದೊಡ್ಡ ಗೋಲಿ ಆಕಾರದ್ದಾಗಿರುತ್ತಿತ್ತು. ಮರ ಸಾಕಷ್ಟು ಎತ್ತರವಾಗಿಯೇ ಬೆಳೆದಿತ್ತು. ಅಷ್ಟು ಇತ್ತರದಲ್ಲಿ ಇದ್ದ ಗೋಲಿಯಾಕಾರದ ಬೇಲದ ಕಾಯಿಗಳಿಗೆ ಗುರಿಇಟ್ಟು ಕಲ್ಲೆಸದು ಅದು ಬೀಳುವಂತೆ ಮಾಡುವುದು. ಅದು ಮಕ್ಕಳ ಕೈಚಳಕಕ್ಕೆ ಮಾತ್ರ ಸಾಧ್ಯ. ಆ ಬೇಲದ ಮರದ ಕಾಯಿಗಳಿಗೆ ಕಲ್ಲು ಹೊಡೆದು ದೊಡ್ಡವರಾಗಿರುವ ಮತ್ತು ಗೋಡೆ ಹಾರಿ ಒಳಗೆ ಬಂದಿರುವ ಹಾಗು ತಪ್ಪಿಸಿಕೊಳ್ಳಲು ವೇಗವಾಗಿ ಪರಾರಿಯಾದ ಗ್ರಾಮದಲ್ಲಿಯ ಆ ಮಕ್ಕಳು ಇಂದು ದೊಡ್ಡವರಾಗಿದ್ದಾರೆ. ಅವರಲ್ಲಿ ಕೆಲವರಾದರೂ ಖಂಡಿತವಾಗಿ ಕ್ರೀಡಾಪಟುಗಳಾಗಿ

ರೂಪುಗೊಂಡಿದ್ದಿರಬಹುದು. ಮಕ್ಕಳ ಈ ಸಾಹಸಗಳಿಗೆ ತಡೆಗೋಡೆ ನಿರ್ಮಾಣದ ನಂತರ ತಡೆಬಿತ್ತು. ಆದರೂ ಕೂಡ ಆ ಬೀದಿಯಲ್ಲಿ ಓಡಾಡುವ ಶಾಲಾ ಮಕ್ಕಳ ಕಣ್ಣು ಬೇಲದ ಹಣ್ಣಿನ ಮೇಲಿರುವುದು ತಪ್ಪಿಲ್ಲ. ತಡೆಗೋಡೆಯನ್ನು ಕಟ್ಟುವ ಮೊದಲು ಬೇಲದ ಕಾಯಿಗಾಗಿ ಮಕ್ಕಳ ಕಲ್ಲೆಸೆತದಿಂದ ಮನೆಯ ಎಷ್ಟು ಹಂಚುಗಳು ಒಡೆದು ಹೋಗಿದ್ದವೊ ಅದೂ ಗೊತ್ತಿಲ್ಲ. ಇದೇನೆ ಇರಲಿ ಮೇಲುಕೋಟೆಯ ಒಬ್ಬ ಬಾಲಕನ ಜೀವನಕ್ಕೆ ಸುಂದರವಾದ ತಿರುವನ್ನು ಕೊಟ್ಟ ಹೆಗ್ಗಳಿಕೆ ಈ ಬೇಲದ ಮರದ್ದಾಗಿದೆ. ಈ ಬಾಲಕನ ಹೆಸರು ರಾಜ. ಅಂದು ಅವನ ವಯಸ್ಸು ಸುಮಾರು ಆರು ವರ್ಷ. ತಂದೆ-ತಾಯಿಯನ್ನು ಕಳೆದುಕೊಂಡಿದ್ದ ಆ ಬಾಲಕ ತಾತ ಮತ್ತು ಅಜ್ಜಿಯ ನೆರಳಿನಲ್ಲಿ ಬೆಳೆಯುತ್ತಿದ್ದನು. ತಾತನಿಗೆ ನೇಯ್ಗೆ ಕೆಲಸ. ಅಜ್ಜಿಗೆ ಹಳ್ಳಿಗಳಿಗೆ ಹೋಗಿ ಬೆಂಕಿಪೊಟ್ಟಣ, ಬೀಡಿ, ಅಡಿಕೆ, ವಿಳ್ಳೆದೆಲೆ, ಬಾಳೆಹಣ್ಣು ಮುಂತಾದವುಗಳನ್ನು ಮಾರಿಕೊಂಡು ಬರುವ ಕೆಲಸ. ಅಜ್ಜ-ಅಜ್ಜಿ ಇಬ್ಬರೂ ಕರ್ಮಯೋಗಿಗಳು. ಅವರಿಗೆ ರಾಜನಿಗಾಗಿ ಹೆಚ್ಚು ಸಮಯ ಕೊಡಲು ಆಗುತ್ತಿರಲಿಲ್ಲ. ಅವನು ಶಾಲೆಗೆ ಹೋಗುವುದಕ್ಕಿಂತ ಅದನ್ನು ತಪ್ಪಿಸಿಕೊಳ್ಳುವುದೇ ಹೆಚ್ಚಾಗಿತ್ತು. ಈ ವಿಷಯ ದಲ್ಲಿ ಅಜ್ಜ-ಅಜ್ಜಿ ಏನೂ ಮಾಡಲು ನಿಸ್ಸಹಾಯಕರಾಗಿದ್ದರು. ಒಂದು ದಿನ ಊರಿನ ಶಾಲಾ ಮಕ್ಕಳೆಲ್ಲರೂ ಶಾಲೆಯಲ್ಲಿ ಕುಳಿತು ವಿದ್ಯಾಭ್ಯಾಸ ಮಾಡುತ್ತಿದ್ದಾಗ, ಜನಪದ ನಿಲಯದ ಬೇಲದ ಮರದ ಅಡಿಯಲ್ಲಿ ತಿಪ್ಪೆಗುಂಡಿಯ ಮೇಲೆ ರಾಜಣ್ಣ ಬೇಲದ ಕಾಯಿ ಹುಡುಕುವ ಕಾಯಕದಲ್ಲಿ ತನ್ಮಯನಾಗಿದ್ದ. ನೀಲಿ ಚಡ್ಡಿ ಮತ್ತು ಬಿಳಿ ಅಂಗಿ ಧರಿಸಿದ್ದ ರಾಜಣ್ಣ ಸ್ಫುರದ್ರೂಪಿಯಾಗಿದ್ದ. ಧ್ವನಿಯಲ್ಲಿ ಎಳ್ಳಷ್ಟು ಕರ್ಕಶತೆ ಇರಲಿಲ್ಲ. ಒಂದು ಬೇಲದ ಕಾಯಿ ತೆಗೆದುಕೊಂಡು ಒಡೆದು ಹಸಿಕಾಯಿಯ ತಿರುಳನ್ನೇ ತಿನ್ನುತ್ತಿದ್ದ. ಆತನನ್ನು ಪ್ರೀತಿಯಿಂದ ಮಾತನಾಡಿಸಿ ನಿಲಯದ ಒಳಗೆ ಕರೆದುಕೊಂಡು ಬರಲಾಯಿತು. ಅವನ ಪೂರ್ವಾಪರ ಆಗಲೇ ಸ್ವಲ್ಪ ತಿಳಿದಿತ್ತು. ಆದಿನ ಶಾಲೆಗೆ ಏಕೆ ಹೋಗಿರಲಿಲ್ಲ ಎಂಬ ಪ್ರಶ್ನೆಗೆ ಅವನ ಉತ್ತರ ಮನಸ್ಸನ್ನು ನೋಯಿಸುವುದಂಥದ್ದಾಗಿತ್ತು. ಅವನ ಹೊಟ್ಟೆ ಹಸಿದಿತ್ತು. ಅವನಿಗೆ ಮನೆಯಲ್ಲಿ ಹೊಟ್ಟೆತುಂಬ ಆಹಾರ ಸಿಕ್ಕಿರಲಿಲ್ಲ. ಹಸಿವೇ ಆತನನ್ನು ಶಾಲೆಯತ್ತ ಒಯ್ಯಲು ನಿರಾಕರಿಸಿ ಅವನನ್ನು ಬೇಲದ ಮರದ ಅಡಿಯ ತಿಪ್ಪೆಯ ಮೇಲೆ ತಂದು ನಿಲ್ಲಿಸಿತ್ತು. ಈ ವಿಷಯವೆಲ್ಲಾ ಗೊತ್ತಾದ ಮೇಲೆ ಅವನನ್ನು ಕರುಣಾಗೃಹದಲ್ಲಿ ಇಟ್ಟುಕೊಳ್ಳಲಾಯಿತು. ಅಲ್ಲಿಯ ಅಂಗವಿಕಲ ಮಕ್ಕಳೊಂದಿಗೆ ಸೇರಿಕೊಂಡ, ಅವರ ಮಿತ್ರನಾದ ಮತ್ತು ಶಾಲೆಗೆ ಹೋಗಿ ಬರಲು ಪ್ರಾರಂಭಿಸಿದ. ಈ ವಿಷಯ ಆತನ ಅಜ್ಜ-ಅಜ್ಜಿಗೂ ಗೊತ್ತಾಯಿತು. ಅವರಿಬ್ಬರು ಬಿಡುವಾದಾಗ ನಿಲಯಕ್ಕೆ ಬಂದು ಸಂತೋಷ ವ್ಯಕ್ತಪಡಿಸಿದರು ಮತ್ತು ಅವನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕೆಂದು ಮತ್ತು ಮಾರ್ಗದರ್ಶಕರಾಗಬೇಕೆಂದು ತಮ್ಮದೇ ಕನಿಕರ ಧ್ವನಿಯಲ್ಲಿ ಕೇಳಿಕೊಂಡರು. ಮುಂದೆ ಅವರ ಮಾತಿನಂತೆ ನಡೆಯಿತು. ಅಜ್ಜಿ ಹಳ್ಳಿಯಲ್ಲಿ ವ್ಯಾಪಾರ ಮಾಡಿ ಹಿಂದಿರುಗುವಾಗ ಬಂದು ತನ್ನ ಮೊಮ್ಮಗನನ್ನು ಮಾತನಾಡಿಸಿ ಹೋಗುತ್ತಿದ್ದಳು. ಅಜ್ಜನು ಅದೇರೀತಿ. ರಾಜನ ಮೈ ಬಣ್ಣ ಸ್ವಲ್ಪ ಬಿಳಿಯದ್ದಾಗಿದ್ದರಿಂದ ಕರುಣಾಗೃಹದಲ್ಲಿದ್ದ ಇನ್ನಿಬ್ಬರು ಮೂವರು ರಾಜ ಹೆಸರಿನ ಬಾಲಕರಿಂದ ಗುರುತಿಸುವುದಕ್ಕಾಗಿ ಈತನಿಗೆ 'ಬಿಳಿರಾಜ' ಎಂದು ಪ್ರಚಲಿತವಾಯಿತು. ಕರುಣಾಗೃಹದಲ್ಲಿ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ. ಇವೆಲ್ಲದರ

ಪರಿಣಾಮವಾಗಿ ಅವನು ಸಾಹಸಿ ಯುವಕನಾಗಿ ಬೆಳೆದ. ಕಾಲಕ್ರಮೇಣ ಡ್ರೈವಿಂಗ್ ಲೈಸೆನ್ಸ್ ಪಡೆದು ಮೈಸೂರಿನಲ್ಲಿ ಖಾಸಗಿ ಕಂಪನಿಯೊಂದರ ಡ್ರೈವರ್ ಆಗಿ ಜೀವನ ನಿರ್ವಹಿಸಲು ಪ್ರಾರಂಭಿಸಿದ. ಆಗಾಗ್ಗೆ ಮೇಲುಕೋಟೆಗೆ ಬಂದು ತನ್ನ ಎಲ್ಲ ವಿಷಯಗಳನ್ನು ಮುಚ್ಚುಮರೆಯಿಲ್ಲದೆ ಹೇಳುತ್ತಿದ್ದ. ಮುಚ್ಚು ಮರೆ ಇಲ್ಲದೆ ಹೇಳಿದ ಸಂಗತಿಯಲ್ಲಿ ಓರ್ವ ಅಂತರ್‌ಜಾತಿ ಯುವತಿಯೊಂದಿಗೆ ಅವನು ನಡೆಸಿದ ಪ್ರಾಮವ್ಯವಹಾರವು ಒಂದಾಗಿತ್ತು. ಅವರಿಬ್ಬರು ಭೇಟಿಯಾದದ್ದು ಮೈಸೂರಿನಲ್ಲಿ. ಇವರಿಬ್ಬರ ವಿವಾಹಕ್ಕೆ ಹುಡುಗಿ ಮನೆಯವರ ವಿರೋಧವಿತ್ತು. ಆದರೆ ಇವರ ಭೇಟಿ ಮತ್ತು ಮಾತುಕತೆ ಗುಟ್ಟಾಗಿ ನಡೆದುಕೊಂಡು ಬರುತ್ತಿತ್ತು. ರಾಜ ತನ್ನ ಕಾರನ್ನು ತೆಗೆದುಕೊಂಡು ಹೊರಟಾಗ ತನ್ನ ಪ್ರೀತಿಯ ಹುಡುಗಿಯ ಮನೆಮುಂದೆ ಹಾರ್ನ್ ಬಾರಿಸುತ್ತಿದ್ದ. ಇದು ಆ ಹುಡುಗಿಗೆ ಪ್ರೀತಿಯ ಸಂದೇಶವಾಗಿರುತ್ತಿತ್ತು. ಹೀಗೆ ಗುಟ್ಟಾಗಿ ಬೆಳೆದ ಅವರ ಪ್ರೀತಿ ಕೊನೆಗೆ ವಿವಾಹದಲ್ಲಿ ಮುಕ್ತಾಯಗೊಂಡಿತು. ಸ್ವತಃ ಗಿರಿಜಮ್ಮನವರೇ ಮುಂದೆ ನಿಂತು ಮೈಸೂರಿನ ದೇವಸ್ಥಾನವೊಂದರಲ್ಲಿ ಅವರ ಮದುವೆ ಆಗುವಂತೆ ಮಾಡಿದರು. ಇಂದು ಬಿಳಿರಾಜ ಮತ್ತು ಹೆಂಡತಿ ಒಂದು ಗಂಡು ಒಂದು ಹೆಣ್ಣು ಮಕ್ಕಳ ತಂದೆ-ತಾಯಿಯರಾಗಿದ್ದಾರೆ. ಮಕ್ಕಳಿಗೆ ಒಳ್ಳೆ ವಿದ್ಯಾಭ್ಯಾಸ ಕೊಡಿಸುತ್ತ ಬೆಂಗಳೂರಿನಲ್ಲಿ ಸುಖವಾಗಿದ್ದಾರೆ. ಇಂದಿಗೂ ಬಿಳಿರಾಜ ಮತ್ತು ಅವನ ಹೆಂಡತಿ ಟ್ರಸ್ಟಿನ ಮೇಲೆ ಪ್ರೀತಿ ಮತ್ತು ಅಭಿಮಾನವಿರಿಸಿಕೊಂಡಿದ್ದಾರೆ. ಮದುವೆಯಾದ ಹೊಸದರಲ್ಲಿ ಜನಪದ ನಿಲಯಕ್ಕೆ ಬಂದಾಗ ರಾಜ ತನ್ನ ಹೆಂಡತಿಗೆ ಆ ಬೇಲದ ಮರವನ್ನು ತೋರಿಸುತ್ತ ನಗುನಗುತ್ತಾ ತನ್ನ ಬಾಲ್ಯದ ನೆನಪನ್ನು ಹೇಳುತ್ತಿದ್ದ. ಇಂದಿಗೂ ಕೂಡ ಮೇಲುಕೋಟೆ ಮಕ್ಕಳು ಬೇಲದ ಹಣ್ಣಿಗಾಗಿ ಶಾಲೆಗೆ ಹೋಗುವಾಗಾಗಲೀ ಮನೆಗೆ ಹಿಂದಿರುವಾಗಾಗಲೀ ಬೇಲದ ಹಣ್ಣನ್ನು ಕೇಳುತ್ತಾರೆ. ಯಾವ ರೀತಿ ತೋಟದಲ್ಲಿಯ ಹಣ್ಣಿನ ಗಿಡಗಳ ಮೇಲೆ ಹಕ್ಕಿಗಳ ಅಧಿಕಾರ ಇರುತ್ತದೋ ಅದೇ ರೀತಿ ಊರಿನ ಹಣ್ಣಿನ ಗಿಡದ ಮೇಲೆ ಊರಿನ ಮಕ್ಕಳ ಹಕ್ಕಿರುತ್ತದೆ. ಅದನ್ನು ತಪ್ಪಿಸುವುದು ಗಾಂಧೀ ಹೇಳಿದ ಸಪ್ತ ಪಾತಕಗಳಲ್ಲಿ ಒಂದಾಗಿರುತ್ತದೆ. ಈಗ ಜನಪದ ಸೇವಾ ಟ್ರಸ್ಟ್ ತನ್ನ ಸೇವಾ ಯಾತ್ರೆಯ ೫೦ ವರ್ಷ ಪೂರೈಸಿ ಆತ್ಮವಿಶ್ವಾಸದಿಂದ ಸೇವೆಯ ಹೊಸ ದಿಂಗತದತ್ತ ನೋಡುತ್ತಿರುವಾಗ ಆ ಬೇಲದ ಮರದ ಕಾಯಿಯ ಅಳತೆ ಕೂಡ ಚಿಕ್ಕಗೋಲಿಯಾಕಾರದಿಂದ ಕ್ರಿಕೆಟ್ ಬಾಲ್ ಆಕಾರಕ್ಕೆ ಬೆಳೆದು ನಿಂತಿದೆ. ಇದು ಕಾಕತಾಳೀಯವಾಗಿರಬಹುದು. ಆದದರೆ ಜಾಯಸ್ ಕಿಲ್ಮರ್ ಎಂಬ ಇಂಗ್ಲಿಷ್ ಕವಿ ಹೇಳಿದಂತೆ 'ಮರದಷ್ಟು ಸುಂದರವಾದ ಕವನವನ್ನು ತಾನೆಂದೂ ನೋಡಿಲ್ಲ. ಇಡೀ ದಿನ ತನ್ನ ಹಸಿದ ಬಾಯಿಯನ್ನು ಭೂಮಿಯ ಮಧುರ ಹಾಲಿನ ಎದೆಗೆ ಬಿಗಿಯಾಗಿ ಕಚ್ಚಿಕೊಂಡಿದೆ. ಅದು ಇಡೀ ದಿನ ದೇವರ ಕಡೆಗೆ ನೋಡುತ್ತದೆ. ಅದು ತನ್ನ ಎಲೆಗಳನ್ನು ಪ್ರಾರ್ಥನೆಗಾಗಿ ಚಾಚುತ್ತದೆ.' ಈ ಬೇಲದ ಮರದಲ್ಲಿ ವಸಂತ ಋತು ಪ್ರಾರಂಭವಾಗುತ್ತಿದ್ದಂತೆಯೇ ಕೋಗಿಲೆ ಬಂದು ಕುಳಿತು ತಮ್ಮ ಮಧುರ ಧ್ವನಿಯಲ್ಲಿ ಜನಪದ ಸೇವಾ ಟ್ರಸ್ಟ್‌ನ ಗಾಂಧೀ ಸಂದೇಶವನ್ನು ಸಾರುತ್ತಿರುವಂತೆ ಅನುಭವವಾಗುತ್ತಿದೆ. ಕೋಗಿಲೆ ವಂಶ ಬೆಳೆಯಲಿ.

(ಮುಂದುವರಿಯುವುದು...)

* * *

ಸರ್ವೋದಯ ಆಂದೋಲನದ ಮುನ್ನಡೆ

ಸರ್ವ ಸೇವಾ ಸಂಘದ ನೂತನ ಅಧ್ಯಕ್ಷರ ಪತ್ರ

ಆದರಣೀಯ ಶ್ರೀ ಕೌಲಗಿಯವರಿಗೆ,

ಒರಿಸ್ಸಾ ರಾಜ್ಯದ ರಾಸ್‌ಗೋವಿಂದಪುರ ತಾಲ್ಲೂಕಿನ ರಂಗಮಟಗ್ರಾಮದಲ್ಲಿ ನೀವೆಲ್ಲರೂ ಒಂದು ಸಶಕ್ತ ಸಂದೇಶ ಕೊಟ್ಟಿದ್ದೀರಿ. ಮತಭೇದವನ್ನು ಸರ್ವ ಸಮ್ಮತಿಯಿಂದ ಮತ್ತು ಶಾಂತಿ ಪೂರ್ವಕ ಬಗೆಹರಿಸುವ ಶಕ್ತಿ ಸರ್ವ ಸೇವಾ ಸಂಘದ ಬಳಗದ ಪೂರ್ಣರೂಪದಲ್ಲಿದೆ. ಈ ಪ್ರಕಾರದ ಶಕ್ತಿ ಪರಿಶುದ್ಧ ಚಿತ್ತ, ಸಂತುಲಿತ ಮಾನಸ ಮತ್ತು ವಿವೇಕ ಪೂರ್ಣ ಸದ್ಬುದ್ಧಿಯಿಂದಲೇ ಸಂಭವ. ನೀವು ನಿಮ್ಮ ಚಿತ್ತದಲ್ಲಿ ಆ ಸ್ವಚ್ಛ ಆನಂದದ ಅನುಭವ ಪಡೆದಿರಬಹುದು.

ನಾವೆಲ್ಲರೂ ಗಾಂಧೀ ವಿಚಾರದ ಕಾರ್ಯಕರ್ತರು. ಕಾರ್ಯಕರ್ತನಿಗೆ ಕಾರ್ಯಕ್ರಮ ಎಷ್ಟೊಂದು ಅಗತ್ಯವೊ ಅದೇ ರೀತಿ ತನ್ನ ಮನಸ್ಸನ್ನು ನಿರಂತರ ಪರಿಷ್ಕಾರ ಮತ್ತು ವಿಕಸಗೊಳಸುವುದು ಸಹ ಆಗಿದೆ. ಜೊತೆಗಾರರಲ್ಲಿ ಸಂದೇಹ, ಅವಿಶ್ವಾಸ ಮತ್ತು ಉದಾತ್ತ ಮಾಡವ ಅವಕಾಶವೂ ಕೂಡ ಅದರೊಂದಿಗೆ ಬರುತ್ತದೆ. ಅಂತ ಅವಕಾಶವನ್ನು ಅರಿತುಕೊಳ್ಳುತ್ತ ಅದರ ಸಕಾರಾತ್ಮಕ ಮಗ್ಗಲನ್ನು ಹಿಡಿಯುವ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ.

ನನ್ನ ಇಂದಿನ ಸ್ಥಿತಿ ಮತ್ತು ವಯಸ್ಸಿನಲ್ಲಿ ಅಧ್ಯಕ್ಷತೆಯ ಹೊಣೆಗಾರಿಕೆ ಸುಲಭವೆಂದು ಅನಿಸುವುದಿಲ್ಲ. ದೇಶದಲ್ಲಿ ಒಂದು ಕಡೆ ಆಡಳಿತದಲ್ಲಿ ಭ್ರಷ್ಟಾಚಾರ, ವಿಷಮತೆ, ಶೋಷಣೆ ಮತ್ತು ಹಿಂಸೆ ಮಿತಿಯಿಲ್ಲದೆ ಬೆಳೆಯುತ್ತಿವೆ. ಇದೇ ಸಮಯದಲ್ಲಿ ಅಲ್ಲಲ್ಲಿ ಸ್ಫೂರ್ತಿಯಿಂದ ಶಾಂತಿ ಪೂರ್ಣ ಆಂದೋಲನಗಳು ಕೂಡ ನಡೆಯುತ್ತಿವೆ ಎಂಬುದು ಆಶಾಪೂರ್ಣ ಸಂಗತಿ. ಜಾಗತಿಕ ಸ್ಥಿತಿಕೂಡ ಪೂರ್ಣತಃ ಹೀಗೆಯೇ ಇದೆ. ಒಂದ ದೊಡ್ಡ ಪರಿವರ್ತನೆಗಾಗಿ ವಿಶ್ವ ಮಾನಸ ಸಿದ್ಧವಾಗುತ್ತಿದೆ ಎಂದು ಅನಿಸುತ್ತದೆ. ಇಂಥ ಯುಗಾಂತರಿ ಕಾಲದಲ್ಲಿ ಸರ್ವ ಸೇವಾ ಸಂಘ ಸ್ಥಾನೀಯ ಹಂತದಿಂದ ಜಾಗತಿಕ ಹಂತದ ವರೆಗೆ ಮಹತ್ವಪೂರ್ಣ ಪಾತ್ರ ನಿಭಾಯಿಸಬೇಕಿದೆ. ಇದು ನನಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಸಮಾಜ ಮತ್ತು ನಾಗರೀಕ ಪರಿವರ್ತನೆಯ ಈ ಕಾರ್ಯ ಗೋವರ್ಧನವನ್ನು ಎತ್ತುವುದಕ್ಕೆ ಸಮಾನವಾಗಿದೆ. ಆ ಗೋವರ್ಧನ ಪರ್ವತವನ್ನು ಎತ್ತುವುದಕ್ಕೆ ನಮ್ಮ ಸಾಧನಕ್ಕೆ ಶಕ್ತಿ ಕೊಡಲು ಈ ಚಿಕ್ಕ ಸಮೂಹದಲ್ಲಿ ಶಕ್ತಿ ಬರಬೇಕಾದರೆ ಹಿರಿಯ ಮತ್ತು ಕಿರಿಯ, ವಯಸ್ಕ ಮತ್ತು ಯುವಕ ಎಲ್ಲರೂ ಕೈ ಜೋಡಿಸಿ ಹೆಗಲಿಗೆ ಹೆಗಲು ಹಚ್ಚಿ ಮತ್ತು ಮನಸ್ಸಿಗೆ ಮನಸ್ಸು ಜೋಡಿಸಿದಾಗ ಮಾತ್ರ ಬರುತ್ತದೆ. ಒಂದು ದೊಡ್ಡ ಉದ್ದೇಶ್ಯದ ಬೆಳಕು ಎದುರಿನಲ್ಲಿ ಹೊಳೆಯುತ್ತಿದ್ದರೆ ಮೂಲೆಗಳಲ್ಲಿ ಅಡಗಿರುವ ಕಷ್ಟಗಳ ಅಂಧಕಾರ ಕೂಡ ಗಮನಕ್ಕೆ ಬರುವುದಿಲ್ಲ. ಅವು ಆ ದೊಡ್ಡ ಬೆಳಕಿನ ಎದುರಿಗೆ ಬರಲು ಸಾಧ್ಯವಿಲ್ಲ.

ನೀವು ಸಂಘದ ಉಚ್ಛ ಆದರ್ಶಕ್ಕನುಸಾರವಾಗಿ ಸರ್ವ ಸಮ್ಮತಿಯಿಂದ ಅಧ್ಯಕ್ಷರನ್ನು ಆಯ್ಕೆ ಮಾಡಿದ್ದೀರಿ. ನೀವು ಇದನ್ನು ವಿಚಾರ ಪೂರ್ವಕವಾಗಿ ಮತ್ತು ಗಮನವಿಟ್ಟು ಮಾಡಿದ್ದೀರೆಂದು ನಂಬಿದ್ದೇವೆ. ಈ ನಿರ್ಣಯಕ್ಕೆ ಅನುಸಾರವಾಗಿಯೇ ನೀವು ಸರ್ವೋದಯ ಮಂಡಲಗಳಲ್ಲಿ ಮತ್ತು ೨೦೧೧–೧೨ನೇ ಸಾಲಿನಲ್ಲಿ ಕೈಗೊಳ್ಳುವ

ತೀರ್ಮಾನ ಮತ್ತು ಕಾರ್ಯಕ್ರಮಗಳನ್ನು ಸಹ ನಿಶ್ಚಯಿಸಿರುವಿರಿ. ಹಾಗೂ ಅವುಗಳ ಅನುಷ್ಠಾನಕ್ಕಾಗಿ ಸೊಂಟ ಕಟ್ಟುವಿರಿ. ಗಾಂಧೀಜಿಗೆ ಯಾರೂ ಶತ್ರುಗಳಿರಲಿಲ್ಲ. ಯಾರೊಂದಿಗೆ ಮತಭೇದ ಅಥವಾ ವಿಚಾರ ಭೇದ ಆಗುತ್ತಿತ್ತೋ ಅವರನ್ನು ಗಾಂಧೀಜಿ ಇನ್ನೂ ಹೆಚ್ಚಾಗಿ ತಮ್ಮೊಂದಿಗೆ ಕರೆದುಕೊಳ್ಳುತ್ತಿದ್ದರು. ಅವರ ಅದೇ ಪ್ರನಾಳಿಯನ್ನು ನಾವು ಹಾರ್ದಿಕತೆಯಿಂದ ಅನುಸರಿಸಬೇಕಾಗುವುದು. ಮುರಿಯುವುದಲ್ಲ. ಜೋಡಿಸುವ ತಿಳುವಳಿಕೆಯನ್ನು ಉಂಟುಮಾಡಿಕೊಳ್ಳ ಬೇಕಾಗುವುದು. ಸತ್ಯದ ದಾರಿಯಲ್ಲಿ ನಡೆಯುವವನು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗುತ್ತದೆ. ಇದೊಂದು ಸುವರ್ಣ ನಿಯಮವೆಂದು ನಾನು ತಿಳಿಯುತ್ತೇನೆ. ಒಂದು ವೇಳೆ ಯಾವುದೇ ವ್ಯಕ್ತಿಯ ವ್ಯವಹಾರದಲ್ಲಿ ಎಲ್ಲಿಯಾದರೂ ತಪ್ಪುಗಳಾದರೆ ತಮ್ಮ ಜೊತೆಯವರೆಂದು ತಿಳಿದು ಪ್ರೇಮ ಮತ್ತು ವಿಶ್ವಾಸ ಪೂರ್ವಕವಾಗಿ ವ್ಯಕ್ತಿಗತ ಹಂತದಲ್ಲಿ ಆ ತಪ್ಪನ್ನು ತಿದ್ದುವ ಪ್ರಯತ್ನ ಮಾಡಬೇಕಾಗುವುದು. ಪರಸ್ಪರರ ಗೌರವ ಮತ್ತು ಏಕತೆಯನ್ನು ಕಾಪಾಡಿಕೊಂಡು ಬರಲು ಇದು ಉತ್ತಮ ರೀತಿಯೆಂದು ನನ್ನ ಅಭಿಪ್ರಾಯ.

ನಾವು ಸರ್ವ ಸೇವಾ ಸಂಘವನ್ನು ಒಂದು ಸ್ವಚ್ಛ ಪಾರದರ್ಶಕ ಪರಸ್ಪರ ವಿಶ್ವಾಸದ ಆಧಾರ ನೆಲೆಯ ಮೇಲೆ ನಿಂತ ಸಂಸ್ಥೆಯನ್ನಾಗಿ ಮಾಡುವುದರಲ್ಲಿ ಎಲ್ಲರ ಶಕ್ತಿಯನ್ನು ಜೋಡಿಸಬೇಕಿದೆ. ನೀವೆಲ್ಲರೂ ನಿಮ್ಮ ನೆಲೆಗಳಲ್ಲಿ ಪ್ರಯತ್ನ ಮಾಡುವಿರೆಂದು ನನ್ನ ಪೂರ್ಣ ಆಸೆ.

ನಿಮ್ಮ,
ರಾಧಾ ಬೆಹನ್
ಅಧ್ಯಕ್ಷರು
ಸರ್ವ ಸೇವಾ ಸಂಘ, ವಾರ್ಧಾ

* * *

ಸರ್ವ ಸೇವಾ ಸಂಘದ ಅರ್ಧವಾರ್ಷಿಕ ಅಧಿವೇಶನ

ಸಂಘದ ನಿಯಮಾವಳಿಯಂತೆ ಸರ್ವೋದಯ ಕಾರ್ಯಕರ್ತರ ಲೋಕಸೇವಕರ ಮತ್ತು ಎಲ್ಲ ಸರ್ವೋದಯ ಮಂಡಳಿಗಳ ಅಧ್ಯಕ್ಷರ ಅರ್ಧವಾರ್ಷಿಕ ಅಧಿವೇಶನ ಕರ್ನಾಟಕದ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆದ ಅಧಿವೇಶನದ ನಂತರ ಒರಿಸ್ಸಾ ರಾಜ್ಯದ ಮಯೂರ್‌ಭಂಜ್ ಜಿಲ್ಲೆಯ ರಾಸಗೋವಿಂದಪುರ ತಾಲ್ಲೂಕಿನ ರಂಗಮಟ್ಟಿಯ ಎಂಬ ಗ್ರಾಮದಲ್ಲಿ ಮಾರ್ಚ್ ೧೮ ಮತ್ತು ೧೯ ರಂದು ನಡೆಯಿತು. ಆ ರಾಜ್ಯದ ಸರ್ವೋದಯ ಮಂಡಲಿಯು ಏರ್ಪಡಿಸಿತ್ತು. ಈ ಅಧಿವೇಶನದಲ್ಲಿ ಸುಮಾರು ಒಂದೂವರೆಸಾವಿರ ಕಾರ್ಯಕರ್ತರು ಭಾಗವಹಿಸಿದ್ದರು. ಬೆಳೆಯುತ್ತಿರುವ ಭ್ರಷ್ಟಾಚಾರದ ವಿರುದ್ಧ ಅಧಿವೇಶನವು ತನ್ನ ತೀವ್ರ ಚಿಂತೆಯನ್ನು ವ್ಯಕ್ತಪಡಿಸಿತು. ಮೂರು ವರ್ಷದ ಅಧ್ಯಕ್ಷ ಪದವಿಯಿಂದ ಡಾ॥ ಸುಗುಣ್ ಭರಟ್ ನಿವೃತ್ತರಾದರು. ಅವರ ಸ್ಥಾನಕ್ಕೆ ರಾಧಾ ಭಟ್‌ರವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ರಾಧಾ ಭಟ್ ವಿವಿಧ ಸರ್ವೋದಯ ಚಳುವಳಿಗಳಲ್ಲಿ ಕೆಲಸ ಮಾಡಿದ ಅನುಭವವುಳ್ಳವರಾಗಿದ್ದಾರೆ. ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರು ಆಗಿದ್ದಾರೆ. ಸರ್ವ ಸೇವಾ ಸಂಘದ ೬೨ ವರ್ಷಗಳ ಇತಿಹಾಸದಲ್ಲಿ ಸಂಘದ ಮೊದಲ ಮಹಿಳಾ ಅಧ್ಯಕ್ಷರಾಗಿ ಆಯ್ಕೆಯಾದ ಕೀರ್ತಿ ರಾಧಾ ಭಟ್‌ರವರದ್ದಾಗಿದೆ.

* * *

ಖಾದಿ ವಿಚಾರ

ಹಿಂದೂಸ್ಥಾನದ ಸ್ವಾತಂತ್ರ್ಯದ ಜೊತೆಗೆ 'ಸ್ವದೇಶಿ' ಶಬ್ದದ ಸಂಬಂಧ ೧೯೦೫ರಲ್ಲಿ ಇಂಗ್ಲೀಷರ ಮೂಲಕ ಬಂಗಾಳದ ವಿಭಜನೆಯ ಕಾರಣದಿಂದ ವಂಗಭಂಗ ಚಳುವಳಿ ನಡೆದಾಗ ಆಂದೋಲನ ನಡೆಯಿತು. ಅಂದಿನಿಂದ ಸ್ವಾತಂತ್ರ್ಯ ಮತ್ತು ಸ್ವದೇಶಿ ಒಂದು ಇನ್ನೊಂದರ ಮೇಲೆ ಆಧಾರಿತವಾಗಿಬಿಟ್ಟಿವೆ. ವಂಗಭಂಗದ ಚಳುವಳಿಯ ನಂತರ ಸ್ವದೇಶಿ ಇಲ್ಲದೆ ಸ್ವಾತಂತ್ರ್ಯ ಸಿಗುವುದಿಲ್ಲ ಎಂಬ ವಿಚಾರ ಹುಟ್ಟಿ ಎದುರಿಗೆ ಬಂದಿದೆ. ಅಥವಾ ಸ್ವಾತಂತ್ರ್ಯಾನಂತರ ಸ್ವದೇಶಿಯ ಸ್ವರೂಪ ಹೇಗಿರುತ್ತದೆ. ಗಾಂಧೀಜಿಯವರು ಬರುವ ಮೊದಲು ಸ್ವದೇಶಿಯ ವಿಷಯದಲ್ಲಿ ತುಂಬ ಸ್ಪಷ್ಟ ದೃಷ್ಟಿ ಕಂಡು ಬರುತ್ತಿರಲಿಲ್ಲ. ೧೯೧೫ರಲ್ಲಿ ಗಾಂಧೀಜಿಯವರ ಆಗಮನದ ನಂತರ ಈ ವಿಷಯಕ್ಕೆ ಬಹಳಷ್ಟು ವಿಸ್ತಾರ ದೊರೆಯಿತು. ಸ್ವಾತಂತ್ರ್ಯ ಮತ್ತು ಸ್ವದೇಶಿ ಬಗ್ಗೆ ಸರಿಯಾದ ಜಾಗೃತಿ ವಂಗಭಂಗದಿಂದ ಆಯಿತೆಂದು ಗಾಂಧೀ ಕೂಡ ಒಪ್ಪುತ್ತಾರೆ. ವಂಗಭಂಗದ ಸಮಯದಲ್ಲಿ ಹುಟ್ಟಿದ ಸ್ವದೇಶಿ ಆಂದೋಲನ ಭಾರತದ ಸ್ವಾತಂತ್ರ್ಯಕ್ಕಾಗಿ ಒಂದು ಹೊಸ ಅಲೆಯನ್ನು ಉಂಟುಮಾಡಿತು. ಸ್ವದೇಶಿಯ ಪ್ರಾರಂಭ ಖಾದಿಯಿಂದ ಪ್ರಾರಂಭವಾಗುತ್ತದೆ. ಸ್ವದೇಶಿ ಮತ್ತು ಖಾದಿ ಬಗ್ಗೆ ಗಾಂಧೀಜಿ ಹೀಗೆ ಬರೆಯುತ್ತಾರೆ.

"ಸ್ವದೇಶಿ ಶಬ್ದ ಅತಿ ಪರಿಚಿತವಿದೆ. ಇದೊಂದು ವ್ಯಾಪಕಾರ್ಥ ಶಬ್ದ. ಇಂಥ ಶಬ್ದದ ಪ್ರಭಾವ ಒಳ್ಳೆಯದಾಗಲೂ ಬಹುದು ಮತ್ತು ಕೆಟ್ಟದಾಗಲೂ ಬಹುದು. ಸಮುದ್ರ ವ್ಯಾಪಕವಾಗಿದೆ. ಅದು ಇಲ್ಲದೇ ಹೋಗಿದ್ದರೆ ನಮಗೆ ಪ್ರಾಣವಾಯುವೇ ಸಿಗುತ್ತಿರಲಿಲ್ಲ. ಸಮುದ್ರ ಅಗ್ನಿಯಂತೆ ಸರ್ವಭಕ್ಷಕ. ಅದರಲ್ಲಿ ಎಷ್ಟೊಂದು ಕೊಳಕು ಗಲೀಜು ಸಿಗುತ್ತದೆ ಎಂದರೆ ಅದಕ್ಕೆ ಅಂತ್ಯವೇ ಇಲ್ಲ. ಆದರೂ ಕೂಡ ಅದು ವಿಶುದ್ಧವಾಗಿಯೇ ಇರುತ್ತದೆ. ದಂಡೆಯನ್ನು ಬಿಡುತ್ತಲೇ ಅದರ ನೀರು ಕನ್ನಡಿಯಂತೆ ಪಾರದರ್ಶಕವಾಗಿ ಕಂಡು ಬರುತ್ತದೆ. ಸೂರ್ಯನ ಕಿರಣಗಳಲ್ಲಿ ಅದರ ನೊರೆ ಮುತ್ತುರತ್ನಗಳಂತೆ ಹೊಳೆಯುತ್ತದೆ. ಮುತ್ತುರತ್ನದ ಹೊಳಪು ಅದರ ಮುಂದೆ ಏನೂ ಅಲ್ಲ. ಸಮುದ್ರದ ಮೇಲೆ ನೌಕೆ ತೇಲುತ್ತದೆ. ಒಂದು ವೇಳೆ ಅದರ ನೀರನ್ನು ಯಾರಾದರೂ ಕುಡಿದರೆ ವಾಂತಿಯಾಗದೇ ಇರುವುದಿಲ್ಲ. ಕುಡಿಯುವ ನೀರಂತೂ ಬಾವಿಗಳಲ್ಲಿ ಚಿಕ್ಕ ಚಿಕ್ಕ ಕೆರೆಗಳಲ್ಲಿ ಸಿಗುತ್ತದೆ. ಇದೇ ರೀತಿ ಸ್ವದೇಶಿ ಕೂಡ ಒಂದು ಸಮುದ್ರ, ಮಹಾಸಾಗರ. ಅದರ ಸಹಜ ಉಪಯೋಗದಿಂದ ದೇಶ ಮುನ್ನಡೆಯಬಹುದು. ವ್ಯಾಖ್ಯೆಯ ದೃಷ್ಟಿಯಿಂದ ಅದು ಸುಂದರವಾದ ಶಬ್ದವೇನೋ ಹೌದು. ಆದರೆ ಇಂದು ನಾವು ಸ್ವದೇಶಿಯ ಸಮುದ್ರದಲ್ಲಿ ಜಿಗಿದರೆ ಮುಳುಗಿ ಹೋಗುವೆವು. ಈಗಂತೂ ಅದನ್ನು ಪ್ರಾಪ್ತ ಮಾಡಿಕೊಳ್ಳುವುದೆಂದರೆ ಅದು ನಮ್ಮ ಶಕ್ತಿಯ ಹೊರಗಿರುವಂಥ ಮನೋರಥ. ಸ್ವದೇಶಿಯ ಹೆಸರಿನಲ್ಲಿ ನಾವು ಸ್ವದೇಶಿ ಬೀಗ ತಯಾರಿಸುತ್ತೇವೆ ಅಥವಾ ಖರೀದಿಸುತ್ತೇವೆ ಎಂದು ಕೆಲವರು ಹೇಳುತ್ತಾರೆ. ಹೊಸ ಚಾಕು ತಯಾರಿಸುವ ಪ್ರಯತ್ನ ಮಾಡುತ್ತಾರೆ. ಕೆಲವರು ಸ್ವದೇಶಿ ಕಾಗದ ತಯಾರಿಸುತ್ತಾರೆ. ಇನ್ನು ಕೆಲವರು ಹೊಳಪು ಪದಾರ್ಥಗಳನ್ನು ತಯಾರಿಸುತ್ತೇವೆ ಎಂದರೆ, ಇನ್ನು ಕೆಲವರು ಓಲ್ಡರ್ ಹಾದಿ ವಸ್ತುಗಳ ಇಚ್ಛೆಯನ್ನು ಪ್ರಕಟಿಸಿ ಸ್ವದೇಶಿ ಭಾವನೆಯ ಘೋಷಣೆ ಮಾಡುತ್ತಾರೆ. ಅದರಿಂದ ದೇಶದ ಕೆಲಸ ನಡೆಯುವುದಿಲ್ಲ. ಅದ್ದರಿಂದ ಸ್ವದೇಶಿ ಕೆಲಸ ಮತ್ತು ಹೆಸರು ಎರಡು ಭ್ರಷ್ಟವಾಗುತ್ತವೆ.

ಮನೆ ಕಟ್ಟುವ ಕಾರ್ಮಿಕ ಮೊದಲೇ ಬಾಗಿಲುವಾಡ, ಕಿಟಕಿಗಳು, ಬಾಗಿಲುಗಳು, ಅಲಂಕಾರ ಇತ್ಯಾದಿಗಳ ಗುಂಗಿನಲ್ಲಿ ಬೀಳುವುದಿಲ್ಲ. ಮೊದಲು ಅವನು ಅಡಿಪಾಯ ಹಾಕುತ್ತಾನೆ. ನಂತರ ಗೋಡೆ ಕಟ್ಟುತ್ತಾನೆ. ಮನೆ ಪೂರ್ಣಗೊಂಡ ಮೇಲೆ ಸುಣ್ಣ ಬಣ್ಣ ಮಾಡುತ್ತಾನೆ. ಇದೇ ಸ್ಥಿತಿ ಸ್ವದೇಶಿ ರಚನೆಯದ್ದಾಗಿದೆ."

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎಂ. ರಾಜು – ಶಿವಮೊಗ್ಗ
ಶ್ರೀ ಹೊ.ನಂ.ಜಯದೇವೇಗೌಡ – ಹಾಸನ
ಡಾ॥ ಸಿ.ಜಿ. ನರಸಿಂಹನ್ – ಮೈಸೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಡಾ॥ ಎಂ.ಎಸ್.ನಾಗರಾಜರಾವ್; ಶ್ರೀಮತಿ ಸರ್ವಮಂಗಳಾ
ಡಾ॥ ಪ್ರಭುಶಂಕರ – ಮೈಸೂರು
ಶ್ರೀಮತಿ ಎಂ. ಮನೋರಮಾ – ಶಿವಮೊಗ್ಗ
ಶ್ರೀಮತಿ ಅನಿತಾ ಶಿವರಾಮ ಪೈಲೂರು;
ಶ್ರೀ ಗೋಪಾಲಕೃಷ್ಣ ಜೋಷಿ – ಧಾರವಾಡ
ಶ್ರೀ ಎನ್. ಪ್ರಭಾಕರ್; ಪ್ರೊ॥ ಕ್ಯಾಪ್ಟನ್ ವಿ. ಅನ್ನಪೂರ್ಣ – ಬೆಂಗಳೂರು
ಶ್ರೀ ಯು.ಗಂಗಾಧರ್ – ಅಳಿಕೆ
ಶ್ರೀ ಎನ್. ಮಹದೇವಪ್ಪ – ಪಾಂಡವಪುರ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

– ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ



KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ... 51/ ಶ್ರೀ. ಎ. ಕೆ. ಸೀತಾರಾಂ
#358, 3ನೇ ಕ್ರಾಸ್
14ನೇ ಮುಖ್ಯರಸ್ತೆ
ಸರಸ್ವತಿ ಪುರಂ
ಮೈಸೂರು - 570009

Sender

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.